# ಕನ್ನಡ - I

# KANNADA - I

## ತರಗತಿ STANDARD VIII

ಕೇರಳ ಸರಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2016

KT-257-1/Kannada-8 AT

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗಾ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗಾ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by :*

**State Council of Educational Research and Training (SCERT)**
Poojappura, Thiruvananthapuram 695012, Kerala
*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
First Edition : 2015, Reprint : 2016
Typesetting : SCERT
Lay out : SCERT
Cover design : SCERT
Printed at : KBPS, Kakkanad, Kochi-30
© Department of Education, Government of Kerala

ಒಲವಿನ ಮಕ್ಕಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ-ವಿನಯದಿಂದ ಕೂಡಿದ ಮಾತು ಎಲ್ಲರನ್ನೂ ಸೆಳೆಯುತ್ತದೆ. ನಮ್ಮ ಮಾತುಕೃತಿಗಳು ನಮ್ಮ ವ್ಯಕ್ತಿತ್ವ ಮತ್ತು ಚಿಂತನೆಗಳನ್ನು ಹೊರಗೆಡಹುತ್ತವೆ ಅಲ್ಲವೇ? ಕನ್ನಡ ನುಡಿಯು ನಮ್ಮನ್ನೆಲ್ಲ ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನಮ್ಮ ಕನ್ನಡ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕು. ಅದಕ್ಕಾಗಿ ನಿಮ್ಮ ಮನಸೂರೆಗೊಳಿಸುವಂತಹ ಕತೆ, ಕವಿತೆ, ನಾಟಕ ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಈ ಪಠ್ಯಪುಸ್ತಕದಲ್ಲಿ ಅಳವಡಿಸಿಕೊಳ್ಳಲಾಗಿದೆ. ನಿಮ್ಮ ಭಾವನೆಗಳು ಮತ್ತು ಅನುಭವಗಳನ್ನು ಪ್ರಕಟಿಸಲು ಈ ಪಠ್ಯಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಈ ಪಠ್ಯಪುಸ್ತಕದಲ್ಲಿರುವ ಉತ್ತಮ ಮೌಲ್ಯಗಳು ಮತ್ತು ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡ ಕುಸುಮದ ಕಂಪನ್ನು ಪಸರಿಸಲು ನಿಮಗೆಲ್ಲರಿಗೂ ಸಾಧ್ಯವಾಗಲಿ ಎಂದು ಹಾರೈಸುತ್ತೇನೆ

ಪ್ರೀತಿಪೂರ್ವಕ,

**ಡಾ. ಪಿ.ಎ.ಫಾತಿಮ**

ನಿರ್ದೇಶಕರು

ಎಸ್.ಸಿ.ಇ.ಆರ್.ಟಿ., ಕೇರಳ

# TEXT BOOK DEVELOPMENT COMMITTEE

## KANNADA -I

## STANDARD 8

Participants : Kavitha K., G.V.H.S.S. Kunjathur
Radhakrishna M., G.V.H.S.S. Mulleria
Rohithakshi K.B., B.E.M.H.S.S. Kasaragod
Shashikala K., G.H.S.S., Paivalike Nagar
Suneetha A., G.H.S.S. Mangalpady
Ushakumari B., G.F.H.S.S. Bekal

Experts : Dr. P. Srikrishna Bhat,
Rtd. H.O.D. Kannada, Govt. College, Kasaragod

P. Shivashankara,
Asst. Professor, GPM Govt. College, Manjeshwara

Artists : 'Bala'madhurkana, Rtd. Drawing teacher, Kumaramangala
Sathyanarayana, G.H.S.S. Mangalpady
Venkat Bhat Edneeru

Academic Co-Ordinator

Dr. Faisal Mavulladathil, Research Officer, SCERT, Thiruvananthapuram


ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| | | ಪುಟಸಂಖ್ಯೆ |
|---|---|---|
| ಘಟಕ -1. | ಪ್ರಕೃತಿಯ ಮಡಿಲಲ್ಲಿ | 7-28 |
| | • ಒಂದು ಮುಂಜಾವು | |
| | • ನಮ್ಮ ಊರಿನ ರಸಿಕರು | |
| | • ಗುಬ್ಬಿಯ ಹುಡುಕಾಟದಲ್ಲಿ | |
| | • ವಿಷವರ್ತುಲ | |
| ಘಟಕ -2 | ಬದುಕಿನ ಸವಾಲುಗಳು | 29-44 |
| | • ತಾಳಿದವನು ಬಾಳಿಯಾನು | |
| | • ನಗುನಗುತ ಹಗುರಾಗು | |
| | • ಫುಟ್‌ಬಾಲ್ ತರಬೇತಿ | |
| ಘಟಕ 3. | ಬಾಂಧವ್ಯದ ಸೆಲೆ | 45-64 |
| | • ಕಣ್ಣಾರೆ ಕಂಡರೂ... | |
| | • ಕೈತುತ್ತು ತಿನಿಸಿದ್ದೆ | |
| | • ಮಾನವತೆ | |
| | • ಭರತನ ಭ್ರಾತೃಪ್ರೇಮ | |
| ಘಟಕ - 4. | ವಿಜ್ಞಾನ ಜಗತ್ತು | 65-82 |
| | • ಅಂತರಜಾಲ ಮತ್ತು ಜೀವಜಾಲ | |
| | • ಪ್ಲಾಸ್ಟಿಕೋಪಾಖ್ಯಾನ | |
| | • ಪರಿಸರ ಸಂಹಾರ | |
| ಘಟಕ - 5 | ಪ್ರೇರಕ ಶಕ್ತಿಗಳು | 83-104 |
| | • ಹಿಟ್ಟಿನ ಋಣ | |
| | • ಅಂಬೇಡ್ಕರ್ | |
| | • ಅಕ್ಷರ ಸಂತ ಹರೇಕಳ ಹಾಜಬ್ಬ | |
| | • ಏಕಲವ್ಯನ ಸಾಧನೆ | |
| ಘಟಕ - 6 | ಪರಸ್ಪರಾವಲಂಬನ | 105-120 |
| | • ದೇವರು ಹಚ್ಚಿದ ದೀಪ | |
| | • ವಿಶೇಷ ಬಹುಮಾನ | |
| | • ಅಕ್ಕ | |


KT-257-2/Kannada-8 AT

**ಘಟಕ – 1**

# ಪ್ರಕೃತಿಯ ಮಡಿಲಲ್ಲಿ

## ಕಲಿಕಾ ಸಾಧನೆಗಳು

- ಕಥೆ, ಕವನ ಮೊದಲಾದ ಸಾಹಿತ್ಯಕೃತಿಗಳಲ್ಲಿರುವ ಸೌಂದರ್ಯಾಂಶಗಳನ್ನು ತಿಳಿದುಕೊಂಡು ಸ್ವಂತ ದೃಷ್ಟಿಕೋನದೊಂದಿಗೆ ಮೌಖಿಕವಾಗಿ ಮತ್ತು ಲಿಖಿತವಾಗಿ ಮಂಡಿಸುವುದು.
- ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಚರ್ಚೆಗಳು, ಸಂವಾದಗಳು ಇತ್ಯಾದಿಗಳಲ್ಲಿ ಭಾಗವಹಿಸಿ ಆಶಯವನ್ನು ನಿರರ್ಗಳವಾಗಿ ಮಂಡಿಸುವುದು.
- ಗದ್ಯ ಮತ್ತು ಪದ್ಯಗಳ ಅರ್ಥವನ್ನು ತಿಳಿದುಕೊಂಡು ನಿರರ್ಗಳವಾಗಿ ಓದುವುದು ಮತ್ತು ಹಾಡುವುದು.
- ನಿಯತಕಾಲಿಕಗಳಲ್ಲಿ ಬರುವ ವ್ಯಂಗ್ಯಚಿತ್ರಗಳು, ಅಡಿಟಿಪ್ಪಣಿಗಳು ಇತ್ಯಾದಿಗಳ ಆಶಯವನ್ನು ತಿಳಿದುಕೊಂಡು ಆಸ್ವಾದಿಸಿ ಸಮಾನವಾದುವುಗಳನ್ನು ರಚಿಸುವುದು.
- ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಭಾಷಣ, ಆಶುಭಾಷಣ, ಉಪನ್ಯಾಸ ಮೊದಲಾದುವುಗಳನ್ನು ವಿಭಿನ್ನರೀತಿಯಲ್ಲಿ ಮಂಡಿಸುವುದು.
- ಸೂಕ್ತವಾದ ಪದ, ಪ್ರಯೋಗ, ಶೈಲಿ ಇತ್ಯಾದಿಗಳನ್ನು ಬಳಸಿಕೊಂಡು ಕಥೆ, ಕವಿತೆ, ನಾಟಕ ಇತ್ಯಾದಿ ವಿವಿಧ ಭಾಷಾ ವ್ಯವಹಾರ ಪ್ರಕಾರಗಳನ್ನು ರಚಿಸುವುದು ಮತ್ತು ಪರಿಷ್ಕರಿಸಿ ಪ್ರಕಟಿಸುವುದು.
- ಪತ್ರಿಕೆಗಳು ಮತ್ತು ದೃಶ್ಯ ಮಾಧ್ಯಮಗಳ ಕಾರ್ಯಕ್ರಮಗಳನ್ನು ವಿಮರ್ಶಾತ್ಮಕವಾಗಿ ಅವಲೋಕಿಸುವುದು.

# ಧರೆ




ತರುಲತೆಗೆ ನೀರುಣಿಸಿ
ಸೊಗಗೊಡಲು ಕಾತರಿಸಿ
ನಿಂತಿಹಳು ವಸುಂಧರೆ
ಹನಿಸೋನೆ ಇಳಿದಿಳಿದು
ಮೈಮನವು ತಣಿದಿರಲು
ಹರುಷವಾಯಿತು
ಸುರಿಯೆ
ಮುಸಲಧಾರೆ

- ಮೂನಾ

### ಆಶಯ ಬರೆಯಿರಿ.

- ಮೇಲಿನ ಕವನದ ಆಶಯವನ್ನು ಬರೆದು ಅದರ ಕುರಿತಾದ ನಿಮ್ಮ ಅನಿಸಿಕೆಗಳನ್ನು ತರಗತಿಯಲ್ಲಿ ಮಂಡಿಸಿರಿ.

1

# ಒಂದು ಮುಂಜಾವು

ಒಂದು ಮುಂಜಾವಿನಲಿ ತುಂತುರಿನ ಸೋನೆವಳೆ
'ಸೋ' ಎಂದು ಶ್ರುತಿಹಿಡಿದು ಸುರಿಯುತಿತ್ತು.
ಅದಕೆ ಹಿಮ್ಮೇಳವೆನೆ ಸೋಸಿ ಬಹ ಸುಳಿಗಾಳಿ
ತೆಂಗು ಗರಿಗಳ ನಡುವೆ ನುಸುಳುತಿತ್ತು.


ಇಳೆವೆಣ್ಣು ಮೈದೊಳೆದು ಮಕರಂದದರಿಶಿಣದಿ
ಹೂಮುಡಿದು ಮದುಮಗಳ ಹೋಲುತಿತ್ತು;
ಮೂಡಣದಿ ನೇಸರನ ನಗೆಮೊಗದ ಶ್ರೀಕಾಂತಿ
ಬಿಳಿಯಮೋಡದ ಹಿಂದೆ ಹೊಳೆಯುತಿತ್ತು

ಹುಲ್ಲೆಸಳು, ಹೂಪಕಳೆ, ಮುತ್ತು ಹನಿಗಳ ಮಿಂಚು
ಸೊಡರಿನಲಿ ಆರತಿಯ ಬೆಳಗುತಿತ್ತು;
ಕೊರಲುಕ್ಕಿ ಹಾಡುತಿಹ ಚಿಕ್ಕಪಕ್ಕಿಯ ಬಳಗ
'ಶುಭಮಸ್ತು' 'ಶುಭಮಸ್ತು' - ಎನ್ನುತಿತ್ತು.


ತಳಿರ ತೋರಣದಲ್ಲಿ ಬಳ್ಳಿ ಮಾಡಗಳಲ್ಲಿ
ದುಂಬಿಗಳ ಓಂಕಾರ ಹೊಮ್ಮುತಿತ್ತು;
ಹಚ್ಚ ಹಸುರಿನ ಪಚ್ಚೆ ನೆಲಗಟ್ಟನಂಗಳದಿ
ಚಿಟ್ಟೆ ರಿಂಗಣಗುಣಿತ ಹಾಕುತಿತ್ತು.

ಉಷೆಯ ನುಣ್ಗದಪಿನಲಿ ಹರ್ಷ ಬಾಷ್ಪಗಳಂತೆ
ಮರದ ಹನಿ ತಟಪಟನೆ ಉದುರುತಿತ್ತು;
ಸೃಷ್ಟಿ ಲೀಲೆಯೊಳಿಂತು ತಲ್ಲೀನವಾದ ಮನ
ಮುಂಬಾಳ ಸವಿಗನಸ ನೆನೆಯುತಿತ್ತು.

- **ಚೆನ್ನವೀರ ಕಣವಿ**



## ಚೆನ್ನವೀರ ಕಣವಿ



ಚೆನ್ನವೀರ ಕಣವಿಯವರು ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ ೧೯೨೮ರ ಜೂನ್ ೨೮ರಂದು ಜನಿಸಿದರು. ತಂದೆ ಸಕ್ಕರೆಪ್ಪ; ತಾಯಿ ಪಾರ್ವತವ್ವ. ಧಾರವಾಡದಲ್ಲಿ ಮಾಧ್ಯಮಿಕ ಹಾಗೂ ಕಾಲೇಜು ಶಿಕ್ಷಣ ಪೂರೈಸಿದ ಕಣವಿಯವರು ೧೯೫೨ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಪಡೆದರು. ಆ ವಿಶ್ವವಿದ್ಯಾನಿಲಯದ ಪ್ರಸಾರಾಂಗ ವಿಭಾಗದ ಕಾರ್ಯದರ್ಶಿಯಾಗಿ ನೇಮಕಗೊಂಡ ಇವರು ೧೯೫೬ರ ವೇಳೆಗೆ ಅದೇ ವಿಭಾಗದ ನಿರ್ದೇಶಕರಾಗಿ ೧೯೮೩ರ ವರೆಗೆ ಸೇವೆ ಸಲ್ಲಿಸಿದರು. ಜೀವಧ್ವನಿ, ಭಾವಜೀವಿ, ಆಕಾಶಬುಟ್ಟಿ, ಮಧುಚಂದ್ರ, ಮಣ್ಣಿನ ಮೆರವಣಿಗೆ, ದೀಪಧಾರಿ, ನೆಲಮುಗಿಲು, ಹೊಂಬೆಳಕು ಮೊದಲಾದುವುಗಳು ಇವರ ಪ್ರಕಟಿತ ಕವನ ಸಂಕಲಗಳಾಗಿವೆ. ಸಾಹಿತ್ಯಚಿಂತನ, ಕಾವ್ಯಾನುಸಂಧಾನ, ಸಮತೋಲನ ಮೊದಲಾದುವು ಇವರ ವಿಮರ್ಶಾ ಕೃತಿಗಳು. ಹಕ್ಕಿಪುಕ್ಕ ಮತ್ತು ಚಿಣ್ಣರ ಲೋಕ ತೆರೆಯೋಣ ಇವರ ಮಕ್ಕಳ ಸಾಹಿತ್ಯವಾಗಿವೆ. ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಕವಿರತ್ನ ಪ್ರಶಸ್ತಿ, ಬಸವಗುರು ಕಾರುಣ್ಯ ಪ್ರಶಸ್ತಿ ಮೊದಲಾದುವು ಕಣವಿಯವರಿಗೆ ಸಂದ ಪ್ರಶಸ್ತಿಗಳಾಗಿವೆ. ಇವರು ೧೯೯೬ರಲ್ಲಿ ಹಾಸನದಲ್ಲಿ ನಡೆದ ೬೫ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಒಂದು ಮುಂಜಾವು ಎಂಬ ಕವನವನ್ನು ಕಣವಿಯವರ ಆಕಾಶಬುಟ್ಟಿ ಎಂಬ ಕವನಸಂಕಲನದಿಂದ ಆರಿಸಲಾಗಿದೆ.

### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಇಳೆವೆಣ್ಣು ಮದುಮಗಳನ್ನು ಹೋಲುತ್ತಿರಲು ಕಾರಣವೇನು?
2. ದುಂಬಿಗಳ ಓಂಕಾರ ಎಲ್ಲಿ ಹೊಮ್ಮುತ್ತಿತ್ತು?
3. ಮರದಿಂದ ತಟಪಟನೆ ಉದುರುತ್ತಿದ್ದ ಹನಿಗಳು ಹೇಗೆ ಕಾಣಿಸುತ್ತಿದ್ದುವು?

### ಆಸ್ವಾದನ ಟಿಪ್ಪಣಿ ಬರೆಯಿರಿ

ಕೆಳಗೆ ಕೊಡಲಾದ 'ಒಂದು ಮುಂಜಾವು' ಕವನದ ಸಾಲುಗಳ ಆಸ್ವಾದನ ಟಿಪ್ಪಣಿ ಬರೆಯಿರಿ.

ಹುಲ್ಲೆಸಳು, ಹೂ ಪಕಳೆ, ಮುತ್ತು ಹನಿಗಳ ಮಿಂಚು
ಸೊಡರಿನಲಿ ಆರತಿಯ ಬೆಳಗುತಿತ್ತು;
ಕೊರಲುಕ್ಕಿ ಹಾಡುತಿಹ ಚಿಕ್ಕಪಕ್ಕಿಯ ಬಳಗ
'ಶುಭಮಸ್ತು' 'ಶುಭಮಸ್ತು' - ಎನ್ನುತಿತ್ತು.

### ಸಾಲನ್ನು ಗುರುತಿಸಿರಿ

ಕೆಳಗೆ ಕೊಡಲಾದ ಆಶಯಗಳಿಗೆ ಸಮಾನವಾದ ಸಾಲುಗಳನ್ನು ಕವನದಿಂದ ಆಯ್ದು ಬರೆಯಿರಿ.

1. ಒಂದು ದಿನ ಬೆಳಗ್ಗಿನ ಹೊತ್ತಿನಲ್ಲಿ ಹನಿಮಳೆ 'ಸೋ' ಎಂಬ ನಾದದೊಂದಿಗೆ ಸುರಿಯುತ್ತಾ ಇತ್ತು.
2. ಪೂರ್ವದಿಕ್ಕಿನಲ್ಲಿ ಸೂರ್ಯನ ನಗುಮುಖದ ಸೊಬಗು ಬಿಳಿಯ ಮುಗಿಲಿನ ಹಿಂದೆ ಶೋಭಿಸುತ್ತಿತ್ತು.
3. ಚಿಟ್ಟೆಯು ಹಸುರು ಬಯಲಿನಲ್ಲಿ ಸುತ್ತುವರಿದು ಕುಣಿಯುತ್ತಿತ್ತು.

### ಕೆಳಗೆ ಕೊಡಲಾದ ಕವನದ ಸಾಲುಗಳನ್ನು ಸಾಧ್ಯವಿರುವಷ್ಟು ಮುಂದುವರಿಸಿ ಬರೆಯಿರಿ.

ಬಾನಿಂದಿಳಿದನು
ಬೆಳಗುವ ಸೂರ್ಯನು
ಸಂಜೆಯ ಸಮಯದಲಿ ।

ಆಡುವ ಮಕ್ಕಳ
ಬಳಗವು ಸಾಗಿತು
ಮನೆಕಡೆ ನಲಿಯುತಲಿ

........................................

...........................................

...........................................

2

# ನಮ್ಮ ಊರಿನ ರಸಿಕರು

ನಮ್ಮ ಊರು ಮಲೆನಾಡಿನ ಸೆರಗಿನಲ್ಲಿದೆ. ಮಧ್ಯಕ್ಕಿಂತಲೂ ಯಾವುದರಲ್ಲೂ ಯಾವಾಗಲೂ ಸೆರಗು ಹೆಚ್ಚು ಸೊಗಸು. ಮಲೆನಾಡಿನ ಸೂರ್ಯರಶ್ಮಿಯಿಲ್ಲದ, ಮಿತಿಮೀರಿದ ಜಡಿಮಳೆಯೂ ಕೆಸರೂ ಮೈಯನ್ನು ಕಡಿಯುವ ಕುಳಿರ್ಗಾಳಿಯೂ ಅಲ್ಲಿಲ್ಲ. ಬಯಲುಸೀಮೆಯ ಉರಿಬಿಸಿಲೂ ಬೆಂಕಿಯ ಕಾದ ಧೂಳೂ ಅಲ್ಲಿಲ್ಲ. ಮಲೆನಾಡಿನ ಮಳೆಯ ಕೊಂಚಭಾಗ ಮಾತ್ರ ನಮ್ಮೂರಿಗೆ ಬೀಳುತ್ತದೆ. ಬೇಸಗೆಯ ಉರಿಬಿಸಿಲಿನ ತುದಿ ಮಾತ್ರ ಈ ಸೆರಗನ್ನು ಸೋಕುತ್ತದೆ. ಹಸುರಾದ ಚಿಗುರಿನಿಂದ ಕೂಡಿದ ಮರದ ಮಧ್ಯದಲ್ಲಿ ಎಲ್ಲೋ ಹಕ್ಕಿಯೊಂದು ಕೂಗುತ್ತಿದ್ದರೆ, ಎಲೆಗಳ ಮರೆಯಲ್ಲಿ ಹೂ ಒಂದು ಅರಳಿ ಸುವಾಸನೆಯನ್ನು ಹೊರಕ್ಕೆ ಸೂಸುತ್ತಿದ್ದರೆ ಹೇಗೋ ಹಾಗೆ, ನಮ್ಮ ಊರು ಸುತ್ತಲೂ ಬೆಳೆದಿರುವ ಸುಮಾರಾಗಿ ಎತ್ತರವಾಗಿರುವ ಮರಗಳ ಮಧ್ಯದಲ್ಲಿ ಹೆಚ್ಚು ಬಾಹ್ಯಾಡಂಬರವಿಲ್ಲದೆ ನಿಂತಿದೆ. ಊರಿನಿಂದ ಅರ್ಧ ಮೈಲು ಹೊರಕ್ಕೆ ಹೋದರೆ ನಮ್ಮೂರು ಎಲ್ಲಿದೆ ಎಂಬುದು ನಮಗೆ ತಿಳಿಯುವುದಿಲ್ಲ. ಆಗ ಅದು ಮರಗಳ ಮಧ್ಯದಲ್ಲಿ ಮುಚ್ಚಿಹೋಗುತ್ತದೆ. ನಮ್ಮ ಊರಿನ ಸುತ್ತ ಇಂತಹ ನೂರಾರು ತೋಪುಗಳಿರುವುದರಿಂದ ಯಾವುದರ ಮಧ್ಯದಲ್ಲಿ ನಮ್ಮ ಊರು ಇದೆ ಎಂಬುದನ್ನು ಕಂಡುಹಿಡಿಯುವುದು ಕಷ್ಟವಾಗುತ್ತದೆ. ಆದರೆ ಮನೆಗಳಿಂದ ಹೊರಡುವ ಹೊಗೆ ಇದೆಯಲ್ಲ – ಅದೇ ನಮ್ಮೂರಿನ ಕೈಮರ.

ನಮ್ಮ ಊರು ಚಿಕ್ಕದಾದರೂ ಅದರಲ್ಲಿ ಪ್ರಕೃತಿಯ ಬಗೆಬಗೆಯ ಬೆಡಗುಗಳು ಅಡಕವಾಗಿವೆ. ಊರಮುಂದೆ ಹರಿಯುವ ಹೇಮಾವತಿ ನದಿ; ಅದರ ತೀರದಲ್ಲಿ ಉದ್ದಕ್ಕೂ ಬೆಳೆದಿರುವ ಸಣ್ಣಸಣ್ಣ ತೋಪುಗಳು, ಬೇರೆ ಬೇರೆ ಕಡೆಗಳಲ್ಲಿ ತೋರುವ ಸೋಪಾನಗಳು, ಸೇತುವೆ, ನದಿಯಿಂದ ಒಂದು ಫರ್ಲಾಂಗ್ ಊರಿನ ಕಡೆಗೆ ಕೋಟೆಯ ಕಾಲಬುಡದಲ್ಲಿ ಹರಿಯುವ ತಿಳಿನೀರಿನ ಕಾಲುವೆ, ಕಾಲುವೆಗೂ ನದಿಗೂ ನಡುವೆ ಹಸುರು ಬಟ್ಟೆಯನ್ನು ಹಾಸಿದಂತೆ ಪಚ್ಚೆಯಾದ ಪೈರಿನ ಬಯಲು, ಕಾಲುವೆಯ ಒಂದು ಕಡೆ ಪೇಟೆ, ಮತ್ತೊಂದು ಕಡೆ ಕೋಟೆ, ಊರೊಳಗಿನ ದೇವಸ್ಥಾನದ ಮುಂದಲ ತಿಳಿನೀರಿನ ಕೊಳ, ನಾನಾ ವಿಧವಾದ ಹೂಗಳಿಂದ ಕೂಡಿದ ಮುಂದಲ

‘ಶೃಂಗಾರ ತೋಟ’ವೆಂಬ ಉದ್ಯಾನ, ಊರಿನಿಂದ ಪೂರ್ವಕ್ಕೂ ಪಶ್ಚಿಮಕ್ಕೂ ಎದ್ದುತೋರುವ ತೋಟಗಳು, ಊರಿನ ಸುತ್ತ ಚಿಕ್ಕಚಿಕ್ಕ ಕಾಡುಗಳು, ಬೆಟ್ಟಗುಡ್ಡಗಳು – ಇವುಗಳನ್ನೆಲ್ಲಾ ನೋಡಿ ನಾವೂ ನಮ್ಮ ಮಿತ್ರರನೇಕರೂ ನಮ್ಮ ಊರಿಗೆ ಪ್ರಕೃತಿ ದೇವಿಯು ಹೆಚ್ಚಾದ ದಯವನ್ನು ತೋರಿಸಿದ್ದಾಳೆಂದು ತಿಳಿದುಕೊಂಡಿದ್ದೇವೆ.

ನಮ್ಮ ಊರಿನಲ್ಲಿ ಸಾಮಾನ್ಯವಾಗಿ ಯಾರೂ ಬೆಳಗ್ಗೆ ಬಹಳ ಹೊತ್ತಿನ ವರೆಗೆ ಮಲಗುವುದಿಲ್ಲ. ಇದು ನಮ್ಮ ಹೆಂಗಸರು ಮಾಡಿರುವ ಉಪಾಯ. ಅವರು ಐದು ಗಂಟೆಗೆ ಎದ್ದು ಒಲೆ ಹೊತ್ತಿಸಿ, ಬಿಸಿನೀರು ಕಾಯಿಸಿ, ಕಾಫಿ ಕಾಯಿಸಿ, ದೋಸೆಯನ್ನು ‘ಚೊಯ್’ ಎನ್ನಿಸಿದ ಕೂಡಲೇ ಇನ್ನೂ ಅರ್ಧಗಂಟೆ ಮಲಗಬೇಕೆಂದಿರುವ ನಾವೆಲ್ಲಾ ಎದ್ದು ಸ್ನಾನ ಮಾಡಿ ಕಾಫಿ ಕುಡಿಯುತ್ತೇವೆ. ಅನಂತರ ಹೆಂಗಸರು ಮುಸುರೆ ಪಾತ್ರೆಗಳನ್ನು ತುಂಬಿಕೊಂಡು ಒಬ್ಬರನ್ನೊಬ್ಬರು ಕರೆದುಕೊಂಡು ಹೊಳೆಗೆ ಹೋಗುತ್ತಾರೆ. ಅಲ್ಲಿ ಅವರದೇ ಪ್ರಪಂಚ. ಅಲ್ಲಿ ಅವರು ಎಷ್ಟು ಸ್ವತಂತ್ರರಾಗುತ್ತಾರೆ! ನದಿಯ ಅಲೆಯು ಮತ್ತಷ್ಟು ಎದ್ದು ಕುಣಿಯುವಂತೆ ಹೇಗೆ ಕಿಲಕಿಲ ಧ್ವನಿಯಲ್ಲಿ ನಗುತ್ತಾರೆ! ತಮ್ಮ ದೇಹವನ್ನು ಹೇಮಾವತಿಯ ಶೀತಲವಾದ ಜಲದಲ್ಲಿ ಮುಳುಗಿಸಿ ಹೇಗೆ ಉಲ್ಲಾಸವನ್ನೂ ಆನಂದವನ್ನೂ ತೋರಿಸುತ್ತಾರೆ!

ನಮ್ಮ ಊರಿನಲ್ಲಿ ಬ್ರಾಹ್ಮಣರು, ಶೂದ್ರರು, ಸಾಹೇಬರು ಎಲ್ಲರೂ ಆರಂಭಗಾರರೆ. ಹೇಗೆ ಹೇಗೋ ಮಾಡಿ ವರ್ಷಕ್ಕೆ ಸಾಕಾಗುವಷ್ಟು; ನವರಾತ್ರಿ, ಉಗಾದಿ, ಮೊಹರಂ ಹಬ್ಬಗಳಲ್ಲಿ ಆನಂದದಿಂದ ಕುಣಿದಾಡಲು ಬೇಕಾಗುವಷ್ಟು ಪೈರನ್ನು ಬೆಳೆಯುತ್ತಾರೆ.

ಬೆಳಗಾಗುವ ವೇಳೆಗೆ ಊರ ಮುಂದಿನ ಚಾವಡಿಯ ಮೇಲೆ ಬೋರೇಗೌಡನು ಶ್ಯಾನುಭೋಗರೊಂದಿಗೆ ಟಿಪ್ಪುಸುಲ್ತಾನನ ಕಾಲದ ಕಗ್ಗಗಳನ್ನು ಹೇಳುತ್ತಾ ಮಧ್ಯೆ ಮಧ್ಯೆ ನಗುತ್ತಿರುತ್ತಾನೆ. ರೈತರು ಹೆಗಲಿನ ಮೇಲೆ ನೇಗಿಲನ್ನು ಹಾಕಿಕೊಂಡು ಎತ್ತುಗಳ ಜತೆಯಲ್ಲಿ ಕಿರುದನಿಯಲ್ಲಿ ಹಾಡುತ್ತಾ ಹೊಲಗದ್ದೆಗಳಿಗೆ ಹೋಗುತ್ತಾರೆ. ನಮ್ಮ ಮನೆಯ ಹಿತ್ತಿಲ ಬಾವಿಯ ಕಟ್ಟೆಯ ಮೇಲೆ ನಿಂತುಕೊಂಡು ನೋಡಿದರೆ ರಂಗೇಗೌಡನು ಆಗ ತಾನೇ ಮುಖವನ್ನು ತೊಳೆದು ಸೂರ್ಯನ ಕಡೆಗೆ ಕೈ ಮುಗಿಯುತ್ತಿರುತ್ತಾನೆ. ಒಳಗೆ ಅವನ ಹೆಂಡತಿ ರಾಟೆಯಲ್ಲಿ ಕುರಿಯ ತುಪ್ಪಟವನ್ನು ನೂಲಲು ಪ್ರಾರಂಭಿಸಿರುತ್ತಾಳೆ. ರೈತರ ಹುಡುಗರೂ ಹುಡುಗಿಯರೂ ದನಗಳನ್ನು ಮೇಯಿಸುವುದಕ್ಕೆ ಹೊಡೆದುಕೊಂಡು ಹೋಗುತ್ತಾ, ಅವುಗಳ ಕತ್ತಿನ ಗಂಟೆಯ ಧ್ವನಿಯಲ್ಲಿ ತಮ್ಮ ಧ್ವನಿಗಳನ್ನೂ ಸೇರಿಸಿ ಹಾಡುತ್ತಾರೆ. ನದಿಯ ಆಚೆ ಗುಡ್ಡದ ತಪ್ಪಲಿನಲ್ಲಿ ದನಗಳು ಮೇಯುತ್ತಿರುತ್ತವೆ.

ತಿರುಮಲಮ್ಮ ಬೆಳಿಗ್ಗೆ ಆರು ಗಂಟೆ ಆಗುವುದರೊಳಗೆ ಊರು ಒಂದು ಸುತ್ತು ಸುತ್ತುತ್ತಾಳೆ. ಅವಳಿಗೆ ಊರಿನ ವರ್ತಮಾನ ತಿಳಿಯದ್ದೇ ಇಲ್ಲ. ಹುಡುಗರು

ಅವಳನ್ನು ನಮ್ಮೂರಿನ 'ರೂಟರ್ ಏಜೆನ್ಸಿ' ಎಂದು ಕರೆಯುತ್ತಾರೆ. ತಿರುಮಲಮ್ಮ ಎಲ್ಲರಿಗೂ ಬೇಕಾದವಳು. ಎಲ್ಲರ ಕಷ್ಟದಲ್ಲಿಯೂ "ಅಯ್ಯೋ ಪಾಪ" ಎನ್ನುವಳು ತಿರುಮಲಮ್ಮ. ರಾತ್ರಿ ಕೂಡಾ ಊರು ಒಂದು ಸುತ್ತು ಸುತ್ತುತ್ತಾಳೆ. ರಾತ್ರಿ ಬೆಳದಿಂಗಳಿರಲಿ, ಕತ್ತಲೆಯಿರಲಿ ಒಂದು ಸೀಮೆ ಎಣ್ಣೆಯ ಬುಡ್ಡಿಯನ್ನು ಹತ್ತಿಸಿಕೊಂಡು ಸೆರಗಿನಿಂದ ಅದನ್ನು ಮುಚ್ಚಿಕೊಂಡು ಊರು ಸುತ್ತಾ ತಿರುಗಿಬಿಡುತ್ತಾಳೆ. ಅವಳ ಕೈಯಲ್ಲಿ ಬುಡ್ಡಿ ಇದ್ದರೆ ಎಂತಹ ಗಾಳಿ ಬಂದರೂ ಅದು ಆರಿಹೋಗುವುದಿಲ್ಲ.

ನಮ್ಮ ಊರಿನ ನಿತ್ಯ ಜೀವನದ ಒಂದೇ ವಿಧವಾದ ಬೇಸರಿಕೆಯನ್ನು ಹೋಗಲಾಡಿಸುವ ಸಾಧನಗಳಲ್ಲಿ ನಮ್ಮ ಊರಿನ ಬಸ್ಸು ಒಂದು. ಬಸ್ಸು ನಮ್ಮೂರಿನ ಗಡಿಯಾರದ ಹಾಗೆ. ಅದು ಮೂರು ಸಲ ನಮ್ಮೂರಿಗೆ ಬರುತ್ತದೆ. ಬೆಳಿಗ್ಗೆ ಎಂಟು ಗಂಟೆಗೆ ಮೊದಲನೆಯ ಸಲ. ಇದು ಹೆಂಗಸರಿಗೆಲ್ಲಾ ನದಿಗೆ ಪಾತ್ರೆ ಬೆಳಗುವುದಕ್ಕೂ, ಬಟ್ಟೆ ಒಗೆಯುವುದಕ್ಕೂ ಹೋಗುವುದಕ್ಕೆ ಗುರುತು. ಬಸ್ಸು ಎರಡನೆಯ ಸಲ ಮಧ್ಯಾಹ್ನದ ಒಂದು ಗಂಟೆಗೆ ಬರುತ್ತದೆ. ಇದು ಎಲ್ಲರಿಗೂ ಊಟದ ಕಾಲ. ಮಧ್ಯಾಹ್ನದ ಬಸ್ಸು ಬಂದ ಕೂಡಲೇ 'ಬಸ್ಸು ಬಂತು, ಗಂಡಸರೆಲ್ಲಾ ಊಟಕ್ಕೆ ಬರುತ್ತಾರೆ' ಎಂಬುದಾಗಿ ಸ್ತ್ರೀಯರು ತಮ್ಮತಮ್ಮ ಮನೆಗಳಿಗೆ ಓಡುತ್ತಾರೆ. ಸಾಯಂಕಾಲದ ಬಸ್ಸು ಸುಮಾರು ಆರುವರೆ ಗಂಟೆಗೆ ಬರುತ್ತದೆ. ಇದು ಜೋಡಿದಾರರ ಮನೆಯ ಬಾಗಿಲಿನಲ್ಲಿ ಎಲೆ ಹಚ್ಚುತ್ತಾ, ಮಾತನಾಡುತ್ತಾ, ಹಾಡುಗಳನ್ನು ಹಾಡುತ್ತಾ ಕುಳಿತಿರುವ ಹೆಂಗಸರಿಗೆ ಮನೆಗೆ ಹೋಗುವುದಕ್ಕೆ ಸೂಚನೆ. ಅರ್ಚಕರು ಸಾಯಂಕಾಲದ ಬಸ್ಸು ಬಂದಕೂಡಲೇ ದೇವಸ್ಥಾನಕ್ಕೆ ಪೂಜೆಗೆ ಹೋಗುತ್ತಾರೆ. ಬೆಟ್ಟಗುಡ್ಡಗಳಲ್ಲಿ ಮೇಯುತ್ತಿರುವ ದನಗಳನ್ನೂ ಕುರಿ, ಆಡುಗಳನ್ನೂ ಹೊಡೆದುಕೊಂಡು ದನಕಾಯುವ ಹುಡುಗರೂ ಹುಡುಗಿಯರೂ ಮನೆಗಳಿಗೆ ಬರುತ್ತಾರೆ.

ಬಸ್ಸು ನಮ್ಮೂರಿಗೆ ಪ್ರಿಯವಾಗುವುದಕ್ಕೆ ಇನ್ನೊಂದು ಕಾರಣ ಇದೆ. ಹಿಂದೆ ಇದ್ದ ಬಸ್ ಡ್ರೈವರಿಗೂ ನಮ್ಮ ಊರಿನ ಹೆಂಗಸರಿಗೂ ಒಂದು ವ್ಯಾಜ್ಯದಿಂದ ಮನಸ್ತಾಪ ಉಂಟಾಗಿತ್ತು. ಈಗ ರಾಜಯ್ಯಂಗಾರಿ ಡ್ರೈವರ್ ಆಗಿದ್ದಾನೆ. ಅವನು ಇನ್ನೂ ಹುಡುಗ. ಯಾವಾಗಲೂ ಅಕೃತ್ರಿಮವಾದ ನಗೆಯನ್ನು ನಗುತ್ತಾ ನಮ್ಮ ಊರಿನವರಿಗೆಲ್ಲಾ ಬೇಕಾದವನಾಗಿದ್ದಾನೆ. ಎಲ್ಲ ತಾಯಂದಿರಿಗೂ ಅವನನ್ನು ಕಂಡರೆ ವಿಶ್ವಾಸ. ಅವನಿಗೆ ನಮ್ಮ ಊರಿನ ಎಲ್ಲ ಮನೆಗಳಲ್ಲಿಯೂ ಆಗಾಗ ಕಾಫಿ, ತಿಂಡಿ ಸಿಗುತ್ತಾ ಇರುತ್ತದೆ. ಯಾವುದಾದರೂ ಮಗು ಅಳುತ್ತಿದ್ದರೆ ಅದನ್ನು ಬಸ್ಸಿನಲ್ಲಿ ಕೂರಿಸಿಕೊಂಡು ಬೀದಿಯಲ್ಲಿ ಒಂದು ಸುತ್ತು ತಿರುಗಿಸುತ್ತಾನೆ. ಇದರಿಂದ ಅವನನ್ನು ಕಂಡರೆ ತಾಯಂದಿರಿಗೆ ಬಹಳ ಸಂತೋಷ.

ಮಳೆಗಾಲದಲ್ಲಿ ಒಂದು ತಿಂಗಳು ಜಡಿಮಳೆ ಹಿಡಿಯುತ್ತದೆ. ಆಗ ಬೀದಿಗೆ ತಲೆಹಾಕುವುದಕ್ಕೇ ಆಗುವುದಿಲ್ಲ. ಆದರೆ ನಮ್ಮ ರೈತರು ಬಹಳ ಕಷ್ಟಜೀವಿಗಳು. ತಾವು ಮಾಡಬೇಕಾದ ಕೆಲಸವನ್ನು ಅವರು ಯಾವಾಗಲೂ ಬಿಡುವುದಿಲ್ಲ. ಇಂತಹ ಕಷ್ಟಜೀವಿಗಳಲ್ಲಿ ರಂಗೇಗೌಡನೂ ಒಬ್ಬ. ಮಳೆ 'ಜರೋ' ಎಂದು ಹೊಡೆಯುತ್ತಿದ್ದರೂ ರಂಗೇಗೌಡ ಮಂಡಿಯುದ್ದ ಕೆಸರಿನ ಗದ್ದೆಯಲ್ಲಿ ಮಧ್ಯಾಹ್ನದ ವರೆಗೆ ತಿರುಗುತ್ತಾನೆ. ತಲೆಗೊಂದು ಹರಕು ಗೋಣಿಯ ಚೀಲ. ಅದೇ ಅವನ ಛತ್ರಿ. ಮೈಗೆ ಒಂದು ಕರಿಯ ಕಂಬಳಿ, ಸೊಂಟದಿಂದ ಕೆಳಗೆ ನಾಲ್ಕು ಮೊಳದ್ದು ಒಂದು ದಟ್ಟಿ. ರಂಗೇಗೌಡನು ಹೊತ್ತಿಗೆ ಮುಂಚೆ ಎದ್ದು ಮುಖ ತೊಳೆದು, ಸೂರ್ಯನಿಗೆ ನಮಸ್ಕಾರ ಮಾಡಿ, ಉಪ್ಪಿಟ್ಟು ತಿಂದು ಕೆಲಸಕ್ಕೆ ಹೊರಡುತ್ತಾನೆ.


ರಂಗೇಗೌಡನ ಜೀವನವು ಸುಂದರವೂ, ಸರಳವೂ ಆದುದು. ಅವನು ಯಾವಾಗಲೂ ಆರೋಗ್ಯದ ದೃಢಕಾಯ. ಹೊತ್ತಾರೆ ಎದ್ದು ತಂಗಳು ತಿಂದು ಗದ್ದೆಗೆ ಹೋಗಿ ಉಳುತ್ತಿದ್ದರೆ ಅವನ ಹೆಂಡತಿ ಅಲ್ಲಿಗೆ ಹಿಟ್ಟನ್ನು ತರುತ್ತಾಳೆ. ರಂಗೇಗೌಡ ಹೆಂಡತಿ ತಂದ ಹಿಟ್ಟನ್ನು ಬಿಸಿಲಿನಲ್ಲಿಯೋ ಮರದ ನೆರಳಿನಲ್ಲಿಯೋ ಅಥವಾ ತುಂತುರು ಮಳೆಯಲ್ಲಿಯೋ ತಲೆಗೊಂದು ಕಂಬಳಿ ಹೊದೆದುಕೊಂಡು ಊಟ ಮಾಡುತ್ತಾನೆ. ಸುತ್ತಲೂ ವಿಚಿತ್ರವಾದ ಪ್ರಕೃತಿ, ಮೇಲೆ 'ವಿವಿಧ ಚಿತ್ರಜಾಲಗಳ ಬಣ್ಣಿಸಿರ್ಪ ಆಕಾಶ', ದೂರದಲ್ಲಿ ಪರ್ವತಶ್ರೇಣಿ, ಮಗ್ಗುಲಲ್ಲಿ ಅವನು ಕಷ್ಟದಿಂದ ಬೆಳೆದಿರುವ ಪೈರು, ಎದುರಿಗೆ ಅವನ ಕಣ್ಣಿಗೆ ಬೆಳಕಾದ ಹೆಂಡತಿ, ಹಸಿದಿರುವ ಹೊಟ್ಟೆ, ಶುದ್ಧವಾದ ಪ್ರೇಮಪೂರ್ಣವಾದ ಆಹಾರ. ರಂಗೇಗೌಡನು ಹೀಗೆ ಊಟ ಮಾಡುತ್ತಿರುವುದನ್ನು ನೋಡಿ ನನಗೆ ಎಷ್ಟೋ ಸಲ ಹೊಟ್ಟೆಕಿಚ್ಚು ಉಂಟಾಗಿದೆ.

ನಮ್ಮ ಊರಿನವರೆಲ್ಲ ಬಹಳ ರಸಿಕರು. ಅಲ್ಲಿ ವಿನೋದ ಪ್ರಿಯರಲ್ಲದವರು ಯಾರೂ ಸಿಕ್ಕುವುದಿಲ್ಲ. ಕೋಪಿಷ್ಠರಾಗಲೀ ಮುಖವನ್ನು ಗಂಟುಹಾಕಿಕೊಳ್ಳುವವರಾಗಲೀ ಅಲ್ಲಿಗೆ ಬಂದರೆ ಮಾಯವಾಗಿಬಿಡುತ್ತಾರೆ. ಅಥವಾ ಮುಂಗೋಪವನ್ನು ಬಿಟ್ಟು ಎಲ್ಲರಂತೆ ತಾವೂ ನಗಲು ಪ್ರಾರಂಭಿಸುತ್ತಾರೆ. ಒಂದು ಉದಾಹರಣೆ ಕೇಳಿ...

ಆ ದಿವಸ ಅಯ್ಯಂಗಾರರ ಮನೆಯಲ್ಲಿ ಭಾರೀ ಸಮಾರಾಧನೆ. ಊರಿನವರಿಗೆಲ್ಲ ಊಟಕ್ಕೆ ಹೇಳಿದ್ದರು. ಅಡಿಗೆಗೆ ಅಲ್ಲೇನು ಪರಿಚಾರಕರಿದ್ದಾರೆಯೇ? ಊರಿನವರೇ ಐದು - ಆರು ಜನ ಅಡಿಗೆ ಮಾಡುವುದಕ್ಕೆ ಹೋಗಿದ್ದರು. ಅಡುಗೆಯಾಗುವಾಗ ಸ್ವಲ್ಪ ತಡವಾದುದರಿಂದ ಹೆಂಗಸರಿಗೂ ಗಂಡಸರಿಗೂ ಒಟ್ಟಿಗೆ ಎಲೆ ಹಾಕಿದ್ದರು. ನಮ್ಮ ಊರ ಮಣೆಗಾರರು ಬಡಿಸುವುದಕ್ಕೆ ಎದ್ದರು.

ಮಣೆಗಾರರಿಗೆ ಹೊಟ್ಟೆ ಸ್ವಲ್ಪ ದಪ್ಪ. ಅವರು ಬಡಿಸುವುದಕ್ಕೆ ಎದ್ದುದನ್ನು ಕಂಡು ನಾವೆಲ್ಲ "ಬೇಡಿ ಸ್ವಾಮಿ, ಹುಡುಗರು ಬಡಿಸುತ್ತಾರೆ. ನಿಮಗೆ ಯಾತಕ್ಕೆ

ಆಯಾಸ?'' ಎಂದೆವು. ನಾವು ಹಾಗೆ ಹೇಳಿದುದರಿಂದ ಮಣೆಗಾರರಿಗೆ ಸ್ವಲ್ಪ ಕೋಪವೇ ಬಂದಿತು. 'ಹುಡುಗರು ಬಡಿಸುತ್ತಾರೆ ಎಂದರೆ ಮಹಾ ನಾನೇನು ಮುದುಕನೇ? ಹೇಗಾದರೂ ನಾನು ಬಡಿಸಿಯೇ ತೀರುತ್ತೇನೆ' ಎಂದುಕೊಂಡರು ಅವರು. ಪಂಚೆಯನ್ನು ಮೇಲಕ್ಕೆ ಎತ್ತಿಕಟ್ಟಿ ಅದರ ಮೇಲೆ ಉತ್ತರೀಯವನ್ನು ಸುತ್ತಿಕೊಂಡು ಅಡುಗೆ ಮನೆಗೆ ಹೋಗಿ ಸುಡುತ್ತಿದ್ದ ಸಾರನ್ನು ತೆಗೆದುಕೊಂಡು ಏದುತ್ತಾ ಮಹಡಿಯ ಮೇಲಕ್ಕೆ ಬಂದರು. ಆ ಹೊಟ್ಟೆಯನ್ನು ಹೊತ್ತುಕೊಂಡು ಮಹಡಿ ಹತ್ತುವ ಸಾಧನೆಯೇ ಅವರಿಗೆ ಸಾಕಾಗಿ ಹೋಯಿತು. ಬಡಿಸುವುದಕ್ಕೆ ಬಂದವರು ಆ ವಿಷಯವನ್ನೇ ಮರೆತು ಏದುತ್ತಾ ಸುಧಾರಿಸಿಕೊಳ್ಳುತ್ತಾ ನಿಂತುಬಿಟ್ಟರು. ಇದನ್ನು ನೋಡಿ ಹುಡುಗರಿಗೆಲ್ಲ ನಗು ಬಂದು 'ಘೊಳ್ಳೆಂದು' ಗಟ್ಟಿಯಾಗಿ ನಕ್ಕರು. ಆಯಾಸ ಗೊಂಡಿದ್ದ ಮಣೆಗಾರರಿಗೆ ಬಹಳ ಕೋಪ ಬಂದಿತು. ಅವರು ಏದುತ್ತಾ "ಹುಚ್ಚು ಹುಡುಗರಾ, ದೊಡ್ಡವರನ್ನು ಕಂಡರೆ ನಿಮಗೆ ಸ್ವಲ್ಪವೂ ಗೌರವವಿಲ್ಲ. ಯಾರನ್ನಾದರೂ ಹಾಸ್ಯ ಮಾಡುತ್ತೀರಿ. ಶುದ್ಧ ಹುಡುಗ ಪಾಳ್ಯ'' ಎಂದು ಹೇಳುತ್ತಾ ತಂದಿದ್ದ ಸಾರನ್ನು ಬಡಿಸದೆ ದಡಬಡನೆ ಕೆಳಕ್ಕೆ ಇಳಿದು ಹೋದರು.



**– ಗೊರೂರು ರಾಮಸ್ವಾಮಿ ಅಯ್ಯಂಗಾರ್**

## ಗೊರೂರು ರಾಮಸ್ವಾಮಿ ಅಯ್ಯಂಗಾರ್



ಗೊರೂರು ರಾಮಸ್ವಾಮಿ ಅಯ್ಯಂಗಾರರು ೧೯೦೪ರಲ್ಲಿ ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ 'ಗೊರೂರು' ಎಂಬಲ್ಲಿ ಜನಿಸಿದರು. ಇವರ ತಂದೆ ಶ್ರೀನಿವಾಸ ಅಯ್ಯಂಗಾರ್. ತಾಯಿ ಲಕ್ಷ್ಮಮ್ಮ. ಗಾಂಧಿತತ್ವವನ್ನು ಪಾಲಿಸಿದ ಇವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಾರೆ. ಮದರಾಸಿನ ಲೋಕಮಿತ್ರ ಪತ್ರಿಕೆಯ ಉಪಸಂಪಾದಕರಾಗಿ ಕೆಲಸಮಾಡಿದ್ದಾರೆ. ಮೆರವಣಿಗೆ, ಗರುಡಗಂಬದ ದಾಸಯ್ಯ, ಹಳ್ಳಿಯ ಹಾಡುಗಳು, ಬೂತಯ್ಯನ ಮಗ ಅಯ್ಯು, ಬೆಸ್ತರ ಕರಿಯ, ವೀರ ಭದ್ರಾಚಾರಿ ಕಥೆಗಳು ಎಂಬಿವು ಇವರ ಪ್ರಮುಖ ಕೃತಿಗಳಾಗಿವೆ. 'ಬೆಟ್ಟದ ಮನೆ' ಗೊರೂರು ರಚಿಸಿದ ಹಾಸ್ಯಗ್ರಂಥವಾಗಿದೆ. 'ಅಮೇರಿಕಾದಲ್ಲಿ ಗೊರೂರು' ಪ್ರವಾಸಕಥನವಾಗಿದೆ. ಉಸುಬು, ಕನ್ಯಾಕುಮಾರಿ, ವೈಯಾರಿ, ಗೋಪುರ ಬಾಗಿಲು ಇತ್ಯಾದಿಗಳು ಇವರ ಕವನಸಂಕಲನಗಳಾಗಿವೆ. ಕ್ರೌಂಚವಧೆ, ಜಗದ್ಗುರುಗಳ ದಿವ್ಯಬೋಧೆ, ಮಕ್ಕಳ ಪೋಷಣೆ, ರಾಜನರ್ತಕಿ ಮೊದಲಾದುವುಗಳು ಇವರ ಅನುವಾದಿತ ಕೃತಿಗಳಾಗಿವೆ. ಕೇಂದ್ರ ಸಾಹಿತ್ಯ ಎಕಾಡಮಿ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಮೊದಲಾದುವುಗಳು ಇವರಿಗೆ ಸಂದ ಪ್ರಶಸ್ತಿಗಳಾಗಿವೆ. ಇವರ 'ಅಮೇರಿಕಾದಲ್ಲಿ ಗೊರೂರು' ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಬಂದಿದೆ. ಇವರು ೧೯೮೧ರಲ್ಲಿ ಶಿರಸಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.

ನಮ್ಮೂರ ರಸಿಕರು ಎಂಬ ಪಾಠವನ್ನು ಗೊರೂರರ 'ಗರುಡಗಂಬದ ದಾಸಯ್ಯ' ಎಂಬ ಕೃತಿಯಿಂದ ಆರಿಸಲಾಗಿದೆ.

### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಗೊರೂರು ರಾಮಸ್ವಾಮಿ ಅಯ್ಯಂಗಾರರು ತಮ್ಮ ಊರನ್ನು ಹೇಗೆ ವರ್ಣಿಸಿದ್ದಾರೆ?
2. ಹುಡುಗರು ತಿರುಮಲಮ್ಮನನ್ನು 'ರೂಟರ್ ಏಜೆನ್ಸಿ' ಎನ್ನಲು ಕಾರಣವೇನು?
3. ಡ್ರೈವರ್ ರಾಜಯ್ಯಂಗಾರಿಯ ವಿಶೇಷತೆಗಳೇನು?
4. ಗದ್ದೆಯಲ್ಲಿ ರಂಗೇಗೌಡನು ಊಟಮಾಡುವ ರೀತಿಯ ಕುರಿತು ಬರೆಯಿರಿ.
5. 'ಕೋಪಿಷ್ಠರಾಗಲೀ ಮುಖ ಗಂಟುಹಾಕಿಕೊಳ್ಳುವವರಾಗಲೀ ಗೊರೂರಿಗೆ ಬಂದರೆ ಮಾಯವಾಗಿ ಬಿಡುತ್ತಾರೆ' ಎಂಬುದಕ್ಕೆ ಉದಾಹರಣೆ ಯಾವುದು?

**ಚಿತ್ರ ರಚಿಸಿರಿ.**

ಪಾಠದಲ್ಲಿ ವಿವರಿಸಲಾದ ವಿವಿಧ ಸನ್ನಿವೇಶಗಳಲ್ಲಿ ನಿಮಗೆ ಮೆಚ್ಚುಗೆಯಾದುದರ ಕುರಿತು ಚಿತ್ರ ರಚಿಸಿರಿ.

**ಅನುಭವ ಬರೆಯಿರಿ :**

ಗೊರೂರು ರಾಮಸ್ವಾಮಿ ಅಯ್ಯಂಗಾರರು ತಮ್ಮೂರಿನ ಅನುಭವವನ್ನು ವಿವರಿಸಿದ್ದಾರಲ್ಲವೇ? ಅದೇ ರೀತಿ ನೀವು ನಿಮ್ಮ ಯಾವುದಾದರೊಂದು ಅನುಭವವನ್ನು ಬರೆಯಿರಿ.

**ಒಂದೇ ಪದ ಬರೆಯಿರಿ.**

ಗದ್ಯಭಾಗದಲ್ಲಿ ಅಡಿಗೆರೆ ಎಳೆದ ಭಾಗಕ್ಕೆ ಸಮಾನವಾದ ಅರ್ಥವಿರುವ ಪದವನ್ನು ಪಾಠದಿಂದ ಹುಡುಕಿ ಬರೆಯಿರಿ :

ಶ್ರೀನಿವಾಸರಾಯರಿಗೆ ಮೊಮ್ಮಗಳ ಮದುವೆ ಆಮಂತ್ರಣ ಬಂದಿತ್ತು. ಅವರು ತಮ್ಮ ಮಡದಿಯ ಜೊತೆಯಲ್ಲಿ ಮಗಳ ಮನೆಗೆ ಹೊರಟರು. ಮೈಗೆ ಹೊದೆಯುವ ಬಟ್ಟೆಯನ್ನು ಹೆಗಲ ಮೇಲೆ ಇರಿಸಿಕೊಂಡು ಎಕ್ಕಡ ತೊಟ್ಟರು. ಮಡದಿ ಸೀತಮ್ಮನವರು ಸೀರೆಯಲ್ಲಿ ಹೊದೆಯುವ ಭಾಗವನ್ನು ಒಮ್ಮೆ ಸರಿಪಡಿಸಿಕೊಂಡು ಮುಂದೆ ನಡೆದರು. ಅವರಿಬ್ಬರೂ ಮರಗಳ ಸಮೂಹದ ಮಧ್ಯದಲ್ಲಿ ಮಾತನಾಡುತ್ತಾ ಸಾಗಿದರು. ಎಡೆಬಿಡದೆ ಸುರಿಯುವ ಮಳೆಯನ್ನೂ ಲೆಕ್ಕಿಸದೆ ವೇಗವಾಗಿ ಸಾಗಿದರು. ಅವರ ಮಗಳ ಮನೆಯಲ್ಲಿ ಏನೇನು ಸಿದ್ಧತೆಗಳಾಗಿರಬಹುದೆಂದು ಯೋಚಿಸುತ್ತಾ ಇರುವಂತೆಯೇ ಮನೆಯ ಮುಂದಿನ ಜಗಲಿಗೆ ತಲುಪಿಯೇಬಿಟ್ಟರು.

# ಗುಬ್ಬಿಯ ಹುಡುಕಾಟದಲ್ಲಿ

3

ಮನೆಯಲ್ಲಿ ಇನ್ನೂ ಯಾರೂ ಎದ್ದಂತಿಲ್ಲ. 'ಮಂಚ ಬಿಟ್ಟು ಏಳೋಣ' ಅಂದುಕೊಂಡೆ. ಆದರೆ ಅವರಿಗೆಲ್ಲ ಯಾಕೆ ತೊಂದರೆ ಕೊಡುವುದೆಂದು ಸುಮ್ಮನೆ ಮಲಗಿದ್ದೆ. ಕಸಗುಡಿಸಿ ಅಂಗಳಕ್ಕೆ ನೀರು ಹಾಕುವ ಶಬ್ದ, ದೂರದಲ್ಲಿ ಆಟೋ ಶಬ್ದ, ಹಾಲಿನ ಕ್ಯಾನಿನ ಶಬ್ದ, ತರಕಾರಿ ಮಾರುವವನ ಶಬ್ದ ಕೇಳಿಸಿತು. ಸೂರ್ಯನ ಬೆಳಕೇ ಕಂಡಿಲ್ಲ. ಆಗಲೇ ಅಷ್ಟೊಂದು ಚಟುವಟಿಕೆ ಶುರುವಾಗಿದೆಯಲ್ಲ! ಆಶ್ಚರ್ಯವಾಯಿತು. ಅಮೇರಿಕಾದಲ್ಲಿದ್ದಾಗ ಬೆಳಗಿನ ಜಾವ ಅಲರಾಮ್ ಬಿಟ್ಟು ಇನ್ಯಾವ ಶಬ್ದವೂ ಕೇಳಿ ಅಭ್ಯಾಸವಿಲ್ಲ! ಮಂಚದಿಂದ ಎದ್ದು ಕಿಟಿಕಿ ಕರ್ಟನ್ ಸರಿಸಿ ನೋಡಿದಾಗ ತುಂಬ ಬೆಳಕಾಗಿದೆ ಅನ್ನುವ ಅರಿವಾಯಿತು. ಮಂಚದಿಂದ ಎದ್ದು ರೂಮಿಗೇ ಅಂಟಿಕೊಂಡಂತೆ ಇದ್ದ ಮಹಡಿ ಮೆಟ್ಟಿಲು ಹತ್ತಿ ಛತ್ತಿಗೆ ಹೋದೆ. ಬೀಸಿ ಬಂದ ತಂಗಾಳಿ ನೆರೆಮನೆಯ ಸಂಪಿಗೆಯ ಮರದಿಂದ 'ಘಂ' ಎಂಬ ಪರಿಮಳ ಹೊತ್ತುತಂದಿತ್ತು. ನನಗರಿವಿಲ್ಲದೆ ಎದೆಯುಬ್ಬಿಸಿ ಹವಕುಡಿದು ಕೈಕಟ್ಟಿ ನಿಂತೆ. ಛಾವಣಿ ಮೇಲೆ ನಿಂತಿದ್ದರಿಂದ ದೂರದ ವರೆಗೂ ಮುಂಜಾವಿನ ಕಿತ್ತಳೆ ಬಣ್ಣದ ಆಕಾಶ ಕಾಣುತ್ತಿತ್ತು. ಕೆಲವು ಕಾಗೆಗಳು ಮಾತ್ರ ಆಕಾಶದಲ್ಲಿ ಹಾರುತ್ತಿದ್ದುವು! 'ಈ ಊರಿನಲ್ಲಿ ಬೇರೆ ಹಕ್ಕಿಗಳೇ ಇಲ್ಲವೇ' ಅನ್ನಿಸಿತು. 'ನಾನು ಚಿಕ್ಕಂದಿನಲ್ಲಿ ನೋಡುತ್ತಿದ್ದ ಗುಬ್ಬಚ್ಚಿ, ಕೋಗಿಲೆ, ಅಳಿಲು, ಚಿಟ್ಟೆ ಒಂದೂ ಕಾಣಿಸುತ್ತಿಲ್ಲವಲ್ಲ' ಅಂದುಕೊಂಡೆ. ಛಾವಣಿಯಿಂದ ಕೆಳಗಿಳಿದು ಷೂ ಧರಿಸಿ ನನ್ನ ಬೆಳಗಿನ ವ್ಯಾಯಾಮಕ್ಕೆಂದು ವಾಕಿಂಗ್ ಹೊರಟೆ. ದಾರಿಯುದ್ದಕ್ಕೂ ಬರೀ ಕಾಗೆಗಳು! 'ಮೊದಲಿದ್ದ ಗುಬ್ಬಚ್ಚಿಗಳೆಲ್ಲಾ ಏನಾದವು' ಎಂಬ ಯೋಚನೆ ತಲೆಕೊರೆಯುತ್ತಿತ್ತು.

ಎಲ್ಲ ಕಡೆ ಹುಡುಕಿದರೂ ಗುಬ್ಬಚ್ಚಿಗಳೇ ಕಾಣಲಿಲ್ಲ. 'ಅಮೇರಿಕಾದಿಂದ ರಜಾ ಕಳೆಯಲು ಬಂದ ನನಗ್ಯಾಕೆ ಈ ಗುಬ್ಬಚ್ಚಿ ವಿಚಾರ' ಅಂತ ಸುಮ್ಮನಾದೆ. ಅಣ್ಣ, ಅಕ್ಕ, ಸಂಬಂಧಿಕರು, ಗೆಳೆಯರು ಅಂತ ಎಲ್ಲರ ಮನೆಗಳಿಗೂ ಭೇಟಿ ಕೊಡುವುದರಲ್ಲಿ ಕಾಲ ಹೋದದ್ದೇ ಗೊತ್ತಾಗಲಿಲ್ಲ. ಅಣ್ಣನ ಮನೆಯಲ್ಲೇ ಇದ್ದ ಅಮ್ಮನ ಜೊತೆ ಕಾಲ ಕಳೆಯುವಾಗ, ಊಟ ಮಾಡುವಾಗ, ಅಮ್ಮ ಹೇಳಿದ ಕಥೆಗಳನ್ನು ಕಿವಿಗೊಟ್ಟು ಕೇಳುವಾಗ ಎಲ್ಲಿಲ್ಲದ ನೆಮ್ಮದಿ. ಅಣ್ಣನ ಮನೆಯಲ್ಲಿ ಅಮ್ಮ ಇದ್ದರೂ ಅವರ ಮನಸ್ಸು ಬಸವನಗುಡಿಯಲ್ಲಿದ್ದ ಸ್ವಂತ ಹಳೆ ಹೆಂಚಿನ ಮನೆಯಲ್ಲೇ ಇರುತ್ತಿತ್ತು. ನಾವೆಲ್ಲರೂ ಹುಟ್ಟಿ ಬೆಳೆದ ಆ ಮನೆಯನ್ನೊಮ್ಮೆ ನೋಡದೆ ಅಮೇರಿಕೆಗೆ ಹೋಗಲು ಮನಸ್ಸಾಗಲಿಲ್ಲ.

ಬೀಗದ ಕೈ ಹಿಡಿದು ಬಸವನಗುಡಿ ಮನೆಗೆ ಒಬ್ಬನೆ ಹೋದೆ. ಅಪ್ಪ ಕಟ್ಟಿಸಿದ ಮನೆ ಮುರುಕು ಸ್ಥಿತಿಯಲ್ಲಿ ಬಿಕೋ ಎನ್ನಿಸಿತು. ಅಲ್ಲಿ ಹೆಗ್ಗಣಗಳು ಧಾಳಿ ಮಾಡಿರುವ ಸೂಚನೆ ಅವುಗಳ ಮಲಮೂತ್ರ ವಾಸನೆಯಿಂದಲೇ ಗೊತ್ತಾಗುತ್ತಿತ್ತು. ಉಸಿರು ಕಟ್ಟಿದಂತಾಗಿ ಎಲ್ಲಾ ಕಿಟಕಿಬಾಗಿಲುಗಳನ್ನು ತೆರೆದು ಒಂದೊಂದೇ ಕೋಣೆಗೆ ಹೋಗಿ ನೋಡಿದೆ. ನಡುಮನೆಯಲ್ಲಿ ಅಮ್ಮ ಮಲಗಿಕೊಳ್ಳುವ ಮಂಚದ ಮೇಲೆ ಕುಳಿತೆ. ಗ್ಲಾಸ್‌ಹೆಂಚಿನ ಮೂಲಕ ಬೀಳುತ್ತಿದ್ದ ಸೂರ್ಯನ ಕಿರಣ ಹಿತವೆನ್ನಿಸಿತು. ಕತ್ತೆತ್ತಿ ನೋಡಿದಾಗ ಅಮ್ಮ ಮಡಿ ಸೀರೆ ಒಣಗಲು ಹಾಕುತ್ತಿದ್ದ ತಂತಿ ಇನ್ನೂ ಹಾಗೇ ಇತ್ತು. ಮಡಿಕೋಲು ಸದಾ ಬಾಗಿಲಿನ ಹಿಂದೆ ಇರಲೇಬೇಕಲ್ಲವೇ ಎಂದುಕೊಂಡವನು ನಡುಮನೆಯ ಬಾಗಿಲ ಹಿಂದೆ ನೋಡಿದೆ. ಅದೇ ಐದಡಿ ಉದ್ದದ ತೆಳ್ಳನೆ ಬಿದಿರಿನ ಕೋಲು ಯಥಾಸ್ಥಿಯಲ್ಲಿ ಗೋಡೆಗೊರಗಿ ನಿಂತಿತ್ತು. ಅದನ್ನು ಕಂಡದ್ದೇ ಹಿಂದಿನ ನೆನಪೊಂದು ಮರುಕಳಿಸಿತು. ಆ ಘಟನೆ ನಡೆದು ಸುಮಾರು ಇಪ್ಪತ್ತು ವರ್ಷಗಳೇ ಸಂದಿವೆ!

ಆ ದಿನ ಹಾಸಿಗೆಯಿಂದ ಎದ್ದವನೇ ನಿರ್ಧರಿಸಿಬಿಟ್ಟಿದ್ದೆ; ಏನಾದರೂ ಮಾಡಿ ಈ ಗುಬ್ಬಚ್ಚಿಗಳನ್ನು ಮನೆಯಿಂದ ಹೊರಗೋಡಿಸಲೇಬೇಕೆಂದು. ಅವಕ್ಕೆಷ್ಟು ಧೈರ್ಯವಿರಬೇಕು! ನನ್ನ ಕೋಣೆಯ ಒಳಗೆ ಹೆಂಚಿಗೆ ಅಂಟಿಕೊಂಡಂತೆ ಈ ಗುಬ್ಬಚ್ಚಿಗಳು ಗೂಡುಕಟ್ಟಿ ಸದ್ದೆಬ್ಬಿಸುತ್ತವೆಯಲ್ಲ ಅಂತ ಕೋಪ ಬಂದಿತ್ತು. ಸಾಲದು ಎನ್ನುವಂತೆ ನಾನು ಮಾಡುತ್ತಿದ್ದ ಡ್ರಾಯಿಂಗ್ ಮೇಲೆ ಹಿಕ್ಕೆ ಹಾಕಿ 'ಪುರ್' ಅಂತ ಹಾರಿಹೋಗಿತ್ತಲ್ಲ. 'ನೋಡ್ಕೊಳ್ತೀನಿ ಇವತ್ತು' ಎಂತಲೇ ಎದ್ದೆ. ನಡುಮನೆಗೆ ಹೋಗಿ ಅಮ್ಮನ ಮಡಿಕೋಲು ತಂದಿಟ್ಟುಕೊಂಡೆ. ಗೂಡಿನ ಒಡೆಯರಾದ ಗಂಡು, ಹೆಣ್ಣು ಗುಬ್ಬಚ್ಚಿಗಳು ಒಳಗೆ ಬರುವುದನ್ನೇ ಕಾದು ತಕ್ಷಣ ಮನೆ ಬಾಗಿಲುಗಳನ್ನು ಮುಚ್ಚಿದೆ. ವಿಕಾರವಾಗಿ ಕಿರುಚುತ್ತಾ ಮಡಿಕೋಲನ್ನು ಎತ್ತರಕ್ಕೆ ಬೀಸುತ್ತಾ ಗುಬ್ಬಚ್ಚಿಗಳು ಹಠಾತ್ತನೆ ದಿಗ್ಭ್ರಮೆಗೊಳ್ಳುವಂತೆ ಮಾಡಿದೆ. ಕಿಟಿಕಿ ಮುಚ್ಚಿದ್ದುದರಿಂದ ಅವುಗಳು ತಪ್ಪಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ. ಏದುಸಿರು ಬಿಡುತ್ತಿದ್ದ ಆ ಬೆದರಿದ ಗುಬ್ಬಿಗಳು ಹಂಚಿನೆತ್ತರಕ್ಕೆ ಹಾರಿಹಾರಿ ಸುಸ್ತಾದ ಮೇಲೆ "ಹುಂ, ಇನ್ನೆಂದಾದರೂ ಒಳಗೆ ಬಂದೀರ ಜೋಕೆ" ಅಂತ ಕಿರುಚಿ ಕಿಟಕಿ, ಬಾಗಿಲು ತೆರೆದೆ. 'ಬದುಕಿದೆಯಾ ಬಡಜೀವವೆ' ಎಂದು ಎರಡೂ ಗುಬ್ಬಚ್ಚಿಗಳು ಹಾರಿಹೋಗುವುದನ್ನು ನೋಡಿ ಏನೋ ಗೆದ್ದವನಂತೆ ಅನ್ನಿಸಿತು. ಒಂದು ಕುರ್ಚಿಯ ಮೇಲೆ ನಿಂತು ತೊಲೆಗೂ ಹೆಂಚಿಗೂ ಮಧ್ಯೆ ಕಟ್ಟಿದ್ದ ಗೂಡನ್ನು ಕೋಲಿನಿಂದ ಎಬ್ಬಿಸಿ ತಿವಿದು ಕೆಳಗುರುಳಿಸಿದೆ. ಗೂಡು ನೆಲಕ್ಕೆ ಬೀಳುವ ಮುನ್ನವೇ ಟಪ್, ಟಪ್ ಎಂದು ಶಬ್ದ ಬಂದಾಗ ನೆಲದ ಕಡೆಗೆ ಕಣ್ಣಾಡಿಸಿದೆ. ಪಾಪಕಾರ್ಯ ನನಗರಿವಿಲ್ಲದಂತೆ ನಡೆದುಹೋಗಿತ್ತು. ಕುರ್ಚಿಯಿಂದ ಕೆಳಗಿಳಿದು ನೋಡಿದೆ. ಕೆಂಪು ಕಾವಿಯ ನೆಲದ ಮೇಲೆ ನಿರಾಕಾರದ ಹಳದಿ ಲೋಳೆ ಚೆಲ್ಲಿತ್ತು. ಪಕ್ಕದಲ್ಲೇ ಬಿಳಿಹತ್ತಿ, ಕಾಗದದ ಚೂರು, ಗರಿಕೆ ದಾರಗಳಿಂದ ಮಾಡಿದ್ದ ಗುಬ್ಬಚ್ಚಿಗಳ ಗೂಡು ಕೇಳುವವರಿಲ್ಲದೆ ಬಿದ್ದಿತ್ತು. 'ಎಂತಹ ಅನಾಹುತವಾಯಿತು!' ಅಂತ ಮನಸ್ಸು ಬೇಸರಗೊಳ್ಳುತ್ತಿತ್ತು.



'ಛೇ ಗುಬ್ಬಿಗಳು ಮೊಟ್ಟೆ ಇಟ್ಟವೆ ಅಂತ ಗೊತ್ತಿದ್ದರೆ ಖಂಡಿತ ಗೂಡು ಬೀಳಿಸುತ್ತಿರಲಿಲ್ಲ; ಒಂದು ವೇಳೆ ಗೂಡಿನ ಜೊತೆಗೇ ಬಿದ್ದಿದ್ದರೆ ಮೊಟ್ಟೆಗಳು ಒಡೆಯುತ್ತಿರಲಿಲ್ಲವೇನೋ. ಯಾಕಾದರೂ ಈ ಮಡಿಕೋಲು ತಂದೆನೋ, ಏಣಿ ಹಾಕಿಕೊಂಡು ಕೈಯಲ್ಲಿ ಗೂಡು ಕಿತ್ತಿದ್ದರೆ ಮೊಟ್ಟೆ ಇರುವ ಅರಿವಾಗುತ್ತಿತ್ತೇನೋ' ಎಷ್ಟು ಸಮಾಧಾನ ಮಾಡಿಕೊಂಡರೂ ಗುಬ್ಬಿ ಹತ್ಯೆಗೆ ಕಾರಣನಾದ ಅಪರಾಧಿ ನಾನೇ ಎಂದು ಒಳಮನಸ್ಸು ಕೊರೆಯುತ್ತಿತ್ತು. ಮತ್ತೆ ಆ ಗುಬ್ಬಿಗಳು ಮೊಟ್ಟೆಗೆ ಕಾವು ಕೊಡಲು ಬಂದರೆ? ಈ ಭೀಕರ ದೃಶ್ಯವನ್ನು ಆ ಬಡ ಅಪ್ಪ-ಅಮ್ಮ ಗುಬ್ಬಿಗಳು ನೋಡದಿರಲೆಂದು ಮತ್ತೆ ಕಿಟಕಿ, ಬಾಗಿಲು ಮುಚ್ಚಿದೆ. ಏನು ಮಾಡಲೂ ತೋಚದೆ ಸುಮ್ಮನೆ ಕತ್ತಲಲ್ಲಿ ಕುಳಿತೆ "ಅಯ್ಯಾ ಇದ್ಯಾಕ ಹಿಂಗೆ ಕತ್ತಲಲ್ಲಿ ಕೂತ್ರಿ ಕೋಣೆಯೊಳಗೆ?" ಬಂದ ಕೆಲಸದವಳಿಗೆ ಎಲ್ಲಾ ಅರ್ಥವಾಗಿತ್ತು. "ಗುಬ್ಬಿ ಕೊಂದು ಪಾಪ ಕಟ್ಕೊಂಡವ್ರೆಪ್ಪಾ" ಅಂತ ತನ್ನ ಎಂಟು ವರ್ಷದ ಮಗಳಿಗೂ ಹೇಳಿದ್ದು ಕೇಳಿಸಿತು. ಹಿತ್ತಲಿನಿಂದ ಬೊಗಸೆಯಲ್ಲಿ ಸ್ವಲ್ಪ ಮಣ್ಣು, ಹೊಟ್ಟಿನ ಪುಡಿ ತಂದು ಲೋಳೆಯ ಮೇಲೆ ಹಾಕಿ ವಾಂತಿ ಎತ್ತುವಂತೆ ಮೊರದಲ್ಲಿ ತುಂಬಿ ನೆಲ ಸ್ವಚ್ಛ ಮಾಡಿದ ಕೆಲಸದಾಕೆಗೆ ಮನಸ್ಸಿನಲ್ಲೇ ಧನ್ಯವಾದ ಹೇಳಿಕೊಂಡೆ. ಮಡಿಕೋಲು ಇನ್ನೂ ಅಲ್ಲೇ ಗೋಡೆಗೆ ಒರಗಿ ನಿಂತಿತ್ತು. ಮಡಿಕೋಲು ಅಪವಿತ್ರವಾದ ಕೆಲಸ ಮಾಡಲು ಸಹಾಯ ಮಾಡಿದೆ. ಇದನ್ನು ಶುಭ್ರಗೊಳಿಸದೆ ಅಮ್ಮನಿಗೆ ಗೊತ್ತಿಲ್ಲದಂತೆ ನಡುಮನೆಗೆ ವಾಪಸ್ಸು ಇಡಲು ಮನಸ್ಸಾಗಲಿಲ್ಲ. ಹಿತ್ತಲಲ್ಲಿದ್ದ ಒಗೆಯುವ ಕಲ್ಲಿನ ಬಳಿಗೆ ಹೋಗಿ ತೊಟ್ಟಿಯ ಮೇಲಿದ್ದ ತಾಮ್ರದ ಚೊಂಬಿನಿಂದ ನೀರು ತುಂಬಿ ಮೂರು ಸಲ ಮಡಿಕೋಲಿನ ಮೇಲೆ ಸುರಿದ ನಂತರ ಸ್ವಚ್ಛವಾಗಿ ಕಾಣಿಸಿತು. ಒಂದು ಹಳೆಬಟ್ಟೆಯಲ್ಲಿ ಆ ಮಡಿಕೋಲನ್ನು ಒರಸಿ ಅಡುಗೆ ಮನೆಯಲ್ಲಿದ್ದ ಅಮ್ಮನಿಗೆ ಗೊತ್ತಾಗದಂತೆ ತಂದು ನಡುಮನೆಯ ಬಾಗಿಲಿನ ಹಿಂದೆ ಒರಗಿಸಿದೆ. ಆಗಲೇ ಹತ್ತು ಗಂಟೆ ಹೊಡೆದು ಹೊಟ್ಟೆ ಚುರುಗುಟ್ಟುತ್ತಿತ್ತು.

ಛಟಛಟನೆ ಸಿಡಿಯುವ ಒಗ್ಗರಣೆ ಶಬ್ದದ ಜೊತೆಗೆ ಕಾದ ಸೌಟಿನಿಂದ ಒಗ್ಗರಣೆ ಇಳಿಬಿಡುವಾಗ ಬರುವ ಛುಂಯ್ ಶಬ್ದ, ಘಂ ಅಂತ ಮೂಗಿಗೆ ಬರುವ ಇಂಗಿನ ಸುವಾಸನೆ ಎಲ್ಲ ಸೇರಿ 'ಅಡುಗೆ ತಯಾರಿದೆ' ಎಂದು ಗೊತ್ತಾಯಿತು. ಸ್ನಾನ ಮಾಡಿ ಬಂದಾಗ ಅಮ್ಮ ನಡುಮನೆಯಲ್ಲಿ ತಟ್ಟೆಹಾಕಿ ಕಾಯುತ್ತಿದ್ದರು. "ನಿನಗಿಷ್ಟವೆಂದು ಹೆಸರು ಬೇಳೆ ತೋವ್ವೆ ಮಾಡಿದ್ದೀನಿ" ಎಂದು ಜಾಗ್ರತೆಯಾಗಿ ಪಾತ್ರೆ ಕೊನೆಗೆ ಸೌಟಿನ ತಳ ಒರಸಿ ತಟ್ಟೆಗೆ ಹಾಕಲು ಬಂದಾಗ ಎರಡು ತೊಟ್ಟು ನೆಲದ ಮೇಲೆ ಬಿದ್ದದ್ದು ಅಮ್ಮನಿಗೆ ಕಾಣಲಿಲ್ಲ. ರೆಡ್‌ಆಕ್ಸೈಡ್ ನೆಲದ ಮೇಲೆ ಬಿದ್ದ ನಿರಾಕಾರದ ಹಳದಿ ತೋವ್ವೆಗೂ ಸ್ವಲ್ಪ ಹೊತ್ತಿನ ಕೆಳಗಾದ ಪಾಪಕಾರ್ಯಕ್ಕೂ ತೀರಾ ಹೋಲಿಕೆಯ

ಅರಿವಾಗಿ ಹೊಟ್ಟೆ ತೊಳಸಿದಂತಾಯಿತು. "ನನಗೆ ಹಸಿವಿಲ್ಲ" ಅಂತ ಹೇಳಿ ಕೈ ತೊಳೆದೆ.

"ಯಾಕೋ ಬೆಳಗ್ಗಿನಿಂದ ಪೆಚ್ಚಾಗಿದ್ದಿಯಲ್ಲ?" ಅಮ್ಮ ರಾತ್ರಿ ಕೇಳಿದ ಪ್ರಶ್ನೆಗೆ ಉತ್ತರ ಕೊಡಲಿಲ್ಲ. "ಕೆಲಸದವಳು ನನ್ನೊಡನೆ ನಡೆದ ಸಂಗತಿಯನ್ನೆಲ್ಲ ಹೇಳಿದ್ದಾಳೆ. ಗುಬ್ಬಚ್ಚಿ ಮೊಟ್ಟೆ ಒಡೆದೆ ಅಂತ ಯಾಕೆ ಬೇಜಾರು ಮಾಡ್ತಿ? ಏನೋ ಗೊತ್ತಿಲ್ಲದೆ ತಪ್ಪುಮಾಡಿದ್ದಿ. ಏನ್ಮಾಡೋಣ ಹೇಳು. ಮುಂದಿನ ವಾರ ಆ ಚಂದ್ರಯ್ಯ ಗುಬ್ಬಿ ಜಾತ್ರೆಗೆ ಹೋಗುತ್ತಾರಂತೆ. ಅವರಿಗೆ ಇಪ್ಪತ್ತೈದು ರುಪಾಯಿ ಕೊಟ್ಟು ಗುಬ್ಬಮ್ಮನ ಹುಂಡಿಗೆ ನಿನ್ನ ಹೆಸರು ಹೇಳಿ ಹಾಕ್ಬಿಡಿ ಅಂತ ಹೇಳಿದ್ದೀನಿ. ಅವರು ಹೊರಡೋ ದಿವಸ ನೀನೇ ಹೋಗಿ ಬಾಳೆಹಣ್ಣು, ತೆಂಗಿನಕಾಯಿ ಕೊಟ್ಟು ಬಾ" ಅಂದ್ರು. ಸ್ವಲ್ಪ ಸಮಾಧಾನವಾಯಿತು.

ಗಂಟೆ ಹನ್ನೆರಡಾಗಿತ್ತು. ಸಮಯ ಹೋದದ್ದೇ ಗೊತ್ತಾಗಲಿಲ್ಲ. ಈ ಬಸವನಗುಡಿ ಮನೆ ಯಾವಾಗಲೂ ನೆನಪಿನ ಗಣಿ. ಎಲ್ಲಿ ಅಗೆದರೂ ಸಿಹಿಕಹಿ ಅನುಭವಗಳ ಕಣಜವೇ ಸಿಗುತ್ತೆ. ಅಮ್ಮ ಊಟಕ್ಕೆ ಕಾಯುತ್ತಾ ಇರ್ತಾರೆ ಅಂತ ಅರಿವಾಗಿ ಹೊರಡುವ ಆತುರವಾಯಿತು. ಎಲ್ಲ ಬಾಗಿಲುಗಳನ್ನೂ ಮುಚ್ಚಿದ್ದೇನೇಯೋ ಎಂದು ಖಾತ್ರಿಪಡಿಸಿ ಮನೆಗೆ ವಾಪಸ್ಸಾದೆ. ಅಮ್ಮ ಬಡಿಸಿದ ಊಟ ಮಾಡಿ ಹಾಗೆಯೇ ಚಾಪೆಯ ಮೇಲೆ ಉರುಳಿಕೊಂಡೆ. ಮಂಪರು ನಿದ್ದೆಯಲ್ಲಿ ಗುಬ್ಬಿ ಚಿತ್ರದ ಬಣ್ಣ ಬಣ್ಣದ ಚಿಟ್ಟೆಗಳು ಹಾರುವಂತೆ ಕಣ್ಮುಂದೆಯೇ ಕಾಣತೊಡಗಿದುವು.

ಮಾರನೆಯ ದಿನ ಭಾನುವಾರ. ನನ್ನ ಗೆಳೆಯ ಆಜಾದ್ "ಕೆಲಸದ ಮೇಲೆ ತುಮಕೂರಿಗೆ ಹೋಗ್ತಿದ್ದೀನಿ. ನೀನು ಬರ್‍ತಿಯಾ?" ಅಂತ ಕೇಳಿದಾಗ ನಾನೂ ಅವನ ಜೊತೆ ಮೋಟಾರ್‌ಬೈಕ್‌ನಲ್ಲಿ ಹೊರಟೆ. ತುಮಕೂರಿನಿಂದ ಕೇವಲ ೧೨ ಮೈಲಿ ದೂರವಿರುವ ಗುಬ್ಬಿಗೆ ಅಲ್ಲಿಂದ ನಾನೊಬ್ಬನೇ ಹೋದೆ. 'ಗುಬ್ಬಿ' ಒಂದು ಹಳ್ಳಿಯೂ ಅಲ್ಲ ಪಟ್ಟಣವೂ ಅಲ್ಲ. ಹೆಸರಿಗೆ ತಕ್ಕಂತೆ ಗುಬ್ಬಚ್ಚಿಯಷ್ಟೇ ಚಿಕ್ಕದಾದ ಜಾಗ. ಮೂವತ್ತು ವರ್ಷಗಳ ನಂತರ ಗುಬ್ಬಿಗೆ ಹೋಗಿ ಅಲ್ಲಿಯಾದರೂ ಗುಬ್ಬಚ್ಚಿಗಳಿವೆಯೇ? ಎಂದು ಹುಡುಕಾಡಿದೆ. ಅಲ್ಲಿಯೂ ಗುಬ್ಬಚ್ಚಿ ಕಾಣಲಿಲ್ಲ. ಗುಬ್ಬಿ ಕೂಡಾ ಪಾಳುಬಿದ್ದು ನಾನು ಚಿಕ್ಕಂದಿನಲ್ಲಿ ನೋಡಿದ ಗುಬ್ಬಮ್ಮನ ಜಾತ್ರೆ, ರಥ, ದೇವಸ್ಥಾನ ಎಲ್ಲ ಮುರುಕು ಸ್ಥಿತಿಯಲ್ಲಿ ಬಿದ್ದಿರುವುದನ್ನು ಕಂಡಾಗ ನಂಬಲೂ ಸಾಧ್ಯವಾಗಲಿಲ್ಲ. ಗುಬ್ಬಿಯ ಪ್ರತಿಯೊಂದು ದೃಶ್ಯವೂ ಕನಸು, ಕಲ್ಪನೆ ಹಾಗೂ ನೆನಪಿನ ಸರಪಳಿಯಲ್ಲಿ ಮಿಶ್ರಣಗೊಂಡಂತಾಗಿತ್ತು.

ಗುಬ್ಬಿಯ ಉತ್ತರ ತುದಿಯಲ್ಲಿದ್ದ ಚಿದಂಬರಾಶ್ರಮದ ಕಡೆಗೆ ನನ್ನ ಬೈಕನ್ನು ಓಡಿಸಿದೆ. ಆಶ್ರಮದೊಳಗೆ ಮತ್ತೇನು ಆಶಾಭಂಗ ಕಾದಿದೆಯೋ? ಎಂಬ ಯೋಚನೆಯಲ್ಲೇ ಒಳಹೊಕ್ಕೆ. ಆದರೆ ಸನಿಹದಿಂದಲೇ ಕೇಳಿಬಂದ ವೇದಘೋಷಗಳ ಪಠನ ಕಿವಿಗೆ ಹಿತವಾಗಿತ್ತು. ಆಶ್ರಮದ ಪ್ರಶಾಂತ ವಾತಾವರಣ ಮತ್ತು ಸೌಗಂಧಭರಿತ

ಪರಿಮಳ ನನ್ನ ಬಾಲ್ಯದ ನೆನಪುಗಳನ್ನು ಮರುಕಳಿಸುವಂತೆ ಮಾಡಿದುವು. ನಾಗಪುಷ್ಪವಲ್ಲಿ ಮರಗಳಿಂದ ಬರುತ್ತಿದ್ದ ಸುವಾಸನೆ ಆಹ್ಲಾದಕರವಾಗಿತ್ತು. ಆಶ್ರಮದ ಹಿಂಬದಿಯಲ್ಲಿ ಹರಿಯುತ್ತಿದ್ದ ನದಿ ಹಸುರಿಗೆ ಮೆರುಗುಕೊಟ್ಟಿತ್ತು. ಹಕ್ಕಿಗಳ ಇಂಚರದೊಂದಿಗೆ ದುಂಬಿಯ ಝೇಂಕಾರ ಬೆರೆತ ಈ ನಂದನವನದ ಮೂಲೆಮೂಲೆಯೂ ಪರಿಚಿತವೆನಿಸಿತು. ಆಗ ಹಠಾತ್ತನೆ ಜ್ಞಾಪಕ ಬಂತು. ಗುಬ್ಬಿಯ ಹೆಸರಿನ ಹಿಂದಿನ ಸ್ಥಳಪುರಾಣ. ಈ ಆಶ್ರಮದ ಗುಬ್ಬಿಯೊಂದು ದಿನಿತ್ಯವೂ ನದಿಯಲ್ಲಿ ಮಿಂದು ವೇದಪಠನದ ಸಮಯದಲ್ಲಿ ಗುರುಗಳೊಂದಿಗೆ ಕುಳಿತು ತಾನೂ ಇಂಪಾಗಿ ಹಾಡುತ್ತಿತ್ತಂತೆ! ವೇದಪಾರಂಗತನಾದ ಆ ಗುಬ್ಬಚ್ಚಿ ಹುಟ್ಟಿದ ಜಾಗಕ್ಕೆ 'ಗುಬ್ಬಿ' ಎಂದು ನಾಮಕರಣ ಮಾಡಿದರಂತೆ. ಆ ಗುಬ್ಬಿಯ ಹಾಡನ್ನು ಮತ್ತೆ ಕೇಳುವ ಭಾಗ್ಯ ನಮಗಿಲ್ಲವಾಯಿತಲ್ಲ ಎಂದು ಹತಾಶನಾಗಿ ಅಲ್ಲೇ ಇದ್ದ ಒಂದು ಬಂಡೆಯ ಮೇಲೆ ಕುಳಿತೆ.

ಹಕ್ಕಿಯೊಂದು ನನ್ನ ಬಳಿಯೇ ಹಾರಿಹೋದಾಗ ನನ್ನ ಕಣ್ಣುಗಳು ಅರಿವಿಲ್ಲದೆಯೆ ಅದನ್ನು ಹಿಂಬಾಲಿಸಿದುವು. ಗೂಡೊಂದರ ಬಳಿ ಕುಳಿತ ಆ ಹಕ್ಕಿಯ ಮೇಲೆ ನನ್ನ ಗಮನ ಕಡಿಮೆಯಾದರೂ "ಚಿಂವ್ ಚಿಂವ್" ಎಂಬ ಶಬ್ದ ಕೇಳಿಬಂದಾಗ ನನ್ನ ದೃಷ್ಟಿ ಮತ್ತು ಕಿವಿ ಎರಡೂ ಚುರುಕಾದುವು. ಅಮ್ಮ ಹಕ್ಕಿ ಹಸಿದ ಮರಿಗಳನ್ನು ಮುದ್ದಿಸಿ ಎಬ್ಬಿಸಿದಾಗ ಮತ್ತೆಲ್ಲಿಂದಲೋ 'ಪುರ್' ಅಂತ ಹಾರಿಬಂದ ಅಪ್ಪ ಹಕ್ಕಿ ಕೊಟ್ಟದ್ದು ಭರ್ಜರಿ ಊಟ. ಗುಬ್ಬಿಗಳ 'ಚಿಂವ್ ಚಿಂವ್' ಆಶ್ರಮದಿಂದ ಕೇಳಿ ಬರುತ್ತಿದ್ದ ವೇದಗೋಷ್ಠಿಯಂತೆ ಹಿತವಾಗಿತ್ತು.

**– ರವಿ ಗೋಪಾಲರಾವ್**

## ರವಿ ಗೋಪಾಲರಾವ್

ಅನಿವಾಸಿ ಭಾರತೀಯ ರವಿ ಗೋಪಾಲರಾವ್ ಮೂಲತಃ ಬೆಂಗಳೂರಿನವರು. ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಇಂಜಿನಿಯರಿಂಗ್ ಪದವಿ ಪಡೆದ ಇವರು ದೆಹಲಿ ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿಯನ್ನೂ ಅಮೇರಿಕಾದ ಯೂನಿವರ್ಸಿಟಿ ಆಫ್ ಪೆನ್ಸಿಲ್ವೇನಿಯದಿಂದ ಡಾಕ್ಟರೇಟ್ ಪದವಿಯನ್ನೂ ಪಡೆದಿದ್ದಾರೆ. ಕೆಲವು ವರ್ಷಗಳ ಕಾಲ ಇಸ್ರೋ ಸಂಸ್ಥೆಯಲ್ಲಿ ಸೇವೆಸಲ್ಲಿಸಿದ ಇವರು ಕಳೆದ ಮೂರು ದಶಕಗಳಿಂದ ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ್ದಾರೆ.

ಕನ್ನಡಸಾಹಿತ್ಯ, ಕಲೆ, ಚರಿತ್ರೆಯಲ್ಲಿ ಅಪಾರ ಆಸಕ್ತಿಯುಳ್ಳ ರವಿ ಗೋಪಾಲರಾವ್ ಅವರ ಸಣ್ಣಕತೆ, ವಿಡಂಬನೆ, ಲೇಖನಗಳು ಪ್ರಕಟಗೊಂಡಿವೆ. 'ಗುಬ್ಬಿಯ ಹುಡುಕಾಟದಲ್ಲಿ' ಕತೆಯನ್ನು ಗುರುಪ್ರಸಾದ್ ಕಾಗಿನೆಲೆಯವರು ಸಂಪಾದಿಸಿದ 'ಆಚೀಚೆಯ ಕತೆಗಳು' ಎಂಬ ಪುಸ್ತಕದಿಂದ ಆರಿಸಲಾಗಿದೆ.



## ಉತ್ತರಿಸಿರಿ.

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಅಮೇರಿಕಾದಿಂದ ಮನೆಗೆ ಬಂದ ಲೇಖಕರಿಗೆ ಬೆಳಗ್ಗಿನ ಹೊತ್ತು ಆದ ಅನುಭವವೇನು?
2. ಲೇಖಕರು ಗುಬ್ಬಿಯ ಗೂಡನ್ನು ಕೆಳಗೆ ಉರುಳಿಸಿದ ಸನ್ನಿವೇಶವನ್ನು ಬರೆಯಿರಿ.
3. ಲೇಖಕರಿಗೆ ಹೊಟ್ಟೆ ತೊಳಸಿದಂತಾದುದು ಯಾವಾಗ?
4. ಚಿದಂಬರಾಶ್ರಮದ ಪರಿಸರ ಹೇಗಿತ್ತು ?
5. ಚಿದಂಬರಾಶ್ರಮದ ಬಳಿಯಲ್ಲಿದ್ದ ಬಂಡೆಯಲ್ಲಿ ಲೇಖಕರು ಹತಾಶರಾಗಿ ಕುಳಿತಿದ್ದಾಗ ಕಂಡ ದೃಶ್ಯ ಯಾವುದು?

## ಹಿನ್ನೆಲೆ ಬರೆಯಿರಿ.

ಪಾಠದಲ್ಲಿ 'ಗುಬ್ಬಿ' ಎಂಬ ಸ್ಥಳನಾಮದ ಹಿನ್ನೆಲೆ ಇದೆಯಲ್ಲವೇ? ಇದೇ ರೀತಿ ನಿಮ್ಮ ಶಾಲೆಯ ಅಥವಾ ಮನೆಯ ಸಮೀಪದ ಸ್ಥಳಗಳ ಹೆಸರಿನ ಹಿನ್ನೆಲೆಗಳನ್ನು ಕೇಳಿ ತಿಳಿದು ಬರೆಯಿರಿ.

## ಸಂಕ್ಷಿಪ್ತವಾಗಿ ಬರೆಯಿರಿ.

'ಗುಬ್ಬಿಯ ಹುಡುಕಾಟದಲ್ಲಿ....' ಕಥೆಯ ಸಾರವನ್ನು ಸಂಕ್ಷಿಪ್ತವಾಗಿ ನಿಮ್ಮ ಮಾತುಗಳಲ್ಲಿ ಬರೆಯಿರಿ.

## ವಿಭಕ್ತಿಪ್ರತ್ಯಯ ಸೇರಿಸಿರಿ.

ಕೆಳಗೆ ನೀಡಲಾದ ಗದ್ಯಭಾಗದಲ್ಲಿ ಅಗತ್ಯವಿರುವಲ್ಲೆಲ್ಲ ಸೂಕ್ತವಾದ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಅಗತ್ಯವಾದ ಬದಲಾವಣೆಗಳೊಂದಿಗೆ ಪುನಃ ಬರೆಯಿರಿ:

ರಹೀಮನು ಮನೆ ಶಾಲೆ ಹೋಗುವ ದಾರಿ ಅನೇಕ ಮರಗಳಿದ್ದುವು. ಒಂದು ದಿನ ಅವನು ಶಾಲೆ ಮನೆ ಹಿಂದಿರುಗುತ್ತಿದ್ದಾಗ 'ಗರಗರ' ಶಬ್ದ ಕೇಳಿಸುತ್ತಿತ್ತು. ಯಾರೋ ಒಂದು ಮರ ಕಡಿಯುತ್ತಿದ್ದರು. ಆ ಮರ ಹಲವಾರು ಹಕ್ಕಿಗಳ ಗೂಡುಗಳಿದ್ದುವು. ಅವುಗಳಲ್ಲಿದ್ದ ಮೊಟ್ಟೆಗಳು ನೆಲ ಉರುಳಿಬಿದ್ದುವು. ರಹೀಮ ಹಕ್ಕಿಗಳ ಮೂಕವೇದನೆ ಅರ್ಥವಾಯಿತು. ಅವನ ಕಣ್ಣು ನೀರು ಹರಿಯಿತು.

# 4

# ವಿಷವರ್ತುಲ

ಮಾನವನ ಅತಿಯಾಸೆ ಹೇಗೆ ದುರಂತಕ್ಕೆ ಎಡೆಮಾಡುವುದು ಎಂಬುದಕ್ಕೆ ಒಂದು ಜ್ವಲಂತ ಉದಾಹರಣೆ ಕಾಸರಗೋಡಿನ ಎಂಡೋಸಲ್ಫಾನ್ ಪ್ರಕರಣ. ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾಸರಗೋಡಿನ ಹೆಸರು ವ್ಯಾಪಿಸಲು ಪರೋಕ್ಷವಾಗಿ ಕಾರಣವಾಯಿತು!


ಕಾಸರಗೋಡು ಗುಡ್ಡಬೆಟ್ಟಗಳ ಊರು. ಸುತ್ತಲೂ ಎತ್ತರದ ಪ್ರದೇಶಗಳಲ್ಲಿ ಕೇರಳ ಸರಕಾರದ ಗೇರು ನಿಗಮದ ತೋಟಗಳಿವೆ. ಹನ್ನೊಂದು ಪಂಚಾಯತುಗಳ ಸುಮಾರು ಹದಿನೈದು ಸಾವಿರ ಎಕರೆ ಪ್ರದೇಶದಲ್ಲಿ ಈ ತೋಟ ಹಬ್ಬಿಕೊಂಡಿದೆ. ಗೇರುಹೂವನ್ನು ಬಾಧಿಸುವ ಚಹಾಸೊಳ್ಳೆಯನ್ನು ನಿಯಂತ್ರಿಸಲು ಎಂಡೋಸಲ್ಫಾನ್ ಎಂಬ ಕೀಟನಾಶಕವನ್ನು ಸಿಂಪಡಿಸಲು ಆರಂಭಿಸಿದರು. ಮೊದಮೊದಲು ಕೈಚಾಲಿತ ಪಂಪು ಉಪಯೋಗಿಸುತ್ತಿದ್ದರು. ಆದರೆ ವಿಸ್ತಾರವಾದ ಪ್ರದೇಶಕ್ಕೆ ಅಲ್ಪಕಾಲದಲ್ಲಿ ಸಿಂಪಡಿಸುವಿಕೆ ನಡೆಸುವುದಕ್ಕೋಸ್ಕರ ಹೆಲಿಕಾಪ್ಟರ್ ಬಳಸಲು ತೀರ್ಮಾನ ಕೈಗೊಂಡರು. ಸುಮಾರು ಇಪ್ಪತ್ತೈದು ವರ್ಷಗಳ ಕಾಲ ನಿರಂತರವಾಗಿ ವಿಷಮಳೆ ಸುರಿಯಿತು.

ನಮ್ಮ ಜನರು ಗೇರುಕೃಷಿಯನ್ನು ಹಲವಾರು ಕಾಲದಿಂದ ರಾಸಾಯನಿಕ ಬಳಸದೆ ಮಾಡುತ್ತಿದ್ದಾರೆ. ಆದರೆ ಈ ತೋಟದವರು ವಿಷ ಸಿಂಪಡಿಸುವಿಕೆಗೆ ಹವಾಮಾನ ವೈಪರೀತ್ಯವನ್ನು ಹೊಣೆಮಾಡಿದರು. ಸೊಳ್ಳೆಯ ಮೇಲೆ ಗೂಬೆಕೂರಿಸುವ ವ್ಯರ್ಥಪ್ರಯತ್ನ ಮಾಡಿ ಪರಿಸರವನ್ನು ಮಲಿನಗೊಳಿಸಿದರು. ಜನರಿಗೆ ಯಾವುದೇ ಮಾಹಿತಿ ನೀಡದೆ, ಯಾವುದೇ ಮುಂಜಾಗ್ರತೆ ಕೈಗೊಳ್ಳದೆ ನಿರಂತರ ಧಾಳಿ ನಡೆಯಿತು. ನಿಗದಿಪಡಿಸಿದ್ದಕ್ಕಿಂತ ಅಧಿಕ ಪ್ರಮಾಣದ ವಿಷ ಬಳಸಲಾಯಿತು. ಜಲಮೂಲಗಳನ್ನು ನಿರ್ಲಕ್ಷಿಸಲಾಯಿತು. ಹೆಲಿಕಾಪ್ಟರಿಂದ ಬಿಡುಗಡೆಯಾದ ವಿಷಗಾಳಿ ಹತ್ತಾರು ಮೈಲಿ ದೂರಕ್ಕೂ ಪಸರಿಸಿತು. ಅಮಾಯಕರ ಜೀವಕ್ಕೆ ಮುಳುವಾಯಿತು.

ಎಂಡೋಸಲ್ಫಾನ್ ಒಂದು ರಾಸಾಯನಿಕ ಕೀಟನಾಶಕ. ಇದು ಕೀಟಗಳ ನರಮಂಡಲದ ಮೇಲೆ ವರ್ತಿಸಿ ಅವುಗಳನ್ನು ನಾಶಪಡಿಸುತ್ತದೆ. ಮಾತ್ರವಲ್ಲ ಗಾಳಿ, ನೀರು, ಆಹಾರದ ಮೂಲಕ ಮಾನವನ ಶರೀರವನ್ನು ಪ್ರವೇಶಿಸುತ್ತದೆ. ನಮ್ಮ ಶರೀರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ವಿಷ ಸೇರಿದರೆ ಕೂಡಲೇ ಸಾವು ಸಂಭವಿಸುತ್ತದೆ.

ಆದರೆ ಇಲ್ಲಿ ನಡೆದುದು ಸಣ್ಣ ಪ್ರಮಾಣದ ನಿರಂತರ ವಿಷಸೇವನೆ. ಇದು ಶರೀರದ ಒಳಗೆ ಕೊಬ್ಬಿನಲ್ಲಿ ಸಂಗ್ರಹವಾಗುತ್ತದೆ. ಯಕೃತ್ತು, ಮೂತ್ರಜನಕಾಂಗ, ಮೆದುಳು, ಅಸ್ಥಿಮಜ್ಜೆ ಮೊದಲಾದ ಅವಯವಗಳ ಮೇಲೂ ತನ್ನ ಪ್ರಭಾವವನ್ನು ಬೀರುತ್ತದೆ. ಹಲವಾರು ರೋಗಗಳನ್ನು ಉಂಟುಮಾಡುತ್ತದೆ. ಈ ವಿಷವು ಗರ್ಭಿಣಿಯರ ಶರೀರ ಪ್ರವೇಶಿಸಿದರೆ ಹುಟ್ಟುವ ಮಗುವಿನಲ್ಲಿ ನ್ಯೂನತೆಗಳು ಉಂಟಾಗುತ್ತವೆ. ಬುದ್ಧಿಮಾಂದ್ಯ, ಅಪಸ್ಮಾರ, ಉಬ್ಬಸ, ಕ್ಯಾನ್ಸರ್ ಇತ್ಯಾದಿ ರೋಗಗಳಿಗೂ ಸಾಧ್ಯತೆಯಿದೆ. ಅಂಗವೈಕಲ್ಯಕ್ಕೂ ಕಾರಣವಾಗುತ್ತದೆ.

ಮನುಕುಲದ ನಾಶಕ್ಕೆ ಕಾರಣವಾದ ಈ ಎಂಡೋಸಲ್ಫಾನ್ ಸಿಂಪಡಿಸುವಿಕೆಯ ವಿರುದ್ಧವಾಗಿ ದೇಶದ ಹಲವಾರು ಕಡೆಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯ ನಡೆಯಿತು. ಹಳ್ಳಿಗಳಲ್ಲಿ ಸ್ಲೈಡ್‌ಶೋಗಳ ಮೂಲಕ ಕೀಟನಾಶಕಗಳ ಬಳಕೆಯ ವಿರುದ್ಧ ಎಚ್ಚರಿಕೆ ಮೂಡಿಸಲಾಯಿತು. ಪತ್ರಿಕೆಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ವರದಿಗಳೂ ಚಿತ್ರಗಳೂ ಪ್ರಕಟವಾದುವು. ದೇಶವಿದೇಶಗಳ ಪತ್ರಕರ್ತರು ಇಲ್ಲಿಗೆ ಬಂದು ವರದಿ ಮಾಡಿದರು. ಪಡ್ರೆಯಲ್ಲಿ ಆರಂಭಗೊಂಡ ಹೋರಾಟ ಉಳಿದ ಗ್ರಾಮಗಳಿಗೂ ವಿಸ್ತರಿಸಿತು.



ರಾಷ್ಟ್ರೀಯ ಮಾನವಹಕ್ಕು ಆಯೋಗ ಇಲ್ಲಿಗೆ ಬಂದು ತನಿಖೆ ನಡೆಸಿ ಪರಿಹಾರ ನೀಡಲು ಆದೇಶಿಸಿದೆ. ಜಿಲ್ಲೆಯಲ್ಲಿ 'ಎಂಡೋಸಲ್ಫಾನ್ ಸೆಲ್' ಎಂಬ ಹೆಸರಿನ ಒಂದು ಘಟಕ ಆರಂಭಗೊಂಡಿದ್ದು ಪರಿಹಾರ ಕಾರ್ಯದ ಉಸ್ತುವಾರಿ ವಹಿಸಿಕೊಂಡಿದೆ. ಮರಣ ಹೊಂದಿದವರ ಆಶ್ರಿತರಿಗೆ ಮತ್ತು ಹಾಸಿಗೆ ಹಿಡಿದ ರೋಗಿಗಳಿಗೆ ಧನ ಸಹಾಯ ಘೋಷಣೆಯಾಗಿದೆ. ಅಂಗವೈಕಲ್ಯ ವಿರುವ ಮಕ್ಕಳಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆರೆದು ಅಲ್ಲಿ ಅವರಿಗೆ ಚಿಕಿತ್ಸೆ ಹಾಗೂ ತರಬೇತಿ ನೀಡುವ ಯೋಜನೆಯನ್ನು ರೂಪಿಸಲಾಗಿದೆ.

ಎಂಡೋಸಲ್ಫಾನ್ ಸಿಂಪಡಿಸುವಿಕೆಯ ಪರಿಣಾಮವು ಭೋಪಾಲ್ ಅನಿಲ ದುರಂತದ ಅನಂತರದ ಅತಿ ದೊಡ್ಡ ದುರಂತವೆಂದು ಹೇಳಲಾಗಿದೆ. ಇದರ ವಿರುದ್ಧ ನಡೆದ ಹೋರಾಟವು ಪರಿಸರದ ಉಳಿವಿಗಾಗಿ ನಡೆದ ಬಹುದೊಡ್ಡ ಕ್ರಾಂತಿ ಎನ್ನಬಹುದು. ಈ ಚಳುವಳಿ ಜನರಲ್ಲಿ ಕೀಟನಾಶಕಗಳ ದುರ್ಬಳಕೆಯ ಕುರಿತು ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದೆ.


ಹದಿಮೂರು ವರ್ಷಗಳ ಹಿಂದೆಯೇ ಈ ಸಿಂಪಡಿಸುವಿಕೆಯನ್ನು ನಿಲ್ಲಿಸಲಾಗಿದ್ದರೂ ಗೇರು ಇಳುವರಿ ಕಮ್ಮಿಯೇನೂ ಆಗಿಲ್ಲ. ಇತ್ತೀಚೆಗೆ ಇಲ್ಲಿ ಅಂಗವೈಕಲ್ಯದಿಂದ ಹುಟ್ಟುವ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಬುದ್ಧಿಮಾಂದ್ಯ ಮಕ್ಕಳ ಜನನ ಪ್ರಮಾಣ ಇಳಿದಿದೆ. ಅಪಸ್ಮಾರ ರೋಗಿಗಳ ಸಂಖ್ಯೆಯೂ ಕಡಿಮೆಯಾಗಿದೆ. ನಾಶವಾಗಿದ್ದ ಪ್ರಾಣಿಪಕ್ಷಿಗಳು, ಕ್ರಿಮಿಕೀಟಗಳು, ಜಲಚರಗಳು, ಉರಗಗಳು ಮತ್ತೆ ಕಾಣಸಿಕೊಳ್ಳುತ್ತಿವೆ. ಮಳೆಗಾಲದಲ್ಲಿ ಕಪ್ಪೆಗಳ ವಟಗುಟ್ಟುವಿಕೆ ಹಲವಾರು ವರ್ಷಗಳ ಅನಂತರ ನಮ್ಮೂರಲ್ಲಿ ಕೇಳಿಬರುತ್ತಿದೆ.

ಎಂಡೋ ವಿರುದ್ಧ ಜನಜಾಗೃತಿಯು ರಾಸಾಯನಿಕ ಹಾಗೂ ವಿಷಯುಕ್ತ ಕೀಟನಾಶಕಗಳನ್ನು ನಾವು ಹಂತಹಂತವಾಗಿ ಕೃಷಿಯಿಂದ ದೂರವಿರಿಸಬೇಕೆಂಬ ಪಾಠ ಹೇಳುತ್ತದೆ. ಸಾಧ್ಯವಾದಷ್ಟು ಸಾವಯವ ಕೃಷಿಯನ್ನೇ ಅವಲಂಬಿಸುವಂತೆ ಸೂಚಿಸುತ್ತದೆ. ಹಣ್ಣುಹಂಪಲು ಹಾಗೂ ತರಕಾರಿಗಳಿಗೆ ಬಳಸುವ ವಿಷವಸ್ತುಗಳು ನಮ್ಮ ಮಕ್ಕಳ ಭವಿಷ್ಯಕ್ಕೆ ಮಾರಕವಾಗುತ್ತವೆ. ಈ ವಿಷವರ್ತುಲದಿಂದ ಹೊರಗೆ ಬರಲು ಪ್ರಾಮಾಣಿಕ ಯತ್ನ ಅಗತ್ಯ. ಪ್ರತಿಯೊಂದು ಮನೆಯಲ್ಲೂ ಸಾಧ್ಯವಾದಷ್ಟು ತರಕಾರಿಗಳನ್ನು ಹಣ್ಣುಗಳನ್ನು ಬೆಳೆಯೋಣ. ನಮ್ಮ ಪರಿಸರವನ್ನು ರಕ್ಷಿಸಿ ಎಲ್ಲಾ ಜೀವಿಗಳಿಗೂ ಬದುಕಲು ಅವಕಾಶ ಕಲ್ಪಿಸೋಣ.

**– ಡಾ. ಮೋಹನ್ ಕುಮಾರ್ ವೈ.ಯಸ್.**

## ಡಾ. ಮೋಹನ್ ಕುಮಾರ್ ವೈ.ಯಸ್.

ಕಾಸರಗೋಡಿನ ಪ್ರಸಿದ್ಧ ಪರಿಸರವಾದಿ ಡಾ. ಮೋಹನ್ ಕುಮಾರ್ ವೈ.ಎಸ್. ಅವರು ವೃತ್ತಿಯಲ್ಲಿ ವೈದ್ಯರು. ಕುಂಬ್ಡಾಜೆ ಗ್ರಾಮದ ಏತಡ್ಕದಲ್ಲಿ ದಿ. ಸುಬ್ರಾಯ ಭಟ್ ಹಾಗೂ ದಿ. ಗಂಗಮ್ಮ ದಂಪತಿಗಳ ಪುತ್ರರಾಗಿ ೨೨-೦೨-೧೯೫೫ರಂದು ಜನಿಸಿದರು. ಏತಡ್ಕ, ವಿಟ್ಲ, ಪುತ್ತೂರುಗಳಲ್ಲಿ ಪ್ರಾಥಮಿಕ, ಪ್ರೌಢ, ಪದವಿಪೂರ್ವ ವಿದ್ಯಾಭ್ಯಾಸ ಪೂರೈಸಿದ ಇವರು ಮೈಸೂರಿನ ಸರಕಾರಿ ವೈದ್ಯಕೀಯ ವಿದ್ಯಾಲಯದಿಂದ ೧೯೮೨ರಲ್ಲಿ ವೈದ್ಯಕೀಯ ಪದವಿ ಪಡೆದರು. ಇವರು ಹಲವಾರು ಸಂಘ ಸಂಸ್ಥೆಗಳ ಗೌರವಕ್ಕೆ ಪಾತ್ರರಾಗಿದ್ದಾರೆ. ಮಲೇಶ್ಯದ ಪರಿಸರ ಸಂಸ್ಥೆಯಿಂದ ಅಂತಾರಾಷ್ಟ್ರೀಯ ಪ್ರಶಸ್ತಿ, ಮಣಪ್ಪುರಂ ಪರಿಸರ ಪ್ರಶಸ್ತಿ ಮೊದಲಾದುವು ಅವರಿಗೆ ದೊರೆತ ಪ್ರಮುಖ ಪ್ರಶಸ್ತಿಗಳಾಗಿವೆ. ಪ್ರಸ್ತುತ ಇವರು ಪೆರ್ಲ ಸಮೀಪದ 'ಸ್ವರ್ಗ' ಎಂಬಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಎಂಡೋಸಲ್ಫಾನ್ ಕೀಟನಾಶಕವು ಮಾನವನ ಶರೀರದ ಮೇಲೆ ಬೀರುವ ಪರಿಣಾಮಗಳು ಯಾವುವು?
2. ಎಂಡೋಸಲ್ಫಾನ್ ವಿರುದ್ಧವಾದ ಚಳುವಳಿ ಹೇಗೆ ನಡೆಯಿತು?
3. ರಾಷ್ಟ್ರೀಯ ಮಾನವಹಕ್ಕು ಆಯೋಗದ ತನಿಖಾ ವರದಿಯ ಪರಿಣಾಮವಾಗಿ ಆಗಿರುವ ಕಾರ್ಯಗಳೇನು?
4. ಎಂಡೋಸಲ್ಫಾನ್ ಸಿಂಪಡಿಸುವಿಕೆಯನ್ನು ನಿಲ್ಲಿಸಿದ ಬಳಿಕ ಆದ ಬದಲಾವಣೆಗಳು ಯಾವುವು?

## ಕರಪತ್ರ ರಚಿಸಿರಿ.

ಪರಿಸರ ಸಂರಕ್ಷಣೆ ಮತ್ತು ಸಾವಯವ ಕೃಷಿಯ ಕುರಿತಾಗಿ ಜನಜಾಗೃತಿ ಮೂಡಿಸಲು ಅಗತ್ಯವಾದ ಕರಪತ್ರವನ್ನು ತಯಾರಿಸಿರಿ.

## ಪದ ಬರೆಯಿರಿ.

ಕೆಳಗೆ ಕೊಡಲಾದ ಪದಗಳಲ್ಲಿ 'ಲೋಪಸಂಧಿ'ಯಾಗುವ ಪದಗಳನ್ನು ಆರಿಸಿ ಬರೆಯಿರಿ.

ಹುಲ್ಲೆಸಳು, ಸವಿಗನಸು, ಕಷ್ಟವಾಗು, ಕೊರಲುಕ್ಕಿ, ನಮ್ಮೂರು, ಕಿವಿಗೊಟ್ಟು, ನನಗರಿವು, ಸದ್ದೆಬ್ಬಿಸು, ದೂರವಿರಿಸು, ಕೆಳಗುರುಳಿತು, ಮುಳುವಾಯಿತು.

## ಪದಕೋಶ ರಚಿಸಿರಿ.

'ಪ್ರಕೃತಿಯ ಮಡಿಲಲ್ಲಿ' ಘಟಕದ ವಿವಿಧ ಪಾಠಗಳಲ್ಲಿ ಬಂದಿರುವ ಕಠಿಣಪದಗಳ ಅರ್ಥ ಬರೆದಿರುವಿರಲ್ಲವೇ? ಆ ಪದಗಳನ್ನು ಅಕಾರಾದಿಯಾಗಿ ಬರೆದು ಪದಕೋಶ ರಚಿಸಿರಿ.

# ಘಟಕ - 2

# ಬದುಕಿನ ಸವಾಲುಗಳು

## ಕಲಿಕಾ ಸಾಧನೆಗಳು

- ಕಥೆ, ಕವನ ಮೊದಲಾದ ಸಾಹಿತ್ಯ ಕೃತಿಗಳಲ್ಲಿರುವ ಸೌಂದರ್ಯಾಂಶಗಳನ್ನು ತಿಳಿದುಕೊಂಡು ಸ್ವಂತ ದೃಷ್ಟಿಕೋನದೊಂದಿಗೆ ಮೌಖಿಕವಾಗಿ ಮತ್ತು ಲಿಖಿತವಾಗಿ ಮಂಡಿಸುವುದು.
- ಗದ್ಯ ಮತ್ತು ಪದ್ಯಗಳ ಅರ್ಥವನ್ನು ತಿಳಿದುಕೊಂಡು ನಿರರ್ಗಳವಾಗಿ ಓದುವುದು ಮತ್ತು ಹಾಡುವುದು.
- ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಆಶಯಗಳನ್ನು ಶಿಷ್ಟಭಾಷೆಯಲ್ಲಿ ಬರೆದು ಮಂಡಿಸುವುದು.
- ನಿಯತಕಾಲಿಕಗಳಲ್ಲಿ ಬರುವ ವ್ಯಂಗ್ಯಚಿತ್ರಗಳು, ಅಡಿಟಿಪ್ಪಣಿಗಳು, ಇತ್ಯಾದಿಗಳ ಆಶಯಗಳನ್ನು ತಿಳಿದುಕೊಂಡು ಆಸ್ವಾದಿಸಿ ಸಮಾನವಾದವುಗಳನ್ನು ರಚಿಸುವುದು.
- ಸೂಕ್ತವಾದ ಪದ, ಪ್ರಯೋಗ, ಶೈಲಿ, ಇತ್ಯಾದಿಗಳನ್ನು ಬಳಸಿಕೊಂಡು ಕಥೆ, ಕವಿತೆ ಇತ್ಯಾದಿ ವಿವಿಧ ಭಾಷಾ ವ್ಯವಹಾರ ಪ್ರಕಾರಗಳನ್ನು ರಚಿಸುವುದು.
- ವಾಕ್ಯಗಳನ್ನು ವಿಶ್ಲೇಷಣೆ ಮಾಡಿ ಸಂಧಿಗಳನ್ನು ಗುರುತಿಸುವುದು.
- ಗದ್ಯ, ಪದ್ಯ ಮೊದಲಾದುವುಗಳಲ್ಲಿ ಬಳಕೆಯಾಗಿರುವ ಪದ, ಪ್ರಯೋಗ, ಶೈಲಿ ಇತ್ಯಾದಿಗಳ ಅರ್ಥವನ್ನು ತಿಳಿದುಕೊಂಡು ಹೊಸ ಸಂದರ್ಭಗಳಲ್ಲಿ ಪ್ರಯೋಗಿಸುವುದು.
- ಸೃಜನಾತ್ಮಕ ರಚನೆಗಳಲ್ಲಿರುವ ವಸ್ತು, ಶೈಲಿ, ಹಾಗೂ ಆಶಯಗಳನ್ನು ಅರ್ಥೈಸಿಕೊಂಡು ಬೇರೊಂದು ಪ್ರಕಾರಕ್ಕೆ ಬದಲಾಯಿಸುವುದು.

## ದೇವಾಂಶು ತಿವಾರಿ

“ನಿನ್ನ ಮಗ ಇಂದು ಅದ್ಭುತ ಕೆಲಸ ಮಾಡಿದ್ದಾನೆ!” ಮನೆಯ ಬಳಿ ತಲುಪಿದಾಕ್ಷಣ ಕೇರಿಯವರ ಈ ಮಾತು ಕೇಳಿದ ಶಶಿ ತಿವಾರಿಗೆ ಭಯವಾಯಿತು. ಆದರೆ ‘ಆತ ತನ್ನ ಗೆಳೆಯನ ಜೀವ ಉಳಿಸಿದ್ದಾನೆ’ ಎಂಬ ಸುದ್ದಿ ತಿಳಿದಾಗ ಸಂತೋಷವಾಯಿತು.

ಅಂದು 2012 ಜೂನ್ ತಿಂಗಳಿನ ಒಂದು ದಿನ. ಛತ್ತೀಸ್‌ಗಢದ ರಾಯಪುರದಲ್ಲಿನ ಒಂದು ಮನೆ. ಮನೆಯವರೆಲ್ಲ ಕೆಲಸದ ನಿಮಿತ್ತ ಹೊರಗೆ ಹೋಗಿದ್ದರು. ಆ ಮನೆಗೆ ದೆಹಲಿಯಿಂದ ಬಂದಿದ್ದ ಎಂಟುವರ್ಷದ ದೇವಾಂಶ ಎಂಬ ಬಾಲಕ ಮನೆಯ ಬಳಿ ಗೆಳೆಯರೊಂದಿಗೆ ಆಟವಾಡುತ್ತಿದ್ದ. ಮಕ್ಕಳು ಆಟವಾಡುತ್ತಾ ಮನೆಯ ಸಮೀಪದ ಚರಂಡಿಯ ಪಕ್ಕಕ್ಕೆ ಬಂದರು. ಅವರಲ್ಲೊಬ್ಬ ಇದ್ದಕ್ಕಿದ್ದಂತೆ ಚರಂಡಿಗೆ ಬಿದ್ದುಬಿಟ್ಟ. ದೇವಾಂಶು ಸ್ವಲ್ಪ ಸಮಯವನ್ನೂ ಹಾಳು ಮಾಡದೆ ಒಂದು ಕೈಯಲ್ಲಿ ಚರಂಡಿಯ ಮೇಲ್ಭಾಗವನ್ನು ಗಟ್ಟಿಯಾಗಿ ಹಿಡಿದುಕೊಂಡು ಚರಂಡಿಗೆ ಇಳಿದ. ತನ್ನ ಕಾಲುಗಳನ್ನು ಹಿಡಿದುಕೊಳ್ಳಲು ಆ ಗೆಳೆಯನಿಗೆ ಹೇಳಿದ. ಬಳಿಕ ಸಹಾಯಕ್ಕಾಗಿ ಜೋರಾಗಿ ಕಿರುಚಿದ. ಚರಂಡಿಗೆ ಬಿದ್ದ ಗೆಳೆಯ ದೇವಾಂಶುವಿನ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡ. ಇವರ ಬೊಬ್ಬೆ ಕೇಳಿ ತಕ್ಷಣ ಸ್ಥಳಕ್ಕೆ ಆಗಮಿಸಿದ ಸ್ಥಳೀಯರು ಇಬ್ಬರನ್ನೂ ಮೇಲಕ್ಕೆತ್ತಿ ರಕ್ಷಿಸಿದರು. ದೇವಾಂಶು ಎಂಬ ಈ ಪುಟಾಣಿಯ ಸಮಯಪ್ರಜ್ಞೆಗೆ 2013ನೇ ಸಾಲಿನ ಶೌರ್ಯ ಪ್ರಶಸ್ತಿ ಸಂದಿತು.

ಮೇಲೆ ನೀಡಲಾದ ಘಟನೆಯ ಕುರಿತು ನಿಮ್ಮ ಅನಿಸಿಕೆಯನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

1

# ತಾಳಿದವನು ಬಾಳಿಯಾನು

ಬೆಳಗ್ಗೆ ಹತ್ತೂವರೆಯ ಸಮಯ. ಫ್ಯಾಕ್ಟರಿಯಲ್ಲಿ ಕೂತಿದ್ದೆ. ತಲೆತುಂಬಾ ಸಾವಿರ ತಾಪತ್ರಯಗಳು. ಮೊನ್ನೆ ಸರಬರಾಜಾಗಬೇಕಾಗಿದ್ದ ಸಾಮಗ್ರಿ ಇನ್ನೂ ತಯಾರೇ ಆಗಿರಲಿಲ್ಲ. ಇದರ ಮಧ್ಯೆ ಪವರ್ ಷಟ್‌ಡೌನ್ ಬೇರೆ. ಸಾಲದ್ದಕ್ಕೆ ಬೆಳಗಾಗೆದ್ದು ಮೂರು ಜನ ಕೆಲಸಗಾರರು "ನಾಳೆ ಪಿತೃಪಕ್ಷ ಸಾರ್. ಸ್ವಲ್ಪ ಅಡ್ವಾನ್ಸ್ ಬೇಕು" ಅಂತ ಆದೇಶ ನೀಡಿ ಹೋಗಿದ್ದರು. ಸ್ವಲ್ಪ ಕೂಲ್‌ಡೌನ್ ಆಗೋಣ ಅಂತ 'ಎಕನಾಮಿಕ್ಸ್ ಟೈಮ್ಸ್' ಅನ್ನು ಕೈಯಲ್ಲಿ ಹಿಡಿದು, ಫ್ಯಾನ್ ಸ್ವಿಚ್ ಆನ್ ಮಾಡಿದೆ. ಪವರ್ ಷಟ್‌ಡೌನ್ ಮರೆತು ಹೋಗಿತ್ತು. 'ಥತ್' ಎನ್ನುತ್ತಾ ಜೇಬಿನಿಂದ ಕರ್ಚೀಫ್ ತೆಗೆದು ಮುಖ ಒರಸಿಕೊಳ್ಳುತ್ತಿದ್ದಾಗ ಒಬ್ಬ ವ್ಯಕ್ತಿ ಒಳಗೆ ಬಂದ. ಆರಡಿ ಎತ್ತರ, ಹೊರವಾದ ಗಡ್ಡಮೀಸೆ, ಬಲಕೈಗೆ ಉಕ್ಕಿನ ಕಡಗ, ಎಡಗೈನಲ್ಲಿ ಒಂದು ಧಡೂತಿ ಸೂಟ್‌ಕೇಸ್....

"ನಾನು ಚಂಡೀಗಢದಿಂದ ಬಂದೆ. ಕೆಲವು ಸುಂದರವಾದ ವಸ್ತುಗಳನ್ನು ತಂದಿರುವೆ. ತೋರಿಸಲೇ?" ಅಂತ ಹರಕುಮುರುಕು ಇಂಗ್ಲೀಷಿನಲ್ಲಿ ಕೇಳಿದ. ಅವನ ಕಷ್ಟ ನೋಡಲಾರದೆ ನಾನು

"ಮಾಫ್‌ಕೀಜಿಯೇ, ಆಜ್‌ಕಲ್ ಮೈ ಬಹುತ್ ಬಿಜಿ ಹ್ಞೂ. ಅಬ್ ಸಮಯ್ ನಹೀ ಹೈ. ಮುಝೆ ಡಿಸ್ಟರ್ಬ್ ಮತ್ ಕೀಜಿಯೇ" (ಕ್ಷಮಿಸಿ, ಈಗ ನಾನು ಬಹಳ ಒತ್ತಡದ ಕೆಲಸಗಳಲ್ಲಿದ್ದೇನೆ. ನನಗೆ ಸಮಯವಿಲ್ಲ. ನನಗೆ ಉಪಟಳ ಕೊಡಬೇಡಿ) ಅಂತ ಸ್ವಲ್ಪ ಒರಟಾಗಿಯೇ ಹೇಳಿದೆ. (ಮುಂದಿನ ಸಂಭಾಷಣೆಯೆಲ್ಲಾ ಹಿಂದಿಯಲ್ಲೇ ನಡೆಯಿತು)

ಆತ ಎಲ್ಲ ಸೇಲ್ಸ್‌ಮನ್‌ಗಳಂತೆ ಅಲ್ಲೇ ನಿಂತು ನನ್ನನ್ನು ಪೀಡಿಸಲಿಲ್ಲ. ಒಂದೆರಡು ಕ್ಷಣ ನನ್ನನ್ನೇ ದಿಟ್ಟಿಸಿ ನೋಡಿ ಒಂದು ತರಹ ಮುಗುಳ್ನಗೆ ನಕ್ಕು ಬಾಗಿಲತ್ತ ಹೊರಡಲು ಪ್ರಾರಂಭಿಸಿದ. ಅವನ ನಗು ನೋಡಿ ನನಗೆ ಕುತೂಹಲ ಮೂಡಿತು.

"ಯಾಕೆ ಆ ನಗು?" ಅಂತ ಕೇಳಿದೆ. "ಯಾವುದೋ ಒಂದು ಹಳೆಯ ಜಪಾನೀ ಕಥೆ ನೆನಪಿಗೆ ಬಂದು ನಗು ಬಂತು" ಅಂದ ಆ ಸರ್ದಾರ್ಜಿ.

"ಕೂತುಕೋ, ಅದೇನು ಆ ಜಪಾನೀ ಕಥೆ?" ಮುಂದಿನ ಸಂಚಿಕೆಗೆ ಸದಾ ಗ್ರಾಸ ಹುಡುಕುತ್ತಿದ್ದ ನನಗೆ ಇದೊಂದು ಸದವಕಾಶ ಅನ್ನಿಸಿತು. ಸರ್ದಾರ್ಜಿ ತನ್ನ ಕೈಲಿದ್ದ ಸೂಟ್‌ಕೇಸನ್ನು ವಾರಣವಾಗಿ ಗೋಡೆ ಬದಿಯಲ್ಲಿಟ್ಟು ಸಾವಧಾನವಾಗಿ ಕುರ್ಚಿಯ ಮೇಲೆ ಬಂದು ಕುಳಿತು ಕಥೆಯನ್ನು ಪ್ರಾರಂಭಿಸಿದ.

'ಒಬ್ಬ ರೈತ ಮತ್ತು ಅವನ ಮಗ ಒಂದು ಹಳ್ಳಿಯಲ್ಲಿ ಉತ್ತು, ಬಿತ್ತು ಜೀವನ ಸಾಗಿಸುತ್ತಿದ್ದರಂತೆ. ರೈತ ಬಹು ನಿಧಾನಸ್ಥ. ಮಗನದ್ದೋ ಬಲು ಆತುರದ ಸ್ವಭಾವ. ಒಂದು ದಿನ ಬೆಳಗ್ಗೆ ತಂದೆ, ಮಗ ತಾವು ಬೆಳೆದ ತರಕಾರಿಯನ್ನೆಲ್ಲಾ ಒಂದು ಎತ್ತಿನ ಬಂಡಿಗೆ ಹೇರಿ ಹತ್ತಿರದ ಪಟ್ಟಣದಲ್ಲಿ ಮಾರಲು ಹೊರಟರಂತೆ. ಒಂದು ದಿನ ಹಾಗೂ ಒಂದು ರಾತ್ರಿ ಬಿಡುವಿಲ್ಲದೇ ಬಂಡಿ ಓಡಿಸಿದರೆ ಮಾರನೇ ಮುಂಜಾನೆ ಪಟ್ಟಣ ಸೇರಿ ಎಲ್ಲರಿಗಿಂತ ಮುಂಚೆ ತಮ್ಮ ಸರಕನ್ನೆಲ್ಲಾ ಮಾರಿಬಿಡಬಹುದೆಂದು ಮಗನ ಅಂದಾಜು. ಹಾಗಾಗಿ ಗಾಡಿಯನ್ನು ಜೋರಾಗಿ ಓಡಿಸಲು ಶುರುಮಾಡಿದ. ಅಪ್ಪ "ಯಾಕೋ ಮಗು ಅಷ್ಟು ಅವಸರ, ಊರು ಎಲ್ಲಿ ಓಡಿಹೋಗುತ್ತೆ. ಗಾಡಿ ನಿಧಾನವಾಗಿ ನಡೆಸು. ಎತ್ತಿಗೂ ಆಯಾಸ ಆಗಲ್ಲ" ಅಂತ ಹೇಳಿಕೊಂಡೇ ಬಂದನಂತೆ. ಮಗ ಕೇಳಬೇಕಲ್ಲ. "ಬೆಳಗಿನ ಜಾವದಲ್ಲಿ ಪಟ್ಟಣ ಸೇರಿದರೆ ಪೂರ್ತಿ ಬಂಡಿ ತರಕಾರೀನ ಒಂದೇ ಲಾಟ್‌ನಲ್ಲಿ ಮಾರಿಬಿಡಬಹುದು. ಒಳ್ಳೇ ಬೆಲೇನೂ ಸಿಗುತ್ತೆ. ಬೇಗ ಪಟ್ಟಣ ಸೇರೋಣ" ಅಂತ ಹೇಳಿಕೊಂಡು ಮಗ ಗಾಡಿ ಓಡಿಸ್ತಾನೇ ಇದ್ದ. ಅಪ್ಪ ತಲೇ ಮೇಲಿನ ಹ್ಯಾಟನ್ನು ಕಣ್ಣಿನ ಮುಂದೆ ಎಳೆದು ಗಾಡಿಯಲ್ಲೇ ತೂಕಡಿಸಲು ಶುರುಮಾಡಿದ.

ನಾಲ್ಕು ತಾಸಿನ ಪ್ರಯಾಣ ಆದ ಮೇಲೆ ಒಂದು ಸಣ್ಣ ಮನೆ ಕಣ್ಣಿಗೆ ಬಿತ್ತು. "ಇದು ನಿನ್ನ ಚಿಕ್ಕಪ್ಪನ ಮನೆ. ಸ್ವಲ್ಪ ನಿಲ್ಲಿಸು. ಅವನು ಹೇಗಿದ್ದಾನೋ ನೋಡಿ ಬರೋಣ" ಎನ್ನುತ್ತಾ ಅಪ್ಪ ಗಾಡಿಯಿಂದ ಇಳಿದ. ಮನಸ್ಸಿನಲ್ಲಿ ತೀವ್ರ ಅಸಮಾಧಾನವಿದ್ದರೂ ಅಪ್ಪನಿಗೋಸ್ಕರ ಮಗ ಗಾಡಿ ನಿಲ್ಲಿಸಿ ತಾನೂ ಇಳಿದ. ಹಿರಿಯರಿಬ್ಬರು ಸಾವಧಾನವಾಗಿ ಹರಟೆ ಹೊಡೆದು, ಟೀ ಕುಡಿದು, ಹೊರಟಾಗ ಸೂರ್ಯ ನೆತ್ತಿಗೆ ಬಂದಿದ್ದ. ಅಪ್ಪ, ಮಗ ಪುನಃ ಗಾಡಿಯ ಬಳಿ ಬಂದಾಗ ಅಪ್ಪ "ಮಗೂ, ನಿನಗೆ ದಣಿವಾಗಿರಬಹುದು. ನಾನು ಹೊಡೀತೇನೆ ಗಾಡಿನ" ಎನ್ನುತ್ತಾ ಚಾಟಿಯನ್ನು ಕೈಗೆ ತೆಗೆದುಕೊಂಡ.

ಸ್ವಲ್ಪ ದೂರ ದಾರಿ ಸಾಗಿದ ಮೇಲೆ ರಸ್ತೆಯಲ್ಲೊಂದು ಕವಲು ಕಾಣಿಸಿತು. ಅಪ್ಪ ಗಾಡಿಯನ್ನು ಬಲಕ್ಕೆ ತಿರುಗಿಸಿದ.

"ಎಡದ ಕವಲಿನಲ್ಲಿ ಹೋದರೆ ಪಟ್ಟಣದ ಹಾದಿ ಹತ್ತಿರ" ಅಂತ ಮಗ

ಚಡಪಡಿಸಿದ. "ಅದು ನನಗೆ ಗೊತ್ತು ಮಗು. ಆದರೆ ಈ ಹಾದಿ ಹಂಸಗಳ ಕೊಳವನ್ನು ಬಳಸಿ ಹೋಗುತ್ತೆ" ಅಂದ ಅಪ್ಪ.

"ನಿನಗೆ ಸಮಯದ ಬಗ್ಗೆ ಗೌರವಾನೇ ಇಲ್ಲವೇ?" ಮಗ ಕೇಳಿದ.

"ಇದೆ ಮಗು. ಬಹಳ ಗೌರವ ಇದೆ. ಅದಕ್ಕೆ ಹಂಸಗಳನ್ನು ನೋಡಲು ಆ ಸಮಯವನ್ನು ಬಳಸುತ್ತೇನೆ" ಅಂದ ಆ ಹಿರಿಯ.

ಸಂಜೆ ಹೊತ್ತಿಗೆ ನಮ್ಮ ಯಾತ್ರಿಕರು ಹಂಸಗಳ ಕೊಳವನ್ನು ಸೇರಿದರು. ಕೊಳದಲ್ಲಿನ ಜೊಂಡುಗಳ ನಡುವೆ ಕಣ್ಣುಮುಚ್ಚಾಲೆಯಾಡುತ್ತಿದ್ದ ಹಂಸಗಳ ಹಿಂಡು ನಿಜಕ್ಕೂ ಮನಮೋಹಕವಾಗಿತ್ತು.

"ಮಗು, ಎತ್ತನ್ನು ಗಾಡಿಯಿಂದ ಬಿಚ್ಚು. ಬುತ್ತಿ ತಿಂದು ಇಲ್ಲಿಯೇ ರಾತ್ರಿ ವಿಶ್ರಮಿಸೋಣ" ಎನ್ನುತ್ತಾ ಅಪ್ಪ ಕೊಳದ ತಡಿಯಲ್ಲಿ ಕುಳಿತು ಕಾಲುಗಳನ್ನು ಕೊಳದ ನೀರಿನಲ್ಲಿ ಇಳಿಯಬಿಟ್ಟ.

"ನಿನ್ನ ಜೊತೆಯಲ್ಲಿ ಇದೇ ಕಡೆಯ ಬಾರಿ ನಾನು ಪ್ರಯಾಣ ಮಾಡೋದು. ತರಕಾರಿ ಮಾರಿ ದುಡ್ಡು ಗಳಿಸೋದಕ್ಕಿಂತ ಹಂಸಗಳನ್ನು ನೋಡೋದೇ ಮುಖ್ಯ ಆಯ್ತು ನಿನಗೆ" ಅಂತ ಗೊಣಗುತ್ತಾ ಮಗ ಎತ್ತನ್ನು ಬಿಚ್ಚಿದ.

ಬೆಳಗ್ಗೆ ಸೂರ್ಯ ಹುಟ್ಟುವುದಕ್ಕೆ ಮುಂಚೆಯೇ ಮಗ ಅಪ್ಪನನ್ನು ಎಬ್ಬಿಸಿ ಗಾಡಿಹೂಡಿದ. ಒಂದು ಮೈಲಿ ಸಾಗಿದ ನಂತರ ದಾರಿಯ ಬದಿಯಲ್ಲಿ ರೈತನೊಬ್ಬನ ಬಂಡಿಯ ಚಕ್ರ ಕೆಸರಿನಲ್ಲಿ ಹೂತುಹೋಗಿದ್ದು ಕಣ್ಣಿಗೆ ಬಿತ್ತು.

"ಪಾಪ, ಗಾಡಿ ಕೆಸರಿನಲ್ಲಿ ಸಿಕ್ಕಿದೆ. ಬಾ, ಅವನಿಗೆ ಸಹಾಯ ಮಾಡೋಣ" ಎನ್ನುತ್ತಾ ಅಪ್ಪ ಗಾಡಿಯಿಂದ ಇಳಿದ.

"ಇಷ್ಟು ಹೊತ್ತಿಗಾಗಲೇ ನಾವು ಪಟ್ಟಣದಲ್ಲಿರಬೇಕಾಗಿತ್ತು. ಈಗ ಇನ್ನೂ ತಡ ಆಗುತ್ತೆ" ಮಗ ಗೊಣಗಿದ.

"ಸಮಾಧಾನ ಮಾಡ್ಕೊಳ್ಳೋ, ಮುಂದೆ ನಿನಗೇ ಇಂತಹ ಪರಿಸ್ಥಿತಿ ಬಂದರೆ ಸಹಾಯ ಬೇಕಾಗೊಲ್ವೇ" ಅಂದ ಅಪ್ಪ.

ಕೆಸರಿನಲ್ಲಿ ಹೂತ ಗಾಡಿಯನ್ನು ಮೇಲಕ್ಕೆತ್ತಿ ಹೊರತರುವ ಹೊತ್ತಿಗೆ ಬೆಳಗ್ಗೆ ಎಂಟು ಘಂಟೆ ಆಗಿತ್ತು. ಒಮ್ಮೆಲೇ ಒಂದು ದೊಡ್ಡ ಮಿಂಚು ಆಕಾಶವನ್ನು ಕೋರೈಸಿತು. ಅದರೊಟ್ಟಿಗೇ ಗುಡುಗು, ಗುಡ್ಡದ ಆಚೆಬದಿಯ ಆಗಸದಲ್ಲಿ ಕಪ್ಪು ಮೋಡ ತುಂಬಿತು.

"ಓಹೋ, ಪಟ್ಟಣದಲ್ಲಿ ಭಾರೀ ಮಳೆ ಬರೋ ಹಾಗಿದೆ" ಅಂದ ಅಪ್ಪ.

"ಎಲ್ಲ ನಿನ್ನಿಂದಾನೇ ಹಾಳಾಯ್ತು. ಬೇಗ ಪಟ್ಟಣ ಸೇರಿದ್ರೆ ಇಷ್ಟು ಹೊತ್ತಿಗಾಗಲೇ



ಹಳ್ಳಿ ದಾರಿ ಹಿಡಿದಿರುತ್ತಿದ್ವಿ" ಎಂದು ಮಗ ಗೊಣಗಿದ.

"ಅವಸರ ಮಾಡ್ಕೋಬೇಡ್ವೋ, ತಾಳಿದವನು ಬಾಳಿಯಾನು" ಎಂದ ಅಪ್ಪ.

ಮಧ್ಯಾಹ್ನದ ಹೊತ್ತಿಗೆ ಅಪ್ಪ, ಮಗ ಗುಡ್ಡದ ನೆತ್ತಿಸೇರಿದ್ದರು. ಅವರು ಸೇರಬೇಕಾಗಿದ್ದ ಪಟ್ಟಣ ಗುಡ್ಡದ ಬುಡದಲ್ಲಿತ್ತು.

ಗುಡ್ಡದ ಮೇಲಿನಿಂದ ನೀರಿನಲ್ಲಿ ಮುಳುಗಿ ಹೋದ ಇಡೀ ಪಟ್ಟಣದ ಹೃದಯ ವಿದ್ರಾವಕ ದೃಶ್ಯ ಕಾಣಿಸುತ್ತಿತ್ತು. ಅಪ್ಪ, ಮಗ ತಮ್ಮ ಕಣ್ಣ ಮುಂದಿದ್ದ ದೃಶ್ಯವನ್ನು ಬಹು ವೇಳೆ ಮೂಕರಾಗಿ ನೋಡಿದರು. ಕೊನೆಗೆ ಮಗ "ಅಪ್ಪ, ನಿನ್ನ ಮಾತು ಈಗ ಅರ್ಥ ಆಯಿತು. ಬಾ ಹಳ್ಳಿಗೆ ಹಿಂತಿರುಗೋಣ" ಎನ್ನುತ್ತಾ ದಾರಿ ಬದಿಯಲ್ಲಿದ್ದ ಕೈಮರಕ್ಕೆ ಒರಗಿಸಿಟ್ಟದ್ದ ಚಾಟಿಯನ್ನು ಕೈಗೆ ತೆಗೆದುಕೊಂಡ.

ಗಾಡಿ ಹಿಂತಿರುಗುತ್ತಿದ್ದಂತೆ ಅಪ್ಪ ಕೈಮರದ ಎಡೆ ದೃಷ್ಟಿ ಹಾಯಿಸಿದ. 'ಹಿರೋಷಿಮಾ - 4 ಮೈಲಿ' ಎಂದು ಕಾಂಜಿ ಲಿಪಿಯಲ್ಲಿತ್ತು ಆ ಫಲಕ.

ಆಗಂತುಕನ ಕಥೆ ಕೇಳಿದ ಮೇಲೆ ಅವನಿಂದ ಒಂದು ವರ್ಣರಂಜಿತ ಪ್ಲಾಸ್ಟಿಕ್ ಪೆನ್ ಹೋಲ್ಡರನ್ನು ಕೊಂಡೆ. ಈಗಲೂ ಅದು ನನ್ನ ಮೇಜಿನ ಮೇಲಿದೆ. ಅದನ್ನು ನೋಡಿದಾಗಲೆಲ್ಲಾ ಆ ಗಡ್ಡ ಮೀಸೆಯ ಮುಗುಳ್ನಗೆ ನೆನಪಿಗೆ ಬರುತ್ತದೆ.

**- ಅಪರಂಜಿ ಶಿವು**

## ಅಪರಂಜಿ ಶಿವು



ಅಪರಂಜಿ ಶಿವು ಎಂಬ ಹೆಸರಿನಿಂದ ಪ್ರಸಿದ್ಧರಾದ ಎಂ. ಶಿವಕುಮಾರ್ ೧೩-೧೨-೧೯೬೦ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಪ್ರಸಿದ್ಧ ಹಾಸ್ಯಲೇಖಕರಾದ ಡಾ। ಎಂ. ಶಿವರಾಂ (ರಾಶಿ), ತಾಯಿ ನಾಗಮ್ಮ. ವೃತ್ತಿಯಲ್ಲಿ ಇಂಜಿನಿಯರಾದ ಇವರ ಪ್ರವೃತ್ತಿ ಸಾಹಿತ್ಯ ರಚನೆ. ಅಪರಂಜಿ ಎಂಬ ಹಾಸ್ಯ ಮಾಸಪತ್ರಿಕೆಯ ಸಂಪಾದಕರಾಗಿರುವ ಇವರ ಯಂತ್ರಕಥೆ, ಮಧುಚಂದ್ರ ಪುಸ್ತಕಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಪ್ರಸ್ತುತ ಅಗಸ್ತ್ಯ ಅಂತಾರಾಷ್ಟ್ರೀಯ ಸಾರ್ವಜನಿಕ ಸೇವಾ ಸಂಸ್ಥೆಯ ಗೌರವ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಾಳಿದವನು ಬಾಳಿಯಾನು ಪಾಠವನ್ನು ಬ್ರೇಕಿಲ್ಲದ ಬೆಳ್ಳಿಯ ತೇರು ಎಂಬ ಪುಸ್ತಕದಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ರೈತನ ಮಗನ ಅಂದಾಜು ಏನಾಗಿತ್ತು?
2. ರೈತನ ಮಗ ಅಸಮಾಧಾನಗೊಳ್ಳಲು ಕಾರಣವೇನು?
3. ದಾರಿಬದಿಯಲ್ಲಿ ಕಷ್ಟಕ್ಕೆ ಸಿಲುಕಿದ ರೈತನಿಗೆ ತಂದೆ, ಮಗ ಹೇಗೆ ಸಹಾಯ ಮಾಡಿದರು?
4. ಗುಡ್ಡದ ಮೇಲಿನಿಂದ ತಂದೆ ಮತ್ತು ಮಗ ನೋಡಿದ ದೃಶ್ಯ ಹೇಗಿತ್ತು?

## ಸಂವಾದಿಯಾದ ಪದ ಬಳಸಿರಿ.

ಕೆಳಗಿನ ಗದ್ಯಭಾಗದಲ್ಲಿ ಅಡಿಗೆರೆ ಎಳೆದ ಅನ್ಯದೇಶೀಯ ಪದಗಳಿಗೆ ಸಂವಾದಿಯಾದ ಕನ್ನಡ ಪದಗಳನ್ನು ಬಳಸಿಕೊಂಡು ಇನ್ನೊಂದು ಗದ್ಯಭಾಗವನ್ನು ರಚಿಸಿರಿ.

ಸುರೇಶನು ಚೆನ್ನೈಯ ಒಂದು ಫ್ಯಾಕ್ಟರಿಯಲ್ಲಿ ಉದ್ಯೋಗದಲ್ಲಿದ್ದನು. ಹಬ್ಬಕ್ಕೆಂದು ಸಂಬಳದ ಅಡ್ವಾನ್ಸ್ ಪಡೆದು ಊರಿಗೆ ಮರಳಲು ಬೇಕಾದ ಸಿದ್ಧತೆ ಮಾಡಿದನು. ಅವನು ತನ್ನ ತಂಗಿಗಾಗಿ ಒಂದು ಸುಂದರವಾದ ಗಿಫ್ಟ್ ಕೊಂಡುಕೊಳ್ಳಬೇಕೆಂದು ಅಂಗಡಿಗೆ ಹೋದನು.

## ಪದ ವಿಂಗಡಿಸಿ ವಾಕ್ಯ ರಚಿಸಿರಿ

ಅಡಿಗೆರೆ ಎಳೆದ ಪದಗಳನ್ನು ವಿಂಗಡಿಸಿ ಬರೆದು ಬೇರೊಂದು ವಾಕ್ಯ ರಚಿಸಿರಿ.

1. ಮಕ್ಕಳು ತಮ್ಮ ಒದ್ದೆಯಾದ ಕೊಡೆಗಳನ್ನು ಗೋಡೆಯ ಬದಿಯಲ್ಲಿಟ್ಟು ತರಗತಿಯನ್ನು ಪ್ರವೇಶಿಸಿದರು.
2. ಮಗನ ಮಾತಿನ ಬಗ್ಗೆ ತಂದೆಗೆ ತೀವ್ರವಾದ ಅಸಮಾಧಾನವಿದ್ದರೂ ತಾಳ್ಮೆಯಿಂದ ಹೇಗೆ ಮಾತನಾಡಬೇಕೆಂದು ತಿಳಿಸಿಕೊಟ್ಟರು.
3. ರಮೇಶನು ಕಲ್ಲಿನ ಗುಂಡನ್ನು ಮೇಲಕ್ಕೆತ್ತಿ ದೂರಕ್ಕೆ ಎಸೆದನು.

2

# ನಗುನಗುತ ಹಗುರಾಗು

ನಗುನಗುತ ಹಗುರಾಗು – ಓ ಮನವೇ!
ನಗುನಗುತ ಹಗುರವಾಗು!
ವಿಷಗಳಿಗೆ ಬಂದೀತು ರಸಗಳಿಗೆ ಸಂದೀತು
ನಗುನಗುತ ಹಗುರವಾಗು
ಬೆಳಕುನೆಳಲುಗಳಂತೆ ಸುಖದುಃಖ ಬಂದೀತು
ನಗುನಗುತ ಹಗುರವಾಗು
ಮೇರು ಪರ್ವತ ಗಾತ್ರ ಸುಖ ಕಳೆದುಹೋತು
ಕಣ್ಮುಚ್ಚಿ ತೆರೆವ ಮುನ್ನ!
ಸಾಸಿವೆಯೆ ಕಾಳನಿತು ಅಳಲಕರೆ ನಿಂತೀತು
ಕೊಂದು ಕಾಡುತಲಿ ನಿನ್ನ!
ವಿಷಗಳಿಗೆ ಬಂದಾಗ ಕೊರಗಿ ನೀ ಕುಗ್ಗದಿರು
ನಗುನಗುತ ಹಗುರವಾಗು!
ರಸಗಳಿಗೆ ಬಂದಾಗ ಹಿಗ್ಗಿ ಮೈಮರೆಯದಿರು
ಸಂಯಮದಿ ಭೋಗಿಯಾಗು
ಹಂಬಲಿಸಿ ಹಲುಬುತಿರೆ ಭುಗಿಭುಗಿಲು ಭುಗಿಲೆಂದು
ಹೆಚ್ಚೀತು ನಿನ್ನ ಅಳಲು
ಧೃತಿಗೆಡದೆ ನೀನಿರಲು ಹತ್ತಿರಕೆ ಬರಲಂದು
ನಾಚೀತು ನಿನ್ನ ಅಳಲು
ಕಾಲಚಕ್ರವನ್ನೊತ್ತಿ ಮುಂದುಮುಂದಕೆ ನೂಕಿ
ಹಗಲಿರುಳು ಬರುವವೊಲು
ಜೀವನದ ನೌಕೆಯನು ಮುಂದುಮುಂದಕೆ ನೂಕಿ

ಬಂದಾಗ ಗೆಲುವು ಸೋಲು!
ಸುಖದಲಿ ಹಾಲ್ಗಡಲಲ್ಲಿ ಮೆಲುಮೆಲನೆ ನಡೆದೀತು
ರಾಜಹಂಸನನು ಹೋಲಿ!
ದುಃಖದಾಳಿಯನಿಡಲು ಎಡವಿ ಮುಗ್ಗರಿಸೀತು
ಎಂತೊ ಸೇರುವುದು ತೇಲಿ!
ನಗೆಯಕಾಲಂದುಗೆಯು ಝಣಝಣರು ಎಂದೀತು
ಹರುಷದಲಿ ಮನವು ಉಕ್ಕಿ!
ಸತ್ವವುಡುಗುತ ದುಃಖ ಹೆಸರಳಿಸಿ ಹೋದೀತು
ನಗೆಯ ಸುಳಿಯೊಳಗೆ ಸಿಕ್ಕಿ!

**- ಡಾ. ಜಿ. ವರದರಾಜ ರಾವ್**

## ಜಿ. ವರದರಾಜರಾವ್



ಜಿ.ವರದರಾಜರಾವ್ ಬೆಂಗಳೂರಿನವರು. 03-01-1918ರಂದು ಜನಿಸಿದ ಇವರು ಸಂಶೋಧಕರಾಗಿ ಪ್ರಸಿದ್ಧರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದ್ದಾರೆ. ಭಾಷಾವಿಜ್ಞಾನ, ಛಂದಸ್ಸು ಮತ್ತು ವ್ಯಾಕರಣಕ್ಕೆ ಸಂಬಂಧಿಸಿದ ಅನೇಕ ಕೃತಿಗಳನ್ನು ಬರೆದಿದ್ದಾರೆ. ಹರಿದಾಸ ಸಾಹಿತ್ಯ ಪ್ರಕಾರಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಕುಮಾರರಾಮನ ಸಾಂಗತ್ಯಗಳು, ಪುರಂದರದಾಸರು ಮತ್ತು ಅವರ ಕೀರ್ತನೆಗಳು, ಕಲಿಕರ್ಣ, ಪಡಿನುಡಿ ಮುಂತಾದುವು ಅವರ ಪ್ರಮುಖ ಕೃತಿಗಳು. ಕೇಣಿ ಸಿದ್ಧಪ್ಪ ಚಿನ್ನದ ಪದಕ, ಹರಿದಾಸ ಸೇವಾ ಪ್ರಶಸ್ತಿ, ದೇವರಾಜಬಹದ್ದೂರ್ ಬಹುಮಾನ ಮೊದಲಾದುವು ಜಿ. ವರದರಾಜರಾವ್ ಅವರಿಗೆ ಸಂದಿವೆ. 13-11-1987ರಂದು ಅವರು ನಿಧನರಾದರು.

ನಗುನಗುತಾ ಹಗುರಾಗು ಎಂಬ ಪದ್ಯವನ್ನು ಕನ್ನಡ ಕಾವ್ಯಗಳ ಗೆಜ್ಜೆನಾದ ಎಂಬ ಸಂಪಾದಿತ ಕೃತಿಯಿಂದ ಆರಿಸಲಾಗಿದೆ.

KT-257-4/Kannada-8 AT

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. ಸುಖದುಃಖಗಳ ಬರುವಿಕೆಯನ್ನು ಯಾವುದಕ್ಕೆ ಹೋಲಿಸಲಾಗಿದೆ?
2. ನಾವು ಯಾವಾಗ ಕುಗ್ಗಬಾರದು?
3. ಅಳಲು ನಾಚುವುದು ಯಾವಾಗ?
4. ಜೀವನನೌಕೆಯು ಯಾವಾಗ ಎಡವಿ ಮುಗ್ಗರಿಸಿತು?

## ಆಶಯ ಬರೆಯಿರಿ.

ನಗುನಗುತ ಹಗುರಾಗು ಪದ್ಯದ ಆಶಯವನ್ನು ಬರೆಯಿರಿ.

## ಗದ್ಯಭಾಗ ರಚಿಸಿರಿ.

ಕೆಳಗೆ ಕೊಡಲಾದ ಗದ್ಯಭಾಗದಲ್ಲಿ ಅಡಿಗೆರೆ ಎಳೆದ ದ್ವಿರುಕ್ತಿಗಳನ್ನು ಉಪಯೋಗಿಸಿಕೊಂಡು ಬೇರೊಂದು ಗದ್ಯಭಾಗವನ್ನು ರಚಿಸಿರಿ.

ಸೂರ್ಯ ಮುಳುಗಲು ಇನ್ನೂ ಅರ್ಧಗಂಟೆಯಿರುತ್ತಿದ್ದಂತೆ ಮೋಡ ಕವಿಯಿತು. ಮಳೆ ಬರಬಹುದೆಂದು ಫಾತಿಮಾ ಬೇಗಬೇಗನೆ ಮನೆಯ ಕಡೆಗೆ ಹೆಜ್ಜೆಹಾಕಿದಳು. ಮುಂದೆಮುಂದೆ ಸಾಗುತ್ತಿದ್ದಂತೆ ದಾರಿಯ ಪಕ್ಕದ ಮೈದಾನದಲ್ಲಿ ನಗುನಗುತ್ತಾ ಆಟವಾಡುತ್ತಿದ್ದ ಮಕ್ಕಳನ್ನು ಕಂಡಳು. ಅಲ್ಲಿ ತನ್ನ ಮಗನನ್ನು ಕಂಡು ಕೂಗಿಕೂಗಿ ಕರೆದಳು. ಅಮ್ಮನ ಧ್ವನಿ ಕೇಳಿ ಇಬ್ರಾಹಿಂ ಆಟವನ್ನು ನಿಲ್ಲಿಸಿದನು. ಅಮ್ಮನ ಜೊತೆ ಮನೆಗೆ ಹೊರಟನು. ಆಗ ಮೆಲ್ಲಮೆಲ್ಲನೆ ಗಾಳಿ ಬೀಸತೊಡಗಿತು. ಹನಿಹನಿಯಾಗಿ ಮಳೆ ಸುರಿಯಿತು. ಅಮ್ಮ ಮಗ ಓಡೋಡಿ ಮನೆ ತಲುಪಿದರು.

## ಪದ ಬಲಾಯಿಸಿರಿ.

'ನಗುನಗುತ ಹಗುರಾಗು' ಪದ್ಯದಲ್ಲಿರುವ ಪದಗಳಿಗೆ ಬದಲಾಗಿ ಬೇರೆ ಪದಗಳನ್ನು ಉಪಯೋಗಿಸಿ ಸಾಲುಗಳನ್ನು ಪುನಃ ಬರೆಯಿರಿ.

ಉದಾ : ಮೇರು ಅದ್ರಿಯ ಗಾತ್ರ ಸುಖ ಸಂದು ಹೋತು

ಕಣ್ಮುಚ್ಚಿ ತೆರೆವ ಮೊದಲು

3

# ಫುಟ್ಬಾಲ್ ತರಬೇತಿ

ನನಗೆ ಫುಟ್‌ಬಾಲ್ ಎಂದರೆ ತುಂಬಾ ಪ್ರೀತಿ. ನಾನು ಒಂಬತ್ತನೆಯ ವಯಸ್ಸಿನಿಂದ ಈ ಆಟ ಆಡಲು ಪ್ರಾರಂಭಿಸಿದೆ. ಅನಂತರ ಫುಟ್‌ಬಾಲ್ ನನ್ನನ್ನು ಅಪ್ಪಿಕೊಂಡೇಬಿಟ್ಟಿತ್ತು. ನಾನು ಇಂದಿನ ಸ್ಥಿತಿಗೆ ತಲುಪಲು ಅದು ಬಹಳ ಸಹಾಯ ಮಾಡಿದೆ. ನ್ಯಾಷನಲ್ ಫುಟ್‌ಬಾಲ್ ಲೀಗ್‌ಗೆ ನಾನು ಆಯ್ಕೆಯಾಗಬೇಕೆಂಬ ಕನಸು ನನಸಾಗದಿದ್ದರೂ ಅದರ ಗುರಿ ಬೆಂಬತ್ತಿದ ಪರಿಣಾಮವಾಗಿ ಜೀವನದಲ್ಲಿ ಬಹಳಷ್ಟನ್ನು ಕಲಿತೆ.

ನನ್ನ ಫುಟ್‌ಬಾಲ್ ಗೀಳು ಪ್ರಾರಂಭವಾದದ್ದು ಮೂರು ದಶಕಗಳ ಹಿಂದೆ. ಆ ದಿನ ತಂದೆಯವರು ನನ್ನನ್ನು ಎಳೆದುಕೊಂಡು ಹೋಗಿ, ದಬ್ಬಿ, ಒದ್ದು ಫುಟ್‌ಬಾಲ್ ಲೀಗ್ ಒಂದಕ್ಕೆ ಸೇರಿಸಿದರು. ಅಲ್ಲಿಗೆ ಸೇರಿಕೊಳ್ಳುವುದಕ್ಕೆ ನನಗೆ ಆಸಕ್ತಿ ಇರಲಿಲ್ಲ. ಅದೂ ಅಲ್ಲದೇ ನಾನು ಎತ್ತರ ಮತ್ತು ಗಾತ್ರ ಎರಡರಲ್ಲಿಯೂ ಬಹಳ ಚಿಕ್ಕವನಾಗಿದ್ದೆ. ಆಜಾನುಬಾಹುವಂತಿದ್ದ ಕೋಚ್ ಗ್ರಹಾಂನ್ನು ಮೊದಲ ಬಾರಿ ನೋಡಿದ ಕೂಡಲೆ ಭಯದೊಡನೆ ಆಶ್ಚರ್ಯ ಮಿಶ್ರಿತ ಗಾಬರಿಯೂ ಉಂಟಾಯಿತು. ಅವರೊಬ್ಬ ಗಂಭೀರ, ಭಯಹುಟ್ಟಿಸುವ 'ಹಳೆಯ ಮಾದರಿ' ವ್ಯಕ್ತಿಯಾಗಿ ಗೋಚರಿಸಿದರು.

ಮೊದಲ ದಿನದ ಅಭ್ಯಾಸದಲ್ಲಿ ನಮಗೆಲ್ಲಾ ಸಾಯುವಷ್ಟು ನಡುಕ! 'ಫುಟ್‌ಬಾಲ್' ಕಲಿಸಲು ಕೋಚ್ ಬಳಿ 'ಚೆಂಡೇ' ಇಲ್ಲ!

ಧೈರ್ಯಮಾಡಿ ಹುಡುಗನೊಬ್ಬ "ಇಲ್ಲಿ ಚೆಂಡೇ ಇಲ್ಲವಲ್ಲ ಸಾರ್" ಎಂದು ಕೇಳಿದ ಪ್ರಶ್ನೆಗೆ ಸಿಕ್ಕ ಉತ್ತರ : "ನಿಮಗೆ ಅದರ ಅವಶ್ಯಕತೆ ಇಲ್ಲ!"

ಸ್ವಲ್ಪ ಹೊತ್ತು ಎಲ್ಲರೂ ನಿಶ್ಯಬ್ದವಾಗಿ ಅದರ ಬಗ್ಗೆಯೇ ಯೋಚಿಸಿದೆವು.

"ಫುಟ್‌ಬಾಲ್ ಅಂಗಳದಲ್ಲಿ ಎಷ್ಟು ಜನ ಆಟವಾಡುತ್ತಾರೆ?" ಗ್ರಹಾಂ ಪ್ರಶ್ನಿಸಿದರು.



"ಹನ್ನೊಂದು ಜನರ ಎರಡು ತಂಡ, ಅಂದರೆ ಇಪ್ಪತ್ತೆರಡು ಆಟಗಾರರು" ಎಂದು ಉತ್ತರಿಸಿದೆವು.

"ಒಂದು ನಿಗದಿತ ಸಮಯದಲ್ಲಿ ಅವರಲ್ಲಿ ಎಷ್ಟು ಜನರ ಬಳಿ ಫುಟ್‌ಬಾಲ್ ಇರುತ್ತದೆ?" ಎಂದು ಕೇಳಿದರು.

"ಯಾರೋ ಒಬ್ಬರ ಹತ್ತಿರ" ಎಂದೆವು.

"ಸರಿಯಾಗಿ ಹೇಳಿದಿರಿ. ಹಾಗಾದರೆ ಆ ಸಮಯದಲ್ಲಿ ಉಳಿದ ಇಪ್ಪತ್ತೊಂದು ಜನ ಏನು ಮಾಡಬೇಕು ಎಂಬುದನ್ನು ನಾವು ಕಲಿಯೋಣ!" ಎಂದರು.

ಆಟದ ಮೂಲ ಸೂತ್ರಗಳ ಬಗೆಗಿನ ತಿಳುವಳಿಕೆ ಗ್ರಹಾಂ ನಮಗೆ ನೀಡಿದ ಬಹುದೊಡ್ಡ ಉಡುಗೊರೆ. ಇದಕ್ಕೆ ಅವರು ಬಹಳ ಮಹತ್ವ ಕೊಡುತ್ತಿದ್ದರು. ಒಬ್ಬ ಕಾಲೇಜ್ ಪ್ರೊಫೆಸರ್ ಆಗಿ ಬಹಳಷ್ಟು ಮಕ್ಕಳು ಇದನ್ನು ನಿರ್ಲಕ್ಷಿಸಿರುವುದನ್ನು ನಾನು ಗಮನಿಸಿದ್ದೇನೆ. ಯಾವುದೇ ವಿಷಯವನ್ನು ಕಲಿಯಬೇಕಾದರೂ ಮೊದಲು ಅದರ ಮೂಲತತ್ವಗಳನ್ನು ಪ್ರತಿಯೊಬ್ಬರೂ ಅರ್ಥೈಸಿಕೊಳ್ಳಬೇಕು.

ತರಬೇತುದಾರ ನನಗೆ ಸಾಕಷ್ಟು ಕಷ್ಟದ ಕೆಲಸವನ್ನೇ ಕೊಡುತ್ತಿದ್ದರು. ನನಗೆ ಒಂದು ಅಭ್ಯಾಸ ಪಂದ್ಯ ನೆನಪಿದೆ. ಅದರಲ್ಲಿ ಗ್ರಹಾಂ "ನೀನು ಬಹಳ ತಪ್ಪು ಮಾಡುತ್ತಿದ್ದೀಯ ಪಾಶ್, ಮತ್ತೊಮ್ಮೆ ಸರಿಯಾಗಿ ಆಡು" ಎಂದು ಎಚ್ಚರಿಸಿದ್ದರು. ನಾನು ಅವರು ಹೇಳಿದ ಹಾಗೆಯೇ ಆಡಲು ಪ್ರಯತ್ನಿಸಿದೆ. ಆದರೆ ಪ್ರಯತ್ನ ಸಫಲವಾಗಲಿಲ್ಲ. ಆ ಪಂದ್ಯದಲ್ಲಿ ನಾನು ಸಾಕಷ್ಟು ತಪ್ಪುಗಳನ್ನು ಮಾಡುತ್ತಿದ್ದೆ. ಇದನ್ನು ಗಮನಿಸಿದ ಗ್ರಹಾಂ "ಪಾಶ್, ನೀನು ಪಂದ್ಯದಲ್ಲಿ ಅಭ್ಯಾಸ ಮಾಡುತ್ತಿರುವೆ" ಎಂದು ಗದರಿದರು. ಪಂದ್ಯ ಕೊನೆಗೊಂಡು ಹೊರಬಂದಾಗ ಅವರ ಸಹಾಯಕ ತರಬೇತುದಾರ ನನ್ನ ಬಳಿ ಬಂದು ನನ್ನನ್ನು ಸಮಾಧಾನ ಮಾಡಿದರು. "ತರಬೇತುದಾರ ಗ್ರಹಾಂ ನಿನಗೆ ಚೆನ್ನಾಗಿ ಬೈದರು ಅಲ್ಲವೇ?" ಎಂದು ಕೇಳಿದರು.

ನಾನು ಸುಮ್ಮನೆ 'ಹೌದು' ಎಂದ ತಲೆಯಾಡಿಸಿದೆ.

"ಅದು ಒಳ್ಳೆಯದೇ ಆಯಿತು. ಯಾವಾಗ ನೀನು ಸರಿಯಾದ ಮಾರ್ಗದಲ್ಲಿ ಹೋಗುತ್ತಿಲ್ಲದಿದ್ದರೂ ಯಾರೂ ಏನನ್ನೂ ಹೇಳದೆ ಸುಮ್ಮನಿರುತ್ತಾರೋ ಆಗ ಅವರೆಲ್ಲರೂ ನಿನ್ನನ್ನು ಕಡೆಗಣಿಸಿರುವರೆಂದೇ ಅರ್ಥ" ಎಂದರು.

ಈ ಘಟನೆ ನನ್ನ ಜೀವನದಲ್ಲಿ ಒಳ್ಳೆಯ ಪಾಠವನ್ನೇ ಕಲಿಸಿತ್ತು. ನೀವು ಅಡ್ಡದಾರಿಯಲ್ಲಿ ಹೋಗುತ್ತಿದ್ದರೂ ಯಾರೂ ತಿದ್ದುವ ಕಷ್ಟ ತೆಗೆದುಕೊಳ್ಳುತ್ತಿಲ್ಲ ಎಂದರೆ, ಅದು ನೀವು ಇರಬೇಕಾದ ಸರಿಯಾದ ಸ್ಥಳವಲ್ಲ ಎಂದರ್ಥ. ನಿಮ್ಮನ್ನು ವಿಮರ್ಶಿಸುವ, ಟೀಕಿಸುವ ಮತ್ತು ನಿಮ್ಮ ತಪ್ಪುಗಳನ್ನು ಎತ್ತಿತೋರಿಸುವವರು ಬಹಳಷ್ಟು ಬಾರಿ ನಿಮ್ಮನ್ನು ಅತಿಯಾಗಿ ಪ್ರೀತಿಸುತ್ತಾರೆ. ನಿಮ್ಮನ್ನು ಇನ್ನೂ ಉನ್ನತ ಸ್ಥಾನದಲ್ಲಿ ನೋಡಲು ಬಯಸುತ್ತಾರೆ. ಇದು ಕಟುಸತ್ಯ.

ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ 'ಮಾನ್ಯತೆ' ಕೊಡುವ ಮಾತು ಕೇಳಿಬರುತ್ತಿದೆ. 'ಮಾನ್ಯತೆ' ಯಾರಾದರೂ ನೀಡುವ ವಸ್ತುವಲ್ಲ. ಅದನ್ನು ಅವರೇ ಗಳಿಸಿಕೊಳ್ಳಬೇಕು. ಗ್ರಹಾಂ ಇದರ ಬಗ್ಗೆ ಸಾಕಷ್ಟು ಕೃಷಿ ಮಾಡಿದ್ದರು. ಮಕ್ಕಳು ಆತ್ಮಗೌರವ ಸಂಪಾದಿಸಿಕೊಳ್ಳುವ ಮಾರ್ಗವೊಂದನ್ನು ಅವರು ಕಂಡುಕೊಂಡಿದ್ದರು. ಅದು ಮಕ್ಕಳ ಸಾಮರ್ಥ್ಯಕ್ಕೂ ಮೀರಿದ ಕೆಲಸವನ್ನು ಕೊಟ್ಟು ಸತತ ಪರಿಶ್ರಮದ ಮೂಲಕ ಅದನ್ನು ಸಾಧಿಸಬಲ್ಲೆ ಎಂಬ ಆತ್ಮವಿಶ್ವಾಸ ಗಳಿಸಿಕೊಡುವುದು.

ನಾನು ಗ್ರಹಾಂನನ್ನು ಮೊದಲಬಾರಿ ಭೇಟಿಯಾದಾಗ ಜಾಣ್ಮೆ ಇಲ್ಲದ ಹಾಗೂ ದೇಹದಾರ್ಢ್ಯವಿಲ್ಲದ ಹುಡುಗನಾಗಿದ್ದೆ. ಆದರೆ ಶಕ್ತಿಮೀರಿ ಪ್ರಯತ್ನಪಟ್ಟರೆ ಅಸಾಧ್ಯವಾದ ಕೆಲಸಗಳನ್ನು ಖಂಡಿತಾ ಮಾಡಬಹುದು ಎಂಬುದನ್ನು ಗ್ರಹಾಂ ಮನವರಿಕೆ ಮಾಡಿಕೊಟ್ಟಿದ್ದರು. ಈಗ 47 ವರ್ಷ ತುಂಬಿದ ನಂತರವೂ ನಾನು ಆಟಗಾರರಿಗೆ ಫುಟ್‌ಬಾಲ್ ಆಟದ ಸೂಕ್ಷ್ಮಗಳನ್ನು ಯಾವುದೇ ತರಬೇತುದಾರ ಹೆಮ್ಮೆಪಡುವಂತೆ ವಿವರಿಸಬಲ್ಲೆ.

ಇಂದಿನ ದಿನಗಳಲ್ಲಿ ಗ್ರಹಾಂನಂತಹ ತರಬೇತುದಾರರನ್ನು ಯುವ ಕ್ರೀಡಾ ಒಕ್ಕೂಟದಿಂದ ಹೊರಹಾಕಿಯಾರು. ಅವರು ತೀರಾ ಕಠಿಣ ತರಬೇತುದಾರನೆಂದು ಪೋಷಕರೇ ದೂರಿಯಾರು.

ನನಗೆ ಮತ್ತೊಂದು ಪಂದ್ಯ ನೆನಪಿದೆ. ಅದರಲ್ಲಿ ನಾವು ಅತಿ ಕಳಪೆ ಪ್ರದರ್ಶನ ನೀಡುತ್ತಿದ್ದೆವು. ಅರ್ಧವಿರಾಮದಲ್ಲಿ ನೀರು ಕುಡಿಯಲು ಧಾವಿಸಿದಾಗ ಗ್ರಹಾಂ ನಮ್ಮನ್ನು ನೀರು ಕುಡಿಯಲು ಬಿಡದೆ ದೂರ ತಳ್ಳಿಬಿಟ್ಟರು. ಅವರಿಗೆ ಆ ಕ್ಷಣ ಬಹಳ ಕೋಪ ಬಂದಿತ್ತು. "ದೇವರೇ! ಆಟ ಪ್ರಾರಂಭವಾದಾಗಿನಿಂದ ಈಗಲೇ ನೀವು ಇಷ್ಟು ಚುರುಕಿನಿಂದಿರುವುದು!" ಎಂದರು. ನಾವು ಆಗಿನ್ನೂ ಹನ್ನೊಂದು ವರ್ಷದ ಹುಡುಗರು. ಗ್ರಹಾಂನ ಆರ್ಭಟವನ್ನು ನೋಡಿ ಅವರು ಎಲ್ಲಿ ನಮ್ಮೆಲ್ಲರನ್ನೂ ಹಿಡಿದು ಚಚ್ಚಿಬಿಡುತ್ತಾರೋ ಎಂದು ಗಾಬರಿಯಾಗಿತ್ತು. "ನೀರು ಬೇಕಾ ನಿಮಗೆ" ಎಂದು ಹೇಳಿ, ನೀರು ತುಂಬಿದ್ದ ಬಿಂದಿಗೆಯನ್ನು ಎತ್ತಿ ಎಲ್ಲಾ ನೀರನ್ನು ನೆಲಕ್ಕೆ

ಸುರಿದುಬಿಟ್ಟರು. ಸಹ ತರಬೇತುದಾರನಿಗೆ "ಮುಂದಿನ ಸಾಲಿನ ರಕ್ಷಣಾ ಆಟಗಾರರಿಗೆ ಬೇಕಾದರೆ ಸ್ವಲ್ಪ ನೀರು ಕೊಡು. ಅವರು ಚೆನ್ನಾಗಿ ಆಡಿದರು" ಎಂದು ಹೇಳಿದ್ದು ನಮಗೆ ಕೇಳಿಸಿತು.

ಇಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ಗ್ರಹಾಂ ಯಾವ ಮಕ್ಕಳನ್ನೂ ಅಪಾಯಕ್ಕೆ ಒಡ್ಡುತ್ತಿರಲಿಲ್ಲ. ಅವರು ಸದಾ ಶಿಸ್ತಿಗೆ ಬಹಳ ಪ್ರಾಮುಖ್ಯ ಕೊಡುತ್ತಿದ್ದರು. ಅದೂ ಅಲ್ಲದೆ ಅದು ಚಳಿಗಾಲವಾದ್ದರಿಂದ ದಿನದ ಮೊದಲ ಭಾಗದಲ್ಲಿ ದೇಹಕ್ಕೆ ಸಾಕಷ್ಟು ನೀರು ಪೂರೈಕೆಯಾಗುತ್ತಿತ್ತು. ನೀರಿನ ದಾಹ ನಮ್ಮ ದೇಹದಲ್ಲಿ ನೀರನ್ನು ಹೆಚ್ಚು ಮಾಡುತ್ತಿತ್ತೇ ವಿನಃ ಕಡಿಮೆ ನೀರನ್ನೇನೂ ಪೂರೈಸುತ್ತಿರಲಿಲ್ಲ. ಅದಾಗ್ಯೂ ಇಂದಿನ ದಿನಗಳಲ್ಲಿ ಆ ಘಟನೆ ನಡೆದಿದ್ದರೆ ಆಟ ನೋಡಲು ಕುಳಿತಿರುತ್ತಿದ್ದ ಪೋಷಕರು ಕ್ಲಬ್ಬಿನ ಮೇಲಧಿಕಾರಿಗಳಿಗೆ ದೂರವಾಣಿಯ ಮೂಲಕ ದೂರು ನೀಡುತ್ತಿದ್ದರು. ಇಲ್ಲವೇ ಅವರ ವಕೀಲರನ್ನು ಅಲ್ಲಿಗೇ ಕರೆಸುತ್ತಿದ್ದರು.

ಅತ್ಯಂತ ಬೇಸರದ ಸಂಗತಿಯೆಂದರೆ ಇಂದಿನ ಮಕ್ಕಳನ್ನು ಪೋಷಕರು ಸ್ವಲ್ಪವೂ ದೇಹಶ್ರಮವಾಗದಂತೆ ನೋಡಿಕೊಳ್ಳುತ್ತಾರೆ. ಹಾಗಾಗಿಯೇ ಮಕ್ಕಳು ಬಹಳ ಸೂಕ್ಷ್ಮವಾಗಿಬಿಟ್ಟಿದ್ದಾರೆ. ಈಗ ಕುಳಿತು ಅಂದಿನ ನನ್ನ ಪರಿಸ್ಥಿತಿಯನ್ನು ನೆನಪಿಸಿಕೊಂಡು ವಿಶ್ಲೇಷಿಸಿಕೊಳ್ಳುತ್ತೇನೆ. ಹೌದು, ನನಗೆ ತುಂಬಾ ಬಾಯಾರಿಕೆಯಾಗಿತ್ತು. ಆದರೆ ಅದಕ್ಕಿಂತ ಹೆಚ್ಚಾಗಿ ಅವಮಾನವಾಗಿತ್ತು. ನಾವೆಲ್ಲರೂ ತರಬೇತುದಾರ ಗ್ರಹಾಂನ ನಿರೀಕ್ಷೆಗೆ ತಕ್ಕಂತೆ ಆಡದೆ ವಿಫಲರಾಗಿದ್ದೆವು. ಫುಟ್‌ಬಾಲ್ ಅಂಗಳದಲ್ಲಿ ನಾವು ಅನುಭವಿಸಿದ ಅವಮಾನವನ್ನು ಇನ್ನೆಂದೂ ಮರೆಯದ ಹಾಗೆ ಗ್ರಹಾಂ ನಮಗೆ ತೋರಿಸಿಕೊಟ್ಟಿದ್ದರು. ಅವರು ಸರಿಯಾದ ನಿರ್ಧಾರವನ್ನೇ ತೆಗೆದುಕೊಂಡಿದ್ದರು. ನಾವು ಆಟದಲ್ಲಿ ತೋರಿಸಿದ ಆಸಕ್ತಿಗಿಂತ ನೀರಿಗಾಗಿ ತೋರಿದ ಆತುರತೆಯೇ ಹೆಚ್ಚಾಗಿತ್ತು. ಅವರು ನಮ್ಮೊಂದಿಗೆ ಆ ರೀತಿ ವರ್ತಿಸಿದ್ದಕ್ಕೆ ನಮಗೆ ಕಾರಣ ತಿಳಿದಿತ್ತು. ಆಟದ ಎರಡನೇ ಭಾಗದಲ್ಲಿ ನಮ್ಮ ಎಲ್ಲ ಸಾಮರ್ಥ್ಯವನ್ನು ಪಣಕ್ಕಿಟ್ಟು ಆಡಿದೆವು. ಗೆಲುವು ನಮ್ಮದಾಯಿತು.

ಬದುಕಿನಲ್ಲಿ ಆ ದಿನಗಳು ಕಳೆದುಹೋದ ನಂತರ ಗ್ರಹಾಂರನ್ನು ನಾನು ನೋಡಿಯೇ ಇಲ್ಲ. ಆದರೆ ನನ್ನ ಮನಸ್ಸಿನಲ್ಲಿ ಅವರು ಸದಾ ನೆಲೆನಿಂತಿದ್ದಾರೆ. ಈಗಲೂ ಹೆಚ್ಚುಹೆಚ್ಚು ಕೆಲಸ ಮಾಡುವಂತೆ ಪ್ರೇರೇಪಿಸುತ್ತಿರುತ್ತಾರೆ. ನನ್ನ ಬದುಕಿಗೊಂದು ಹೊಸ ತಿರುವನ್ನು ಕೊಟ್ಟವರಲ್ಲಿ ಅವರೊಬ್ಬರು.

ಮೊದಲನೆಯದಾಗಿ ಮಕ್ಕಳನ್ನು ಸಂಘಟಿತ ಕ್ರೀಡೆಗಳಲ್ಲಿ ಅಂದರೆ ಹಾಕಿ, ಫುಟ್‌ಬಾಲ್, ಈಜು ಕಲಿಕೆಗೆ ಕಳುಹಿಸುವಾಗ ನಮ್ಮಲ್ಲಿ ಹೆಚ್ಚಿನವರಿಗೂ ಆಟದ ಸೂಕ್ಷ್ಮಗಳನ್ನು ಕಲಿಸುವುದಷ್ಟೇ ಮುಖ್ಯವಾಗಿರುತ್ತದೆ. ಆದರೆ ಅದಕ್ಕಿಂತ ಹೆಚ್ಚಾಗಿ

ಅವರು ಕಲಿಯಬೇಕಾದುದು ತಂಡದಲ್ಲಿ ಕೆಲಸಮಾಡುವುದು (Team work), ದೃಢ ನಿರ್ಧಾರದ ಸತತ ಪ್ರಯತ್ನ, ಕಷ್ಟ ಸಹಿಷ್ಣುತೆ, ಕ್ರೀಡಾಮನೋಭಾವ, ಪರಿಶ್ರಮದ ಮೌಲ್ಯ ಮತ್ತು ಕಠಿಣ ಸಮಯವನ್ನು ಎದುರಿಸುವ ಎದೆಗಾರಿಕೆ. ಈ ರೀತಿಯ ಪರೋಕ್ಷ ಕಲಿಕೆಯಲ್ಲಿ ಎರಡು ವಿಧ. ಮೊದಲನೆಯದು ಪ್ರಜ್ಞಾಪೂರ್ವಕ ಕಲಿಕೆ. ಫುಟ್‌ಬಾಲ್ ಅಂಗಳದಲ್ಲಿನ ಆಟಗಾರ ತಲೆಯನ್ನು ಯಾವ ದಿಕ್ಕಿಗೆ ತಿರುಗಿಸುತ್ತಾನೆಯೋ ಅದೇ ದಿಕ್ಕಿಗೆ ಚೆಂಡನ್ನು ಒದೆಯುತ್ತಾನೆ ಎಂದು ಊಹಿಸುತ್ತೇವೆ. ಆದರೆ ಅವನ ಪ್ರತಿಕ್ರಿಯೆ ಅದಕ್ಕೆ ತದ್ವಿರುದ್ಧವಾಗಿರುತ್ತದೆ. ಇದು ಒಂದು ತರಹ ಜಾದೂಗಾರನ ಜಾದು ಇದ್ದಂತೆ. ತರಬೇತುದಾರ ಗ್ರಹಾಂ ಆಟಗಾರರಿಗೆ ಎದುರಾಳಿ ಆಟಗಾರರ ಸೊಂಟವನ್ನು ಗಮನಿಸಲು ಹೇಳುತ್ತಿದ್ದರು. ಕಾರಣ ಆಟಗಾರನ ಸೊಂಟದ ಭಾಗ ಯಾವ ಕಡೆ ತಿರುಗುತ್ತದೋ ಅವನ ದೇಹವೂ ಅದನ್ನೇ ಅನುಸರಿಸುತ್ತದೆ ಎಂಬುದು ಗ್ರಹಾಂರ ನಿಲುವಾಗಿತ್ತು.

ಎರಡನೆಯದು ಅಸದೃಶ ಕಲಿಕೆ. ಆಟಗಾರ ಏನೆಲ್ಲ ಕಲಿಯುತ್ತಿದ್ದಾನೆ ಎಂಬುದು ಆತನ ಅರಿವಿಗೆ ಬಾರದಂತೆ ಅವನಿಗೆ ಕಲಿಸುವ ಕೌಶಲ. ಇವು ಆಟಗಾರರ ವ್ಯಕ್ತಿತ್ವ ವಿಕಸನಕ್ಕೆ ಬಹಳ ಸಹಾಯಕಾರಿ. ಈ ರೀತಿಯ ತರಬೇತಿ ನೀಡುವುದರಲ್ಲಿ ಗ್ರಹಾಂ ಪ್ರವೀಣರಾಗಿದ್ದರು.

– ರ‍್ಯಾಂಡಿ ಪಾಶ್

## ರ‍್ಯಾಂಡಿ ಪಾಶ್ (1960-2008)

ಡಾ. ರ‍್ಯಾಂಡಿಪಾಶ್ ಕ್ರಿ.ಶ. 1960 ಅಕ್ಟೋಬರ್ 23ರಂದು ಅಮೇರಿಕಾದಲ್ಲಿ ಜನಿಸಿದರು. ರಾಂಡಾಲ್ಫ್ ಫೆಡ್ರಿಕ್ ಪಾಷ್ ಎಂಬುದು ಅವರ ಪೂರ್ಣ ಹೆಸರು. ಅಮೇರಿಕಾದ ಕಾರ್ನಿಗಿ ಮೆಲನ್ ವಿಶ್ವವಿದ್ಯಾಲಯದಲ್ಲಿ 1988ರಿಂದ 1997ರ ವರೆಗೆ ಕಂಪ್ಯೂಟರ್ ಸೈನ್ಸ್ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದ ರ‍್ಯಾಂಡಿ ಪಾಶ್ ವಿಜ್ಞಾನಿಯೂ ಹೌದು. ವರ್ಜೀನಿಯ ವಿಶ್ವವಿದ್ಯಾಲಯ, ಅಡೋಬ್, ಗೂಗಲ್, ಇಲೆಕ್ಟ್ರಾನಿಕ್ಸ್ ಆರ್ಟ್ಸ್ ಮತ್ತು ವಾಲ್ಟ್‌ಡಿಸ್ನಿಯಂತಹ ವಿಶ್ವದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಜಗತ್ತಿನ ಮಹಾನ್ ಶಿಕ್ಷಕ ಪ್ರಶಸ್ತಿಗೆ ಭಾಜನರಾದ ಇವರು ಪ್ರಸಿದ್ಧ ಆಲಿಸ್ ಸಾಫ್ಟ್‌ವೇರ್‌ನ ಜನಕ. ಇವರು ತಮ್ಮ 47ನೇ ವಯಸ್ಸಿನಲ್ಲಿ ಜುಲೈ 27, 2008ರಂದು ನಿಧನರಾದರು.

ಫುಟ್‌ಬಾಲ್ ತರಬೇತಿ ಪಾಠವನ್ನು ಶ್ರೀ ಎಸ್. ಉಮೇಶ್ ಅವರು ಕನ್ನಡಕ್ಕೆ ಅನುವಾದಿಸಿದ ರ‍್ಯಾಂಡಿ ಪಾಶ್ ಅವರ ದಿ ಲಾಸ್ಟ್ ಲೆಕ್ಚರ್ ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.



## ಉತ್ತರಿಸಿರಿ

ಈ ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. "ಫುಟ್‌ಬಾಲ್ ಅಭ್ಯಾಸ ಮಾಡಲು ಚೆಂಡಿನ ಅವಶ್ಯಕತೆಯಿಲ್ಲ" ಎಂದು ಕೋಚ್ ಗ್ರಹಾಂ ಹೇಳಲು ಕಾರಣವೇನು?
2. ನಮ್ಮನ್ನು ಅತಿಯಾಗಿ ಪ್ರೀತಿಸುವವರು ನಮ್ಮ ಜೊತೆ ಹೇಗೆ ವರ್ತಿಸುತ್ತಾರೆ?
3. ಮಕ್ಕಳಲ್ಲಿ ಆತ್ಮಗೌರವವನ್ನು ಬೆಳೆಸುವುದು ಹೇಗೆ?
4. ಮಕ್ಕಳು ಕಳಪೆ ಪ್ರದರ್ಶನವನ್ನು ನೀಡಿದಂದು ಅವರೊಂದಿಗೆ ಕೋಚ್ ಗ್ರಹಾಂ ಹೇಗೆ ವರ್ತಿಸಿದರು?
5. ಇಂದಿನ ಮಕ್ಕಳನ್ನು ಪೋಷಕರು ಹೇಗೆ ನೋಡಿಕೊಳ್ಳುತ್ತಾರೆ?

## ಭಿತ್ತಿಪತ್ರ ರಚಿಸಿರಿ

ನಿಮ್ಮ ಶಾಲೆಯಲ್ಲಿ ನಡೆಯಲಿರುವ ವಾರ್ಷಿಕ ಕ್ರೀಡಾಕೂಟದ ಪ್ರಚಾರಕ್ಕಾಗಿ ಭಿತ್ತಿಪತ್ರವನ್ನು ರಚಿಸಿರಿ.

## ವಾರ್ತೆ ಬರೆಯಿರಿ

ಪತ್ರಿಕೆಯಲ್ಲಿ ಬಂದ ಬೇರೆ ಬೇರೆ ಕ್ರೀಡಾವಾರ್ತೆಗಳನ್ನು ಸಂಗ್ರಹಿಸಿರಿ. ಅಂತಹ ಒಂದು ಕ್ರೀಡಾವಾರ್ತೆಯನ್ನು ಬರೆಯಿರಿ.

## ವ್ಯಂಗ್ಯಚಿತ್ರ ರಚಿಸಿರಿ

'ಫುಟ್‌ಬಾಲ್ ತರಬೇತಿ' ಪಾಠದಲ್ಲಿ ನಿಮಗಿಷ್ಟವಾದ ಯಾವುದಾದರೂ ಸನ್ನಿವೇಶವನ್ನು ಆಯ್ಕೆ ಮಾಡಿ ಅದಕ್ಕೆ ಸಂಬಂಧಿಸಿದ ವ್ಯಂಗ್ಯಚಿತ್ರವನ್ನು ರಚಿಸಿರಿ.

## ರೂಪಾಂತರಿಸಿ ಬರೆಯಿರಿ

ಕೆಳಗೆ ಕೊಡಲಾದ ಗಾಂಧೀಜಿಯವರ ಆತ್ಮಕಥೆಯ ಭಾಗವನ್ನು ಜೀವನ ಚರಿತ್ರೆಯಾಗಿ ರೂಪಾಂತರಿಸಿ ಬರೆಯಿರಿ.

ನನ್ನ ಯೋಗ್ಯತೆಯ ವಿಷಯದಲ್ಲಿ ನನಗೇ ಉತ್ತಮ ಅಭಿಪ್ರಾಯವಿರಲಿಲ್ಲವೆಂದು ನನ್ನ ನೆನಪು. ಬಹುಮಾನವಾಗಲೀ, ವಿದ್ಯಾರ್ಥಿ ವೇತನವಾಗಲೀ ದೊರೆತಾಗ ನನಗೇ ಆಶ್ಚರ್ಯವಾಗುತ್ತಿತ್ತು. ಆದರೆ ನನ್ನ ನಡತೆಯನ್ನು ಮಾತ್ರ ನಾನು ಬಹು ಎಚ್ಚರಿಕೆಯಿಂದ ಕಾಯ್ದುಕೊಂಡಿದ್ದೆ. ಸಣ್ಣ ಕಳಂಕವೂ ನನ್ನ ಕಣ್ಣಿನಲ್ಲಿ ನೀರು ತರುತ್ತಿತ್ತು. ಬಯ್ಯಿಸಿಕೊಂಡಾಗ ಅಥವಾ ಬೈಗುಳಕ್ಕೆ ನಾನು ಅರ್ಹನೆಂದು ಉಪಾಧ್ಯಾಯರಿಗೆ ತೋರಿದಾಗ, ಅದನ್ನು ಸಹಿಸುವುದಕ್ಕೆ ನನಗೆ ಆಗುತ್ತಿರಲಿಲ್ಲ. ಒಂದು ಸಲ ಏಟು ತಿಂದುದೂ ನನಗೆ ಜ್ಞಾಪಕವಿದೆ. ಏಟು ಬಿದ್ದುದರಿಂದ ನನಗೆ ಅಷ್ಟು ದುಃಖವಾಗಲಿಲ್ಲ. ನಾನು ಏಟಿಗೆ ಅರ್ಹನೆಂದು ಭಾವಿಸಿದರಲ್ಲ ಎಂದು ನನಗೆ ವ್ಯಥೆಯಾಯಿತು. ನಾನು ಬಹಳವಾಗಿ ಅತ್ತೆ.

# ಘಟಕ – 3

# ಬಾಂಧವ್ಯದ ಸೆಲೆ

## ಕಲಿಕಾ ಸಾಧನೆಗಳು

- ಕಥೆ, ಕವನ ಮೊದಲಾದ ಸಾಹಿತ್ಯಕೃತಿಗಳಲ್ಲಿರುವ ಸೌಂದರ್ಯಾಂಶಗಳನ್ನು ತಿಳಿದುಕೊಂಡು ಸ್ವಂತ ದೃಷ್ಟಿಕೋನದೊಂದಿಗೆ ಮೌಖಿಕವಾಗಿ ಮತ್ತು ಲಿಖಿತವಾಗಿ ಮಂಡಿಸುವುದು.
- ಜನಪದ ಗೀತೆಗಳ ರಾಗತಾಳಗಳನ್ನು ತಿಳಿದುಕೊಂಡು ಹಾಡುವುದು.
- ಗದ್ಯ ಮತ್ತು ಪದ್ಯಗಳ ಅರ್ಥವನ್ನು ತಿಳಿದುಕೊಂಡು ನಿರರ್ಗಳವಾಗಿ ಓದುವುದು ಮತ್ತು ಹಾಡುವುದು.
- ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಆಶಯಗಳನ್ನು ಶಿಷ್ಟಭಾಷೆಯಲ್ಲಿ ಬರೆದು ಮಂಡಿಸುವುದು.
- ತಿಳಿದಿರುವ ಪದ್ಯಗಳ ರಾಗತಾಳಗಳ ಆಧಾರದಲ್ಲಿ ಅವುಗಳ ಛಂದಸ್ಸನ್ನು ಗುರುತಿಸುವುದು.
- ಗದ್ಯಪದ್ಯಗಳಲ್ಲಿ ಬಳಕೆಯಾಗಿರುವ ಪದ, ಪ್ರಯೋಗ, ಶೈಲಿ ಇತ್ಯಾದಿಗಳ ಅರ್ಥವನ್ನು ತಿಳಿದುಕೊಂಡು ಹೊಸ ಸಂದರ್ಭಗಳಲ್ಲಿ ಪ್ರಯೋಗಿಸುವುದು.
- ವಿಭಿನ್ನ ಕಾಲಘಟ್ಟಗಳಲ್ಲಿ ರಚನೆಯಾದ ಕೃತಿಗಳನ್ನು ಅವಲೋಕಿಸಿ ಆ ಕಾಲಘಟ್ಟದ ಸಂಸ್ಕೃತಿ, ಭಾಷೆ, ಆಚಾರ ವಿಚಾರಗಳನ್ನು ವ್ಯಾಖ್ಯಾನಿಸುವುದು.
- ನಡುಗನ್ನಡ ಕಾಲದ ವಿವಿಧ ಛಂದಸ್ಸಿನಲ್ಲಿ ರಚನೆಯಾಗಿರುವ ಕಾವ್ಯಗಳನ್ನು ಓದಿ ಆಸ್ವಾದಿಸುವುದು, ವಾಚನಕ್ರಮಕ್ಕನುಗುಣವಾಗಿ ಬಾಯ್ದೆರೆ ಓದು ನಡೆಸುವುದು ಹಾಗೂ ಸಾಲುಗಳಿಗೆ ಪ್ರಸ್ತಾರ ಹಾಕುವುದು.

# ಬೆಳಕು ತಂದ ಮಗಳು

ಎದುರಿನ ಮನೆ ಯಾವತ್ತೂ ಸುಮ್ಮನಿದ್ದುದು ಗೊತ್ತಿಲ್ಲ. ಕುಡುಕ ಅಪ್ಪ ಮಗಳ ಕೈಗೆ ಒಂದು ರೂಪಾಯಿ ಇಟ್ಟನೆಂದರೆ ಅವನು ಕುಡಿಯಲು ಹೊರಟೇಬಿಟ್ಟ ಎಂಬುದನ್ನು ಯಾರೂ ಹೇಳಬೇಕಾಗಿಲ್ಲ. ಕುಡಿದು ಬಂದು ಮಗಳ ಮುಂದೆ ಏನೇನೋ ಮಾತನಾಡುತ್ತಾ ಜಗಳವಾಡುವುದು ಅವನಿಗೆ ರೂಢಿಯಾಗಿತ್ತು.

ಒಂದು ದಿನ ಅವನು ಗರಬಡಿದವನಂತೆ ಕುಳಿತುಬಿಟ್ಟಿದ್ದ. ಪುಟ್ಟ ಮಗಳು ಅಪ್ಪನ ಗದ್ದ ಹಿಡಿದು ಕೇಳಿದಳು "ಅಪ್ಪಾ! ಇವತ್ತ್ಯಾಕೆ ನಂಗೆ ಒಂದು ರೂಪಾಯಿ ಕೊಟ್ಟಿಲ್ಲ? ಹೊತ್ತಾಯ್ತು ಬೆಳಕು ಮುಗಿದು ಕತ್ತಲಾಗುವ ಈ ಹೊತ್ತಿಗಲ್ಲವೇ? ನೀನು ಹೊರಗೆ ಹೋಗೋದು" "ಮಗಳೇ ಇವತ್ತು ನನ್ನ ಹತ್ತಿರ ಬಿಡಿಗಾಸೂ ಇಲ್ಲ. ಜೇಬು ಖಾಲಿಖಾಲಿ" ಎಂದು ಅಪ್ಪ ಒಡಕು ದನಿಯಿಂದ ಜೇಬು ತೋರಿಸುತ್ತಾ ಅತ್ತುಬಿಟ್ಟ. ಮಗಳಿಗೇನು ಅರ್ಥವಾಯಿತೋ? ಬಡಬಡನೆ ಒಳಗೆ ಹೋಗಿ ಒಂದು ಸಣ್ಣಮಡಕೆ ತಂದು ಅಪ್ಪನ ಕೈಯಲ್ಲಿಟ್ಟು "ಇಲ್ಲಿದೆ ಪೈಸಾ ಎಷ್ಟು ಬೇಕೋ ತೆಗೆದುಕೋ" ಎಂದಳು. "ಈ ದುಡ್ಡು ನಿನಗೆ ಎಲ್ಲಿಂದ ಬಂತು?" ಅಪ್ಪ ಕೇಳಿದ.

"ನೀನು ದಿನವೂ ನಂಗೆ ಒಂದು ರೂಪಾಯಿ ಕೊಡುತ್ತಿದ್ದೆಯಲ್ಲ; ಅದೇ ಇದು. ನೋಡು ಮಡಕೆ ತುಂಬಿದೆ. ನೀನು ಕೊಟ್ಟ ಎಲ್ಲಾ ಕಾಸೂ ಇದರಲ್ಲಿದೆ" ಎಂದಳು. ಅಪ್ಪನ ಒಳಗಣ್ಣು ತೆರೆಯಿತು. ಮಗಳನ್ನು ಅಪ್ಪಿಕೊಂಡು ಮಗಳೇ ಈಗಷ್ಟೇ ಬೆಳಕು ಬಂತು ಇನ್ನೆಂದೂ ಕತ್ತಲಾಗದು ಎಂದ.

ಈ ಕತೆಯ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

# 1

# ಕಣ್ಣಾರೆ ಕಂಡರೂ

ಎಂಟು ದಿನಗಳ ಕಾಲ ತಮ್ಮನ ಊರಿಗೆ ಹೋಗಿದ್ದ ರಾಜರಾಯರು ಮತ್ತು ಪತ್ನಿ ಸುಂದರಮ್ಮ ಹಿಂದಿರುಗಿ  ಬಂದಾಗ ಮನೆಯಲ್ಲಿ ಸದಾಶಿವ ಇರಲಿಲ್ಲ. ಅದು ಸದಾಶಿವ ಇರೋ ಹೊತ್ತಲ್ಲ. ಆಫೀಸಿಗೆ ಹೋಗಿರುತ್ತಾನೆ. ಹಿಂದಿರುಗೋದು ಸಂಜೆಗೇ. ತಮ್ಮಲ್ಲಿದ್ದ ಕೀಯಿಂದ ಮನೆ ಬೀಗ ತೆಗೆದು ಒಳನಡೆದರು ಸುಂದರಮ್ಮ. ಮೊದಲು ಮನೆಯೆಲ್ಲ ಸುತ್ತಾಡಿ ಏನು ಗಲೀಜು ತುಂಬಿಕೊಂಡಿದೆಯೋ ಅಂತ ಪರಿಶೀಲಿಸಿದರು. ಆದರೆ ಸದಾಶಿವ ಮನೆ ನೀಟಾಗಿ ಇಟ್ಟಿದ್ದ. ಅಡಿಗೆ ಮನೆಯೂ ಸ್ವಚ್ಛವಾಗಿ ಇತ್ತು. ಆದರೆ ಅಡುಗೆ ಮಾಡಿಕೊಂಡ ಲಕ್ಷಣ ಕಾಣುತ್ತಿರಲಿಲ್ಲ. ಹಾಲು ಇರಲಿಲ್ಲ. ಸ್ಟೌ ಬಹಳ ಕ್ಲೀನ್ ಆಗಿತ್ತು. 'ಇವತ್ತೊಂದು ದಿನ ಅಡುಗೆ ಮಾಡಿಕೊಳ್ಳೋಕೆ ಬೇಜಾರಾಯ್ತೋ ಏನೋ..... ಆದರೂ ನಾವು ಬರ್ತೀವಿ ಅಂತ ಹೇಳಿದ್ದೇವಲ್ಲ. ನಮಗಾದ್ರೂ ಅಡುಗೆ ಮಾಡಿಟ್ಟಿರಬೇಕಿತ್ತು' ಅನಿಸಿತು.



ಬಟ್ಟೆ ಬದಲಾಯಿಸಲು ಕೋಣೆಗೆ ಬಂದರು; ಬೀರು ತೆರೆದರು. 'ಒಂದು ಸಾರಿ ನೋಡಿಬಿಡೋಣ' ಅನ್ನುವ ತವಕಕ್ಕೆ ಉತ್ತರಕೊಟ್ಟು ಸೇಫ್‌ಗೆ ಕೈಹಾಕಿದಾಗ ಎದೆ ಧಸ್ಸೆಂದಿತು. ಒಡವೆ ಪೆಟ್ಟಿಗೆ ಕಾಣಲಿಲ್ಲ. ಆಪದ್ಧನ ಎಂದು ಮನೇಲಿ

ಇಟ್ಟಿರ್ತಿದ್ದ ಪರ್ಸು, ಅದರಲ್ಲಿರುತ್ತಿದ್ದ ಹತ್ತುಸಾವಿರ ರೂಪಾಯಿ ಕಾಣ್ತಿಲ್ಲ. ಬೆಳ್ಳಿ ಪಾತ್ರೆಗಳ ಗಂಟೂ ಇಲ್ಲ. ಹತ್ತಾರು ಬಾರಿ ನೋಡಿ ಅವ್ಯಾವುವೂ ಇಲ್ಲ ಅಂತ ಖಾತರಿಯಾದ ಮೇಲೆ "ರೀ" ಅಂತ ಕಿರುಚಿದರು. 'ಒಡವೆ, ಹಣ ಎಲ್ಲವನ್ನೂ ಸದಾಶಿವ ಏನೋ ಮಾಡಿದ್ದಾನೆ' ಅಂತಾ ಖಾತ್ರಿಯಾಗಿ ದುಃಖ ಉಮ್ಮಳಿಸಿ ಬಂತು.

"ಏನೇ... ಏನಾಯ್ತು?" ಅಂತ ಬಂದ ರಾಜಾರಾಯರಿಗೆ ಪತ್ನಿಯ ಸ್ಥಿತಿ ನೋಡಿ ಅಚ್ಚರಿಯಾಯಿತು. ವಿಷಯ ತಿಳಿಯೋದು ತಡ ಆಗಲಿಲ್ಲ.

'ಸದಾಶಿವ ಯಾಕೆ ಹೀಗೆ ಮಾಡ್ದ? ಇವತ್ತು ಆಫೀಸಿನಿಂದ ಬರ್ಲಿ. ವಿಚಾರಿಸುವ' ಅಂದುಕೊಂಡರು.

ಸದಾಶಿವ ಸಾಕಿದ ಹುಡುಗ. ರಾಜಾರಾಯರಿಗೆ ಮದುವೆಯಾಗಿ ಬಹಳ ವರ್ಷ ಮಕ್ಕಳು ಆಗದೇ ಇದ್ದಾಗ ದೂರದ ಸಂಬಂಧಿ ಚಿನ್ನಸ್ವಾಮಿಯ ಮೂರನೇ ಮಗನನ್ನು ದತ್ತು ತೆಗೆದುಕೊಂಡು ಬೆಳೆಸಿದ್ದರು. ರಾಜಾರಾಯರು ಸಾಕುತಂದೆ ಅಂತ ಗೊತ್ತಿದ್ದರೂ ಸದಾಶಿವ ಎರಡೂ ಕಡೆ ಇರ್ತಿದ್ದ.

ಸದಾಶಿವನನ್ನು ರಾಜಾರಾಯರು ಚೆನ್ನಾಗಿ ಓದಿಸಿದರು. ಕೆಲಸ ಕೊಡಿಸಿದರು. ಕೈತುಂಬಾ ಸಂಪಾದನೆ. ಇನ್ನೆರಡು ವರ್ಷಗಳಲ್ಲಿ ಮದುವೆ ಮಾಡೋ ಅಂದಾಜು ಹಾಕಿಕೊಂಡಿದ್ದರು.

ಸದಾಶಿವ ನಿಯತ್ತಿನ ಹುಡುಗನಾಗಿದ್ದ. ರಾಜಾರಾಯರಿಗೂ ಸುಂದರಮ್ಮನಿಗೂ ಪ್ರೀತಿಪಾತ್ರನಾಗಿದ್ದ. ಮನೇಲಿ ಅವನು ಕೇಳಿದ್ದೆಲ್ಲ ಸಿಗುತ್ತಿತ್ತು. ಅವನೇ ಸಂಪಾದನೆ ಮಾಡೋಕೆ ಪ್ರಾರಂಭವಾದ ಮೇಲಂತೂ ಹಣದ ಚಿಂತೆ ಇರಲೇ ಇಲ್ಲ.

ಮೊದಲ ತಿಂಗಳ ಸಂಪಾದನೆ ತಂದು ತಂದೆ ಕೈಲಿಟ್ಟ. ರಾಜಾರಾಯರು "ನೋಡು ನಿನ್ನ ಸಂಪಾದನೆ ನಿನ್ನದು. ಹಿತಮಿತವಾಗಿ ಖರ್ಚು ಮಾಡೋದು ಅವಶ್ಯಕ. ದುಂದುವೆಚ್ಚ ಬೇಡ. ಹಣ ಹೆಚ್ಚಾದಾಗ ಬೇರೆ ಆಮಿಷ ಎದುರಾಗಬಹುದು. ಅದಕ್ಕೆ ದಾಸನಾಗಬೇಡ" ಎಂದು ಎಚ್ಚರಿಕೆ ಮಾತು ಹೇಳಿದ್ದರು.

ಸದಾಶಿವ ಸಂಪಾದನೆ ಮಾಡೋಕೆ ಶುರು ಮಾಡಿದ ಕೆಲದಿನಗಳಲ್ಲಿ ಬದಲಾವಣೆ ಕಂಡಿತು. ಹೆಚ್ಚು ಕಡಿಮೆ ದಿನಾ ತಡವಾಗಿ ಬರೋದು. ಒಂದೊಂದು ದಿನ ಹೊರಗಡೆಯೇ ಊಟ ಆಯ್ತು ಅನ್ನೋದು. ಅವನ ಸಂಪಾದನೆ ಹಣ ಹೇಗೆ ಖರ್ಚಾಗ್ತಾ ಇದೆ ಅನ್ನೋದು ತಿಳಿಯಲಿಲ್ಲ.

"ಸದಾಶಿವನಿಗೆ ಮದುವೆ ಮಾಡೋಣ. ಜವಾಬ್ದಾರಿ ಕಳೆಯುತ್ತೆ" ಎಂದು ಸುಂದರಮ್ಮ ಪತಿಗೆ ಹೇಳಿದರು.

ಸದಾಶಿವ ಮದುಗೆ ಒಪ್ಪಲಿಲ್ಲ. 'ಈಗಲೇ ಬೇಡ' ಅಂದು ಒಂದೇ ಮಾತಿನಲ್ಲಿ ತಳ್ಳಿಹಾಕಿದ.

ಆದರೆ 'ಇತ್ತೀಚೆಗೆ ಸದಾಶಿವ ಯಾಕೆ ವಿಮುಖನಾಗ್ತಾನೆ' ಅಂತ ಇಬ್ಬರಿಗೂ ತಿಳಿಯಲಿಲ್ಲ. 'ಈ ಹುಡುಗನಲ್ಲಿ ಏನೋ ಬದಲಾವಣೆ ಕಾಣ್ತಿದೀವಲ್ಲ' ಅನಿಸುತ್ತಿತ್ತು. 'ಕೆಟ್ಟ ಹವ್ಯಾಸಕ್ಕೆ ಬಿದ್ದಿದ್ದಾನೆಯೇ' ಅನ್ನೋ ಅನುಮಾನವೂ ಕಾಡಿತ್ತು.

ಒಂದು ಸಾರಿ ಚಿನ್ನಸ್ವಾಮಿಯನ್ನು ಕರೆಸಿ ಸದಾಶಿವನ ವಿಚಾರ ಮಾತಾಡಿದರು. ಚಿನ್ನಸ್ವಾಮಿ ವಿಚಾರಿಸಿದಾಗಲೂ ಸದಾಶಿವ ಮಾಮೂಲಿನಂತೇ ಉತ್ತರಕೊಟ್ಟ. 'ಯಾಕೋ ಈ ಹುಡುಗ ದಿನೇದಿನೇ ನಿಗೂಢನಾಗುತ್ತಿದ್ದಾನಲ್ಲ' ಅನಿಸಿತು.

'ಹುಡುಗರು ವಯಸ್ಸಿಗೆ ಬಂದಾಗ ಏನೇನು ಚಿಂತೆ ಹಚ್ಕೋತಾರೋ. ಕ್ರಮೇಣ ಅವರೇ ಸರಿಹೋಗ್ತಾರೆ' ಅನ್ನೋ ಆಶಾಭಾವನೆಯಿಂದ ಇದ್ದರು.

ಈ ನಡುವೆ ರಾಜಾರಾಯರ ತಮ್ಮ ಶಂಕರಪ್ಪ ಅನಾರೋಗ್ಯದಿಂದ ಬಳಲುತ್ತಿದ್ದಾರೆ ಅನ್ನೋ ವಿಷಯ ತಿಳಿಯಿತು. ಹಾಗಾಗಿ ಅವರನ್ನು ವಿಚಾರಿಸಿಕೊಂಡು ಬರಲು ಹುಬ್ಬಳ್ಳಿಗೆ ಹೊರಟರು. ಅಲ್ಲಿಂದ ಬಂದ ನಂತರ ರಾಜಾರಾಯರು, ಸುಂದರಮ್ಮ ಉತ್ತರ ಭಾರತದ ಪ್ರವಾಸ ಹೊರಡಬೇಕಿತ್ತು.

ರಾಜಾರಾಯರು ತಮ್ಮನನ್ನು ನೋಡಿ ಹಿಂದಿರುಗುವ ಹೊತ್ತಿಗೆ ಮನೇಲಿ ಸದಾಶಿವ ಇರಲಿಲ್ಲ. ಅವನು ಹಿಂದಿರುಗದೇ ಏನೂ ತಿಳಿಯೋದಿಲ್ಲ ಅನಿಸಿತು. ಆದರೆ ಸುಂದರಮ್ಮ.

"ನೀವು ಆಫೀಸಿಗೆ ಹೋಗಿ ವಿಚಾರಿಸಿ ಅವನನ್ನು ಕರೆದುಕೊಂಡು ಬನ್ನಿ" ಅಂದರು.

ರಾಜಾರಾಯರು ಆಫೀಸಿಗೆ ಹೋಗಿ ವಿಚಾರಿಸಿದಾಗ ಎಂಟು ದಿನದಿಂದ ಸದಾಶಿವ ಆಫೀಸಿಗೆ ಬಂದಿಲ್ಲ ಅಂತ ತಿಳೀತು. ಸುಂದರಮ್ಮ ಅಕ್ಕಪಕ್ಕದ ಮನೇಲಿ ವಿಚಾರಿಸಲಾಗಿ "ಸದಾಶಿವನನ್ನು ಕಂಡು ಎಷ್ಟೋ ದಿನಗಳಾಯ್ತು" ಅನ್ನೋ ಉತ್ತರ ಬಂತು.

ಸದಾಶಿವ ಹಣವನ್ನೂ ಒಡವೆಯನ್ನೂ ಎತ್ತಿಕೊಂಡು ಹೋಗಿದ್ದಾನೆಯೇ...?

ಸದಾಶಿವ ಇಂಥಾ ಕೆಲಸ ಮಾಡಬಹುದು ಅಂತ ಊಹೆ ಕೂಡಾ ಮಾಡ್ಕೊಳ್ಳೋಕೆ ಆಗಲಿಲ್ಲ.

"ಹೇಗಾದ್ರೂ ಆಗ್ಲಿ. ನೀವು ಪೋಲಿಸರಿಗೆ ಕಂಪ್ಲೇಂಟು ಕೊಟ್ಬಿಡಿ" ಅಂದರು ಸುಂದರಮ್ಮ.

"ಏನೂಂತ ಕೊಡ್ಲಿ..... ಮಗ ಕಳ್ಳ ಅಂತ ಕಂಪ್ಲೇಂಟು ಕೊಡ್ಲಾ. ಇದೇನು ಗ್ರಹಾಚಾರವೇ"

"ರಕ್ತ ಹಂಚ್ಕೊಂಡು ಹುಟ್ಟಿದ ಮಕ್ಕಳನ್ನು ಮಾತ್ರ ನಮ್ಮೋವ್ರು ಅಂದ್ಕೋಳೋಕೆ ಸಾಧ್ಯ. ಅವನು ನಮ್ಮವ ಅಲ್ಲ. ಅದು ಅವನಿಗೂ ಗೊತ್ತು. ಅಂದ್ಮೇಲೆ ಅವನಿಗೆ ಏನು ವ್ಯಾಮೋಹ ಇರುತ್ತೆ. ಇಷ್ಟು ವರ್ಷ ಸಾಕಿದ ಮಗ ಇಂಥಾ ಉಡುಗೊರೆ ಕೊಡ್ತಾನೆ ಅಂತ ಹೇಗೆ ನಂಬೋಕೆ ಸಾಧ್ಯ?"

"ಚಿನ್ನಸ್ವಾಮಿಗೊಂದು ಕಾಗದ ಬರೆದು ನೋಡಲೇ?"

"ಸರಿ, ಆದರೆ ಈ ವಿಚಾರ ಕಾಗದದಲ್ಲಿ ಬರೆಯೋದು ಬೇಡ. ಮನೆ ವಿಚಾರ ಮನೇಲಿರ್‍ಲಿ"

"ನನಗೂ ಹಾಗೆ ಅನ್ನಿಸ್ತಿದೆ"

ರಾಯರು ಚಿನ್ನಸ್ವಾಮಿಗೆ ಕಾಗದ ಬರೆದರು. ಉತ್ತರವೇ ಬರಲಿಲ್ಲ. ಎಂಟು ದಿನ ಕಾದು ಪೋಲಿಸ್ ಕಂಪ್ಲೇಂಟು ಕೊಡದೇ ಬೇರೆ ದಾರಿ ಇಲ್ಲ ಅನಿಸಿ ಅವರು ಪೋಲಿಸ್ ಸ್ಟೇಷನ್ನಿಗೆ ಹೋದರು.

"ಏನ್ರೀ ಒಡವೆ ಕಳ್ಕೊಂಡಿದ್ದು ಯಾವತ್ತು? ನೀವು ಕಂಪ್ಲೇಟ್ ಕೊಡ್ತಾಯಿರೋದು ಯಾವತ್ತು?" ರೇಗಿದರು ಇನ್ಸ್‌ಪೆಕ್ಟರ್. ದೂರು, ದಾಖಲೆ ಮಾಡಿಕೊಂಡರೂ ವಸ್ತುಗಳಾಗಲೀ ಹಣವಾಗಲೀ ಸಿಗುತ್ತೆ ಅನ್ನೋ ಖಾತರಿ ಕೊಡಲಿಲ್ಲ.

ರಾಜಾರಾಯರು ಪ್ರವಾಸ ಹೊರಡೋ ದಿನ ಹತ್ತಿರ ಬಂತು. ಆ ಹಣಾನ ಪ್ರವಾಸದ ಖರ್ಚಿಗೆ ಅಂತ ಇಟ್ಕೊಂಡಿದ್ರು. ಈಗ ಇನ್ನಷ್ಟು ಹಣ ಬ್ಯಾಂಕಿಂದ ತೆಗೆಯೋದು ಅನಿವಾರ್ಯವಾಯ್ತು.

ಮನೆಗೆ ಬೀಗ ಹಾಕಿ ಪಕ್ಕದ ಮನೆಯವರ ಸುಪರ್ದಿಗೆ ಒಪ್ಪಿಸಿ ಹೋಗೋದು ಅಂತ ತೀರ್ಮಾನ ಮಾಡಿಕೊಂಡರು. 'ಮನೇಲಿ ಬೆಲೆಬಾಳೋದು ಅಂತ ಇದ್ದದ್ದು ಈಗಾಗಲೇ ಖಾಲಿ ಆದ್ದರಿಂದ ಇನ್ನು ಏನೂ ಉಳಿದಿಲ್ಲ. ಧೈರ್ಯವಾಗಿ ಬೀಗ ಹಾಕಿಕೊಂಡು ಹೋಗಬಹುದು' ಅನಿಸಿತು.

ಪ್ರವಾಸ ಹೊರಡೋ ಹಿಂದಿನ ದಿನ ರಾಜಾರಾಯರು ಮನೇಲಿ ಪದಾರ್ಥಗಳನ್ನು ಪ್ಯಾಕ್ ಮಾಡುತ್ತಿದ್ದರು. ಏನೋ ನೆರಳು ಕಂಡಂತಾಗಿ ನೋಡಿದರೆ ಸದಾಶಿವ ನಿಂತಿದ್ದ.

"ಲೇ... ಸದಾಶಿವ ಬಂದ ಕಣೆ" ಅಂದರು.

ಸುಂದರಮ್ಮ ಓಡಿ ಬಂದರು.

ಒಂದು ಕ್ಷಣ ಅವರಿಗೆ ಮನೇಲಿ ಹಣ, ಒಡವೆ, ಕಾಣೆಯಾಗಿಹೋಗಿದ್ದು ಮರೆತೇಹೋಗಿತ್ತು.

ಸದಾಶಿವ ಬಂದು ಕುರ್ಚೀಲಿ ಕುಳಿತ.

"ಎಲ್ ಹೋಗಿದ್ದ್ಯೋ ಇಷ್ಟುದಿನ... ಆಫೀಸಿಗೂ ಹೋಗಿಲ್ಲ... ಚಿನ್ನಸ್ವಾಮಿಗೆ ಕಾಗದ ಬರೆದರೆ ಅವರದೂ ಉತ್ತರ ಇಲ್ಲ" ಎಂದು ರೇಗಿದರು ರಾಜಾರಾಯರು.

ಸದಾಶಿವ ಮಂಕಾಗಿದ್ದ.

"ಕೇಳ್ರೀ ಗಂಟೆಲ್ಲ ಏನು ಮಾಡ್ದ ಅಂತ.... ಎಲ್ಲ ಖಾಲಿಯಾದ ಮೇಲೆ ಮತ್ತೆ ಬಂದನೋ ಏನೋ ಇನ್ನೇನಾದರೂ ಬಾಕಿ ಇದ್ರೆ ದೋಚಿಕೊಂಡು ಹೋಗೋಣ ಅಂತ" ಅಂದರು ಸುಂದರಮ್ಮ.

ಸದಾಶಿವ ಕೈ ಎತ್ತಿ ಏನೋ ಮಾತಾಡಲು ಹೊರಟ. ಆದರೆ ಮಾತೇ ಹೊರಡಲಿಲ್ಲ.

"ಹೇಳು... ಹೇಳು... ಮಾಡಿರೋ ಹಲ್ಕಾ ಕೆಲಸಾನ ಮುಚ್ಚಿಡೋಕೆ ನಾಟಕದ ರಿಹರ್ಸಲ್ ಅದೇನು ಮಾಡ್ಕೊಂಡು ಬಂದಿದೀಯ ಹೇಳು"

"ಅಲ್ಲಯ್ಯಾ ನಾವು ನಿನಗೇನು ಕಡಿಮೆ ಮಾಡಿದ್ದು? ನಾವಿಲ್ದಿರೋವಾಗ ಹಣ ಒಡವೆ ಎಲ್ಲ ಎಗರಿಸ್ದ್ಯಲ್ಲ. ಎಷ್ಟುದಿನದಿಂದ ಪ್ಲ್ಯಾನ್ ಮಾಡಿದ್ದೆ?"

"ಇಷ್ಟು ವರ್ಷ ನಿನ್ನನ್ನು ಮಗಾಂತ ಸಾಕಿದ್ದಕ್ಕೆ ಒಳ್ಳೆ ಬಹುಮಾನ ಕೊಟ್ಟೆ"

ರಾಜಾರಾಯರೂ ಸುಂದರಮ್ಮನೂ ಒಬ್ಬರ ತಪ್ಪ ಇನ್ನೊಬ್ಬರು ಮಾತಾಡ್ತಾ ಇದ್ದರೂ ಸದಾಶಿವನಿಗೆ ಬಾಯಿಬಿಡಲಾಗಲಿಲ್ಲ. ಬಾಯಿ ತೆರೆದರೂ ಸ್ವರ ಹೊರಬರಲಿಲ್ಲ. ಹೀಗಾಗಿ ಅಸಹಾಯಕವಾಗಿ ಅಳುಬಂತು. ಬಿಕ್ಕಿ ಬಿಕ್ಕಿ ಅತ್ತ.

"ನಗೋ ಹೆಂಗ್ಸನ್ನ ನಂಬಬೇಡ. ಅಳೋ ಗಂಡಸನ್ನು ನಂಬಬೇಡ ಅಂತಾರೆ..... ನೀನು ಅತ್ತು ನಮ್ಮನ್ನು ಹೆದರಿಸಬೇಕಾಗಿಲ್ಲ. ಒಂದ್ಕೆಲ್ಸ ಮಾಡು. ನೀನು ನಿನ್ನ ಪದಾರ್ಥ ಏನಿದೆಯೋ ತಗೊಂಡು ಹೊರಡು. ನಿನ್ನಂಥ ಮಕ್ಕಳು ನಮಗೆ ಬೇಡ" ಕಟುವಾಗಿ ನುಡಿದರು ರಾಜಾರಾಯರು.

ಈಗ ಮಾತ್ರ ಸದಾಶಿವ ಅಳು ತಾಳದೇ ಬಿಕ್ಕಿಬಿಕ್ಕಿ ಅಳುತ್ತಾ ರಾಜಾರಾಯ ಕಾಲಿಗೆ ಬಿದ್ದ.... ಕೈಮುಗಿದು ಎದ್ದು ಒಳಗೆ ಹೋಗಿ ಒಂದು ಚೊಂಬು ನೀರು ಕುಡಿದು ಬಂದ.

"ರೀ... ಅವನ ಯಾವ ಮಾತನ್ನು ನಂಬಬೇಡಿ, ಮೊದಲು ಒಡವೆ ಹಣ ತಂದಿಡ್ಲಿ...." ಅಂದರು ಸುಂದರಮ್ಮ.

ಸದಾಶಿವ ಕಣ್ಣೀರೊರೆಸಿಕೊಂಡು

"ದೇವರು ನನ್ನ ಹೆತ್ತಮ್ಮನನ್ನು ಕಿತ್ಕೊಂಡುಬಿಟ್ಟ..... ಮೈನಲ್ಲಿ ರಕ್ತ ಕಡಿಮೆಯಾಗಿ ಬಲಹೀನತೆ ಉಂಟಾಗಿ ಹಾಸಿಗೆ ಹಿಡಿದ್ಲು. ನಾನು ಹೋಗಿ ಅವಳ ಆರೈಕೆ ಮಾಡ್ದೆ....

ಅವಳೇ ಈ ಭೂಮಿಗೆ ತಂದ ಶರೀರದಲ್ಲಿ ಹರಿತಿರೋ ರಕ್ತ ಕೊಟ್ಟೆ. ಆದ್ರೂ ಅವಳು ಉಳೀಲಿಲ್ಲ'' ಅಂದ.

"ರತ್ನಮ್ಮ ಹೋಗಿಬಿಟ್ಟರೇ! ಯಾವಾಗ?''

"ನೀವು ನಿಮ್ಮ ತಮ್ಮನನ್ನು ನೋಡೋಕೆ ಅಂತ ಹೋದ ದಿನವೇ ಅಪ್ಪ ಟೆಲಿಗ್ರಾಂ ಕಳ್ಸಿದ್ರು. ನಾನು ಓಡಿಹೋದೆ. ಯಾರಿಗೂ ಏನೂ ತಿಳಿಸೋಕೆ ಆಗಲಿಲ್ಲ. ಮೊದಲು ತಾಯಿ. ಆಮೇಲೆ ಎಲ್ಲಾ ಅನಿಸಿಬಿಡ್ತು. ಅವಳನ್ನಾಗಲೇ ಆಸ್ಪತ್ರೆ ಸೇರಿಸಿದ್ರು. ಎಂಟು ದಿನ ಸಾವುಬದುಕಿನ ನಡುವೆ ಹೋರಾಡಿ ಕೊನೆಗೂ ನಮ್ಮನ್ನು ಬಿಟ್ಟುಹೋದಳು''

ಮನೇಲಿ ಮೌನ. ಸದಾಶಿವನ ಬಿಕ್ಕುವಿಕೆಯ ಹೊರತು ಇನ್ನೇನೂ ಉಳಿದಿರಲಿಲ್ಲ.

ಸದಾಶಿವ ಜೇಬಿನಿಂದ ಕೀ ತೆಗೆದುಕೊಟ್ಟ.

"ಏನಿದು?'' ಕೇಳಿದರು ರಾಜಾರಾಯರು.

"ಬ್ಯಾಂಕ್‌ನ ಲಾಕರ್ ಕೀ... ನಾನು ಊರಿಗೆ ಹೊರಡೊ ಮುಂಚೆ ಒಡವೆ, ಹಣ, ಬೆಳ್ಳಿ ಸಾಮಾನು ಎಲ್ಲಾ ಬ್ಯಾಂಕಿನ ಲಾಕರಲ್ಲಿಟ್ಟು ಹೋದೆ. ನೀವೂ ಊರಲ್ಲಿಲ್ಲ. ನಾನೂ ಇರಲ್ಲ. ಮನೆಗೆ ಬೀಗ ಹಾಕಿದ್ರೆ ಕಳ್ಳರಿಗೆ ಸುಳಿವು ಸಿಕ್ಕುತ್ತೆ. ಹೇಗೋ ನೀವು ಪ್ರವಾಸ ಹೋಗುವಾಗ ಅವನ್ನೆಲ್ಲಾ ಲಾಕರಲ್ಲಿಡಬೇಕಲ್ಲ. ಈಗಲೇ ಇಟ್ಟರಾಯಿತು ಅಂತ ಹಾಗೆ ಮಾಡ್ದೆ''



ಒಡವೆ ಹಣ ಎರಡೂ ಸೇಫ್ ಆಗಿರೋದು ತಿಳಿದು ಸುಂದರಮ್ಮ ನಿರಾಳ ಉಸಿರುಬಿಟ್ಟರು. 'ಅನ್ಯಾಯವಾಗಿ ಸದಾಶಿವನನ್ನು ಅನುಮಾನಪಟ್ಟೆವಲ್ಲ' ಅಂತ ಬೇಜಾರೂ ಉಂಟಾಯ್ತು.

ಹತ್ತಿರ ಬಂದು ಸದಾಶಿವನನ್ನು ತಬ್ಬಿದರು.

ಸದಾಶಿವ ಅಳುತ್ತಾ "ಹೆತ್ತಮ್ಮ ನನ್ನನ್ನು ದೂರ ಮಾಡಿಹೋದಳು. ನೀವೂ ನನ್ನನ್ನು ದೂರಮಾಡಬೇಡಿ'' ಎಂದ

"ಇಲ್ಲಪ್ಪ... ಒಂದು ಕ್ಷಣ ನಾವೇ ನಿನ್ನ ಮೇಲೆ ಅನುಮಾನಪಟ್ಟಿದ್ದೆವು ಕಣೋ... ವ್ಯಾಮೋಹ ಅನ್ನೋದು ಹಾಗೆ ಮಾಡುತ್ತೆ... ನಾವಿಟ್ಟ ಹಣ, ಒಡವೆ ಕಾಣಲಿಲ್ಲ... ಜೊತೆಗೆ ನೀನು ಎಲ್ಲಿ ಹೋದೆ ಅಂತಾನೂ ತಿಳೀಲಿಲ್ಲ. ಹೀಗಿರುವಾಗ ಅನುಮಾನ ಅನಿವಾರ್ಯವಾಯ್ತು''

ಸದಾಶಿವ ಕಣ್ಣೊರಸಿಕೊಂಡು "ಸಾಕಿದ ನಾಯಿ ಎಂದು ಕಚ್ಚಲ್ಲಮ್ಮ.... ನಾನು ಈ ಮನೆಯ ಸಾಕಿದ

ನಾಯಿ... ನನಗೆ ನಿಮ್ಮಿಬ್ಬರ ಪ್ರೀತಿ ಬೇಕೇ ಹೊರತು ಇನ್ನೇನೂ ಬೇಡ. ಮನೆಯಲ್ಲೇ ಕಳ್ಳತನ ಮಾಡಿ ಸುಖಪಡುವಂಥಾ ಕೀಳ್ಮಟ್ಟಕ್ಕೆ ನಾನು ಖಂಡಿತಾ ಹೋಗಲ್ಲ'' ಅಂದ.

ತಾಯಿಯನ್ನು ತಬ್ಬಿ ಅತ್ತು ಸಮಾಧಾನಗೊಂಡ ಸದಾಶಿವ ಹೆತ್ತಮ್ಮನ ಸಾವಿನ ನೋವನ್ನು ಮರೆಯಲೆತ್ನಿಸಿದ.

**– ಬೇಲೂರು ರಾಮಮೂರ್ತಿ**

## ಬೇಲೂರು ರಾಮಮೂರ್ತಿ

ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ ಶ್ರೀ ಬೇಲೂರು ರಾಮಮೂರ್ತಿ ಅವರು ೧೯೫೦ರ ಜೂನ್ ೩೦ರಂದು ಜನಿಸಿದರು. ಅವರ ತಂದೆ ಟಿ. ಕೇಶವಮೂರ್ತಿ ರಾವ್ ತಾಯಿ ಸುಬ್ಬಲಕ್ಷ್ಮಮ್ಮ. ಸುಮಾರು ಇಪ್ಪತ್ತಕ್ಕಿಂತಲೂ ಹೆಚ್ಚು ಕಾದಂಬರಿಗಳು, ಐವತ್ತಕ್ಕಿಂತಲೂ ಹೆಚ್ಚು ಕಿರುಕಾದಂಬರಿಗಳು, ಎಂಟು ಕಥಾಸಂಕಲನಗಳು, ಇಪ್ಪತ್ತಮೂರು ಹಾಸ್ಯಲೇಖನಗಳ ಸಂಗ್ರಹಗಳಲ್ಲದೆ ಶಿಶುಸಾಹಿತ್ಯಗಳೂ ಇವರಿಂದ ಕನ್ನಡ ಸಾಹಿತ್ಯಲೋಕಕ್ಕೆ ದೊರೆತಿವೆ. ಅಭಿನೇತ್ರಿ, ಜೀವನಸಂಧ್ಯ, ಕಪ್ಪುನಕ್ಷತ್ರ, ಅಲೆಗಳು, ಮತ್ತೆ ಬೆಳಗಿದ ಚಂದ್ರಮ, ವಿಷವೃತ್ತ ಮುಂತಾದವು ಅವರ ಪ್ರಮುಖ ಕಾದಂಬರಿಗಳು. ಅತಿಥಿ, ಸ್ವರಸಂಗಮ, ಜೋಡಿರಾಗ, ಅಗ್ನಿಜ್ವಾಲೆ, ಮುಂತಾದವು ಅವರ ಕಿರುಕಾದಂಬರಿಗಳ ಗುಚ್ಚಗಳಾಗಿವೆ. ಪುಣ್ಯಕೋಟಿಯ ನಾಡಿನಲ್ಲಿ, ಕಥಾಕುಸುಮ, ಕಥಾಬಿಂಬ, ಆಕಾಶದಿಂದ ಧರೆಗೆ ಮುಂತಾದವು ಇವರ ಕಥಾಸಂಕಲನಗಳಾಗಿವೆ. ಹಾಸ್ಯಪುಷ್ಪ, ನಗೆಜೋಗುಳ, ಜಾಲಿಜಾಲಿ ಜೋಕಾಲಿ ಮುಂತಾದವು ಹಾಸ್ಯ ಸಂಕಲನಗಳಾಗಿವೆ. ಅಲ್ಲದೆ ಹಲವಾರು ಚಲನಚಿತ್ರಗಳಿಗೆ ಗೀತರಚನೆಯನ್ನು ಮಾಡಿರುವ ಇವರು ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರಾಗಿದ್ದು ಹಲವಾರು ಧಾರಾವಾಹಿಗಳಿಗೆ ಸಂಭಾಷಣೆಯನ್ನೂ ಬರೆದಿದ್ದಾರೆ.

ಗೊರೂರು ಪ್ರಶಸ್ತಿ, ರನ್ನ ಪ್ರಶಸ್ತಿ, ಕೇಫ ಪ್ರಶಸ್ತಿ, ಪರಮಾನಂದ ಪ್ರಶಸ್ತಿ, ಕುವೆಂಪು ಪ್ರಶಸ್ತಿ, ಐವತ್ತೆರಡನೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿ ಇತ್ಯಾದಿಗಳು ಬೇಲೂರು ರಾಮಮೂರ್ತಿಯವರಿಗೆ ಸಂದ ಪ್ರಶಸ್ತಿಗಳಾಗಿವೆ.



## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ತಮ್ಮನ ಊರಿನಿಂದ ರಾಜಾರಾಯರು ಮತ್ತು ಪತ್ನಿ ಸುಂದರಮ್ಮ ಹಿಂದಿರುಗಿ ಮನೆಗೆ ಬಂದಾಗ ಅವರ ಮನೆಯ ಸ್ಥಿತಿ ಹೇಗಿತ್ತು?
2. ಸದಾಶಿವನು ಆಫೀಸಿಗೂ ಮನೆಗೂ ಹೋಗದಿರಲು ಕಾರಣವೇನು?
3. ಸದಾಶಿವನು ನಾಪತ್ತೆಯಾದಾಗ ರಾಜಾರಾಯರ ಮತ್ತು ಸುಂದರಮ್ಮನವರ ಮನಸ್ಸಿನಲ್ಲಿ ಮೂಡಿದ ಸಂಶಯಗಳೇನು?

## ಪ್ರಶ್ನೆ ತಯಾರಿಸಿರಿ.

ಈ ಕಥೆಯ ಪ್ರಧಾನ ಆಶಯಗಳು ಉತ್ತರವಾಗಿ ಬರುವಂತೆ ಸಾಧ್ಯವಿರುವಷ್ಟು ಪ್ರಶ್ನೆಗಳನ್ನು ತಯಾರಿಸಿರಿ.

## ಶೀರ್ಷಿಕೆ ಕೊಡಿರಿ

'ಕಣ್ಣಾರೆ ಕಂಡರೂ....' ಕಥೆಗೆ ಸೂಕ್ತವಾದ ಬೇರೆಬೇರೆ ಶೀರ್ಷಿಕೆಗಳನ್ನು ಕೊಡಿರಿ. ಆ ಶೀರ್ಷಿಕೆಗಳನ್ನು ಕೊಡಲು ಕಾರಣಗಳನ್ನು ತಿಳಿಸಿರಿ.

## ಪಾತ್ರಚಿತ್ರಣ ಮಾಡಿರಿ

'ಕಣ್ಣಾರೆ ಕಂಡರೂ....' ಕಥೆಯಲ್ಲಿ ನಿಮಗೆ ಇಷ್ಟವಾದ ಪಾತ್ರದ ಪಾತ್ರಚಿತ್ರಣ ಮಾಡಿರಿ.

## ಸಂದೇಶ ಬರೆಯಿರಿ

ಈ ಕತೆಯು ನೀಡುವ ಸಂದೇಶವೇನು? ನಿಮ್ಮದೇ ಮಾತುಗಳಲ್ಲಿ ಬರೆಯಿರಿ.

## ದಾಖಲೀಕರಣಕ್ಕೆ ಸಿದ್ಧತೆ ಮಾಡಿರಿ

ಈ ಕಥೆಯನ್ನು ಛಾಯಾಗ್ರಹಣದ ಮೂಲಕ ನೀವು ದಾಖಲಿಸಿಕೊಳ್ಳುತ್ತೀರೆಂದು ಭಾವಿಸಿರಿ. ಅದಕ್ಕಾಗಿ ನೀವು ಆಯ್ದುಕೊಳ್ಳುವ ಸನ್ನಿವೇಶಗಳು ಯಾವುವು? ಆ ಸನ್ನಿವೇಶಗಳನ್ನು ದಾಖಲೀಕರಣಕ್ಕೆ ಹೊಂದಿಕೆಯಾಗುವಂತೆ ಬದಲಾಯಿಸಿ ಬರೆಯಿರಿ.

2

# ಕೈ ತುತ್ತು ತಿನಿಸಿದ್ದೆ



ಕೈತುತ್ತು ತಿನಿಸಿದ್ದೆ ಜೋಗುಳವ ಹಾಡಿದ್ದೆ
ತಂಗೀಯೆ ನಿನ್ನ ಬೆಳೆಸಿದ್ದೆ । ಹೂವಾಗಿ
ಗಂಡನ ಮನೆಗ್ಹೋಗಿ ಮರಿಬ್ಯಾಡ ॥
    ಮರೆವುದು ಹೇಗಣ್ಣ ನನಕಣ್ಣು ನೀನಣ್ಣ
    ಅಚಲವು ಎಂದಿಗೂ ಬಾನಾ ಬಣ್ಣ । ಅಣ್ಣ
    ಮರೆತರೆ ಉಳಿವು ಇರದಣ್ಣ
ಅತ್ತೆ ಮಾವಂದಿರು ತಂದೆ ತಾಯಂತೆ
ಗಂಡನೆ ನಿನಗೆ ಸೌಭಾಗ್ಯ । ನನತಂಗಿ
ಬೇದಾವ ಮಾಡಾದೆ ಬಾಳಮ್ಮ ॥
    ನಿನ ಮಾತು ಮೀರಲಾರೆ ಬೇದಾವ ಮಾಡಲಾರೆ
    ಅವರ ಎದುರಾಗಿ ನಡೆಯಲಾರೆ । ಅಣ್ಣಯ್ಯ
    ಹರಸಿ ಕಳಿಸಣ್ಣ ಆ ಮನೆಗೆ ॥
ಒಡಿಬ್ಯಾಡ ಸಂಸಾರ ನಿನಗಿರಲಿ ಎಚ್ಚರ
ಸಿರಿಬಂದ್ರೆ ಮರಿಬ್ಯಾಡ ತವರೂರ । ನನತಂಗಿ
ಸಿರಿಯಲ್ಲಿ ನೀತಿ ಬಿಡಬ್ಯಾಡ ॥
    ಸಿರಿಯು ನನಗೇಕಣ್ಣ ಗಂಡನೆ ಮಿಗಿಲಣ್ಣ
    ನಶ್ವರದ ಆ ಬಾಳು ಇರಲೇಕೆ । ಅಣ್ಣಯ್ಯ
    ನಿನ್ನಂತ ಅಣ್ಣನ ಪಡೆದಾಗ ॥
ಸಲಿಗೆಯು ತರವಲ್ಲ ಅತಿಮಾತು ಒಳಿತಲ್ಲ
ಸುಳ್ಳೇ ಎಂದೆಂದಿಗೂ ನಿಜವಲ್ಲ । ನನತಂಗಿ
ಸೋಮಾರಿ ಬಾಳು ಬಾಳಲ್ಲ ॥
    ನಿನ ಮಾತು ದೀಪವಾಗಿ ನನ ಬಾಳಿಗೆ ಬೆಳಕಾಗಿ
    ಇರಲಿ ಎಂದೆಂದು ಸ್ಥಿರವಾಗಿ । ಅಣ್ಣಯ್ಯ
    ನಿನ ರಕ್ಷಣೆ ನನಗಿರಲಿ ॥

**- ಜನಪದ ಗೀತೆ**

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಅಣ್ಣನು ತಂಗಿಯನ್ನು ಬೆಳೆಸಿದ್ದು ಹೇಗೆ?
2. ಅಣ್ಣನು ತಂಗಿಗೆ ನೀಡಿದ ಹಿತವಚನವೇನು?
3. ವರ್ತನೆಯ ಕುರಿತಾಗಿ ಅಣ್ಣನು ತಂಗಿಗೆ ಹೇಳಿದ ಮಾತೇನು?

## ಸಂಭಾಷಣೆ ಬರೆಯಿರಿ

ಈ ಜನಪದ ಗೀತೆಯಲ್ಲಿ ಬರುವ ಅಣ್ಣತಂಗಿಯರ ಮಾತುಕತೆಗಳನ್ನು ಸಂಭಾಷಣೆ ರೂಪದಲ್ಲಿ ಬರೆಯಿರಿ.

## ಆಮಂತ್ರಣ ಪತ್ರಿಕೆ ತಯಾರಿಸಿರಿ

ನಿಮ್ಮ ಮನೆಯಲ್ಲಿ ಒಂದು ವಿಶೇಷ ಸಮಾರಂಭ ನಡೆಯಲಿದೆ ಎಂದು ಭಾವಿಸಿರಿ. ಅದಕ್ಕೆ ಬಂಧುಮಿತ್ರರನ್ನು ಬರಮಾಡಿಕೊಳ್ಳುವುದಕ್ಕಾಗಿ ಒಂದು ಆಮಂತ್ರಣ ಪತ್ರಿಕೆಯನ್ನು ತಯಾರಿಸಿರಿ.

## ಸ್ವಾರಸ್ಯ ಬರೆಯಿರಿ.

ಕೆಳಗೆ ಕೊಡಲಾದ ಸಾಲಿನ ಸ್ವಾರಸ್ಯ ಬರೆಯಿರಿ.

ಮರೆವುದು ಹೇಗಣ್ಣ ನನಕಣ್ಣು ನೀನಣ್ಣ<br>
ಅಚಲವು ಎಂದಿಗೂ ಬಾನಾ ಬಣ್ಣ ।

## ಸಂಗ್ರಹಿಸಿರಿ

ಕೌಟುಂಬಿಕ ಸಂಬಂಧಗಳ ಕುರಿತಾಗಿರುವ ಜನಪದ ಗೀತೆಗಳನ್ನು ಸಂಗ್ರಹಿಸಿರಿ.

3

# ಮಾನವತೆ

"ಏನಾಯ್ತು? ದಾರಿಬಿಡಿ. ಸ್ವಲ್ಪ ದೂರ ಸರೀರಿ.... ಗಾಳಿ ಆಡಲಿ" ಹೀಗೆ ಒಬ್ಬೊಬ್ಬರು ಮಾತನಾಡುತ್ತಿದ್ದರು. ಗುಂಪನ್ನು ಸೀಳಿಕೊಂಡು ಏನೆಂದು ನೋಡಲು ಬಂದೆ. ಒಬ್ಬ ನಡುಪ್ರಾಯದ ಮಹಿಳೆ ಬಿದ್ದಿದ್ದಾಳೆ. ಮುಖಕ್ಕೆ ತರಚಿದಂಥ ಗಾಯವಾಗಿದೆ. ಯಾರೋ ನೀರು ಕೊಟ್ಟಿದ್ದರು. ಕುಡಿದು ಚೇತರಿಸಿಕೊಂಡ ಮಹಿಳೆ ಎದ್ದು ನಿಲ್ಲಲು ಪ್ರಯತ್ನಿಸುತ್ತಿದ್ದಳು. ಮುಖದಲ್ಲಿ ಅತೀವ ನೋವಿನ ಚಿಹ್ನೆ ಎದ್ದು ಕಾಣುತ್ತಿತ್ತು. ಬಹಳ ನಿತ್ರಾಣಳಾಗಿದ್ದಳು. ಗುಂಪಿನಲ್ಲಿದ್ದ ಕೆಲವರು ನೋಡಿ ಮರುಕ ವ್ಯಕ್ತಪಡಿಸಿ ಮುಂದೆ ಸಾಗಿದರು. ಕೆಲವರು "ಬದುಕೋ ನಾಟಕ ಕಣ್ರೀ ಇದು" ಎಂದು ಅಮಾನವೀಯವಾಗಿ ಮಾತಾಡಿ ಹೋಗುತ್ತಿದ್ದರು. ಮತ್ತೆ ಕೆಲವರು 'ತಮಗೇನೂ ಗೊತ್ತಾಗಲೇ ಇಲ್ಲ' ಎಂಬಂತೆ ಕಣ್ಣುಹಾಯಿಸಿ ಮುಂದೆ ನಡೆದರು.



ಆ ಪ್ರದೇಶಕ್ಕೆ ಹೊಸಬನಾದ ನಾನು 'ಏನು ಮಾಡಲಿ' ಎಂದು ಯೋಚಿಸುವಷ್ಟರಲ್ಲಿ ಮಾನವೀಯತೆಯ ಅರಿವಿದ್ದ ಕೆಲವರು "ಇಲ್ಲೇ ಒಂದು ಆಸ್ಪತ್ರೆ ಇದೆ. ತೋರಿಸಿ ಫಸ್ಟ್‌ಏಯ್ಡ್ ಆದರೆ ಸರಿಹೋಗಬಹುದು. ಪೈನ್ ಕಿಲ್ಲರ್ ಟ್ಯಾಬ್ಲೇಟೋ ಅಥವಾ ಇಂಜೆಕ್ಷನ್ನೋ ತೆಗೊಂಡ್ರೆ ಸಲೀಸಾಗಬಹುದು" ಎಂದು ಮಾತನಾಡತೊಡಗಿದರು. ನನಗೂ 'ಅದೇ ಸರಿ' ಅನ್ನಿಸಿ ಅವರ ದೂರ ದೃಷ್ಟಿಗೆ ಮನದಲ್ಲೇ 'ಹ್ಯಾಟ್ಸಾಪ್' ಹೇಳಿ 'ಯಾವುದಾದರೂ ವೆಹಿಕಲ್ ಬರುತ್ತದೋ?' ಎಂದು ಅತ್ತಿತ್ತ ಕಣ್ಣಾಡಿಸಿದೆ. ಪಟ್ಟಣದಿಂದ ಹೊರಪ್ರದೇಶ ಅದಾಗಿದ್ದರಿಂದ ವಾಹನಗಳ ಸಂಚಾರ ಅಷ್ಟಕ್ಕಷ್ಟೇ. ಟೂ ವ್ಹೀಲರ್‌ಗಳು ಓಡಾಡುತ್ತಿದ್ದವು. ಆದರೆ ಈಕೆಯನ್ನು ಅದರಲ್ಲಿ ಕಳುಹಿಸುವಂತಿರಲಿಲ್ಲ. ಹಾಗೆ ಕಣ್ಣು ದೂರಕ್ಕೆ ಹಾಯ್ದಾಗ ಕಡುನೀಲಿ ಬಣ್ಣದ ಕಾರೊಂದು ಬರುತ್ತಿರುವಂತೆ ಕಂಡಿತು.

ನಾನೆಂದೆ, "ಅಲ್ನೋಡಿ, ಒಂದು ಕಾರು ಬರ್ತಿದೆ. ಅವ್ರಿಗೆ ರಿಕ್ವೆಸ್ಟ್ ಮಾಡಿದ್ರೆ ಬಹುಶಃ ಆಸ್ಪತ್ರೆಗೆ ತಲಪಿಸ್ಬೋದು" ಅಲ್ಲಿದ್ದವರು ನನ್ನ ಮಾತಿಗೆ ಒಗೊಟ್ಟಂತೆ

ಕಂಡುಬಂತು. ಒಬ್ಬ ಮುಂದೆ ಬಂದು ಕೈ ಅಡ್ಡ ಹಾಕಿಯೇಬಿಟ್ಟ. ಕಾರು ನಿಂತಿತು. ಡ್ರೈವಿಂಗ್ ಸೀಟಿನಲ್ಲಿರೋದು ಮಹಿಳೆಯೇ. 'ಅಬ್ಬ ಸುಲಭವಾಯಿತು!' ಎಂದುಕೊಂಡೆ. ಗಾಡಿ ನಿಲ್ಲಿಸಿದವನು ಏನೋ ಹೇಳುತ್ತಿದ್ದ. ಆಕೆ ಮತ್ತೇನೋ ಹೇಳುತ್ತಿರುವಂತೆ ಕಂಡುಬಂತು. ಆಕೆ ಕಾರಿನಿಂದ ಇಳಿದವಳೇ ಗಾಯಗೊಂಡ ಮಹಿಳೆಯನ್ನು ಕಂಡು ಭಯಗೊಂಡವಳಂತಾದಳು. "ಇಲ್ರೀ, ನಾ ಒಲ್ಲೆ. ನಾ ಗಾಡಿ ಹೊಸದಾಗಿ ತಗೊಂಡೀನ್ರೀ. ಮತ್ತೆ ಆಸ್ಪತ್ರೆ, ಪೋಲಿಸ್ ಎಂದೆಲ್ಲಾ ಆದರೇ ಆಗಂಗಿಲ್ರೀ. ನಾ ಹೊಂಟೆ"

ಕಾರು ನಿಲ್ಲಿಸಿದವನು ಸಮಜಾಯಿಸಿ ಕೊಡುತ್ತಿದ್ದ. ಆಕೆ ತಲೆಅಲ್ಲಾಡಿಸಿ ಕಾರು ಹತ್ತಲು ತಯಾರಾದಳು. ನಾ ನೋಡಿದೆ. "ಅರೆ ಮೈತ್ರಾ..." ನನಗೆ ಗೊತ್ತಿರೋ ಆಕೆ ಎಂಬ ಉದ್ಗಾರ ನನ್ನಿಂದ ಹೊರಬಂತು. ಪಕ್ಕದಲ್ಲಿರುವವ "ಹಾಗಾದರೆ ಹೋಗಿ ಹೇಳಿ. ಒಪ್ಪಿಸಿ. ಪಾಪ ಈ ತಾಯಿಯನ್ನು ನೋಡಲಿಕ್ಕೆ ಆಗುತ್ತಾ ಇಲ್ಲ" ಎಂದ. ಹೌದ್ರೀ, ನಾನು ಒಪ್ಪಿಸುತ್ತೇನೆ. ಎಂದು ಮುಂದೆ ಬಂದು "ರೀ ಮೈತ್ರಾ... ಮೈತ್ರಾರವರೇ" ಎಂದೆ. ನಾನು ಸ್ವಲ್ಪ ದೂರದಲ್ಲಿ ಇದ್ದುದರಿಂದ ಆಕೆಗೆ ಕೇಳಿಸಲಿಲ್ಲವೇನೋ. ಅಷ್ಟರಲ್ಲಿ ಕಾರು ಹತ್ತಿದ ಆಕೆ ಕಾರನ್ನು ಚಲಾಯಿಸಿಕೊಂಡು ಹೊರಟೇ ಹೋದಳು.

ಒಂದು ಕ್ಷಣ ಏನೂ ತೋಚದಾಯಿತು. "ಅಲ್ರೀ, ನಿಮಗೆ ಗೊತ್ತಿರೋರು ಎಂದ್ರಿ. ಹೇಳೋದಲ್ವೇ?" ಪಕ್ಕದಲ್ಲಿದ್ದವನೊಬ್ಬ ಕೇಳಿದಾಗ ಸಾವರಿಸಿಕೊಂಡು "ಹೌದ್ರಿ ಗೊತ್ತಿರೋರೆ. ಆದ್ರೆ ನಾನು ಕರೆದದ್ದು ಆಕೆಗೆ ಗೊತ್ತಾಗಲಿಲ್ಲ ಎನಿಸುತ್ತೆ" ಸಮಾಜಾಯಿಸಿದೆ. ಅವನು ತೃಪ್ತಗೊಂಡವನಂತೆ ಕಾಣಲಿಲ್ಲ. ಅಷ್ಟರಲ್ಲಿ ಅದೇ ಮಾರ್ಗದಲ್ಲಿ ಆಟೋ ಒಂದು ಬಂತು. ಯಾರೋ ಅದನ್ನು ನಿಲ್ಲಿಸಿದರು. ಆಟೋ ಎಂಗೇಜಾಗಿದೆ. ಒಳಗಡೆ ಹಿರಿಯ ವ್ಯಕ್ತಿಯೊಬ್ಬ ಕುಳಿತಿದ್ದ. ಆತ ಆಶ್ಚರ್ಯದಿಂದ "ಏಕಪ್ಪಾ ಆಟೋ ನಿಲ್ಲಿಸಿದ್ದು?" ಎಂದು ತಲೆಹೊರಹಾಕಿ ಕೇಳಿದ. ಡ್ರೈವರ್ ಗಾಬರಿಗೊಳ್ಳದೆ "ಏನಾಯ್ತು? ಆಟೋದಲ್ಲಿ ಪ್ಯಾಸೆಂಜರ್ ಇದ್ದಾರೆ" ಎಂದ. ಒಬ್ಬ ವಿಷಯವನ್ನು ಸೂಕ್ಷ್ಮವಾಗಿ ವಿವರಿಸಿದಾಗ ಆಟೋ ಡ್ರೈವರ್ ಯೋಚನಾಮಗ್ನನಾದ. ವಿಷಯ ಅರ್ಥೈಸಿಕೊಂಡ ಹಿರಿಯರು ತಾವೇ ಇಳಿದು "ನೋಡಪ್ಪ ಆಕೆಗೆ ತುಂಬಾ ಪೆಟ್ಟಾದ ಹಾಗಿದೆ. ನಾನು ಬೇರೆ ಆಟೋ ನೋಡ್ಕೋತೀನಿ. ನೀನು ಆಕೆಯನ್ನು ಕರೆದುಕೊಂಡು ಹೋಗು. ತಗೋ ಬಾಡಿಗೆ" ಎಂದು ಇಪ್ಪತ್ತು ರೂಪಾಯಿಯ ನೋಟನ್ನು ನೀಡುತ್ತಾ ಹೇಳಿದ.

ಆ ಹಿರಿಯನಿಗಿದ್ದ ಮಾನವೀಯತೆ ಈಗಿನ ಯುವ ಪೀಳಿಗೆಯವರಿಗಿಲ್ಲದಿರುವುದನ್ನು ಕಂಡು ಒಂದು ಕ್ಷಣ ತಲೆತಗ್ಗಿದಂತಾಯಿತು.

**– ಸಾಧಾರ**

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಲೇಖಕರು ದಾರಿಯಲ್ಲಿ ಕಂಡ ದೃಶ್ಯ ಯಾವುದು?
2. ದಾರಿಯಲ್ಲಿ ಬಿದ್ದ ನಡುಪ್ರಾಯದ ಹೆಂಗಸನ್ನು ಕಂಡ ಮೈತ್ರಾ ಏನೆಂದಳು?
3. ಅಟೋದಲ್ಲಿದ್ದ ಹಿರಿಯರು ಏನು ಮಾಡಿದರು?

## ಕ್ರಮೀಕರಿಸಿ ಬರೆಯಿರಿ

'ಮಾನವತೆ' ಕಥೆಯ ಪ್ರಧಾನ ಘಟನೆಗಳನ್ನು ಅನುಕ್ರಮವಾಗಿ ಬರೆಯಿರಿ.

## ಅಭಿಪ್ರಾಯ ಟಿಪ್ಪಣಿ ಬರೆಯಿರಿ

ಇಂದಿನ ಯುವ ಪೀಳಿಗೆಯವರಲ್ಲಿ ಮಾನವೀಯತೆ ಕಡಿಮೆಯಾಗುತ್ತಿದೆಯೇ? ಈ ಕುರಿತು ನಿಮ್ಮ ಅಭಿಪ್ರಾಯವನ್ನು ಟಿಪ್ಪಣಿಯಾಗಿ ಬರೆಯಿರಿ.

## ಶಿಷ್ಟರೂಪದಲ್ಲಿ ಬರೆಯಿರಿ

ಕೆಳಗೆ ಕೊಡಲಾದ ಆಡು ಭಾಷೆಯಲ್ಲಿರುವ ವಾಕ್ಯಗಳನ್ನು ಶಿಷ್ಟರೂಪದಲ್ಲಿ ಬರೆಯಿರಿ.

- ಅಲ್ನೋಡಿ ಒಂದು ಕಾರು ಬರ್ತಿದೆ. ಅವ್ರಿಗೆ ರಿಕ್ವೆಸ್ಟ್ ಮಾಡಿದ್ರೆ ಆಸ್ಪತ್ರೆಗೆ ತಲುಪಿಸ್ಬೋದು.
- ನೀವು ಹಿಂಗೆ ಕುಂತ್ರೆ ಆಗುತ್ತಾ? ಯಾರಾದ್ರೂ ಒಬ್ರಲ್ಲಿ ಕೇಳ್ಕೊಂಡು ಓಗ್ಬುಡಿ.
- ಅವ್ರು ಇವ್ರು ಏನಾರ ಅಂತಾರೆ ಅಂತ ಬೇಸ್ರ ಮಾಡ್ಕಂಡು ಇದ್ರೆ ನಮ್ಗೇನು ಅನ್ನಾ ಬಟ್ಟೆ ಸಿಗ್ತದಾ ಮಾರಾಯ್ರೇ.
- ವಳ್ಳೇ ಕೆಲ್ಸ ನಡೀತೈತೆ ಅಂತ ಗೊತ್ತಾದ್‌ಕೂಡ್ಲೆ ಏನಾರ ಸಹಾಯ ಮಾಡೋಣಾಂತ ಬಂದ್ಬುಟ್ಟೆ.

4

# ಭರತನ ಭ್ರಾತೃಪ್ರೇಮ

**ಸಂದರ್ಭ :**

ವಯೋವೃದ್ಧನಾದ ಅಯೋಧ್ಯೆಯ ಚಕ್ರವರ್ತಿ ದಶರಥನು ಹಿರಿಯ ಮಗನಾದ ಶ್ರೀರಾಮನಿಗೆ ರಾಜ್ಯದ ಪಟ್ಟಾಭಿಷೇಕ ಮಾಡಲು ತೀರ್ಮಾನಿಸುತ್ತಾನೆ. ಈ ವಿಚಾರವನ್ನು ತಿಳಿದ ದಾಸಿ ಮಂಥರೆಯು ದಶರಥನ ಮೂರನೆಯ ಹೆಂಡತಿಯಾದ ಕೈಕೇಯಿಗೆ ದುರ್ಬೋಧನೆ ಮಾಡುತ್ತಾಳೆ. ಅವಳ ಸಲಹೆಯಂತೆ ಕೈಕೇಯಿಯು ಹಿಂದೆ ತನಗೆ ನೀಡಿದ ಎರಡು ವರಗಳನ್ನು ನೀಡುವಂತೆ ದಶರಥನಲ್ಲಿ ಕೇಳಿಕೊಳ್ಳುತ್ತಾಳೆ. ಶ್ರೀರಾಮನಿಗೆ ಹದಿನಾಲ್ಕು ವರ್ಷ ವನವಾಸ ಮತ್ತು ಭರತನಿಗೆ ಪಟ್ಟಾಭಿಷೇಕವೆಂಬುದೇ ಆ ವರ.

'ತಾಯಿಯ ಮಾತು ಬೇರಲ್ಲ ತಂದೆಯ ಮಾತು ಬೇರಲ್ಲ' ಎಂದು ಪರಿಗಣಿಸಿದ ಶ್ರೀರಾಮನು ಕಾಡಿಗೆ ಹೋಗುತ್ತಾನೆ. ಅವನ ಜೊತೆಯಲ್ಲಿ ಸೀತೆಯೂ ಲಕ್ಷ್ಮಣನೂ ತೆರಳುತ್ತಾರೆ. ಆಗ ಭರತನು ಅಯೋಧ್ಯೆಯಲ್ಲಿರಲಿಲ್ಲ. ರಾಮನ ಅಗಲುವಿಕೆಯನ್ನು ಸಹಿಸಲಾರದೆ ದಶರಥನು ಮರಣಹೊಂದುತ್ತಾನೆ. ಕೂಡಲೇ ಭರತನು ಅಯೋಧ್ಯೆಗೆ ಬರುತ್ತಾನೆ. ವಿಷಯವನ್ನೆಲ್ಲ ತಿಳಿದು ದುಃಖದಲ್ಲೇ ತಂದೆಯ ಶವಸಂಸ್ಕಾರ ಮಾಡುತ್ತಾನೆ. "ಶ್ರೀರಾಮನೇ ರಾಜನಾಗಬೇಕು" ಎಂದು ಹೇಳುತ್ತಾ ಅವನನ್ನು ಕರೆತರಲು ಕಾಡಿಗೆ ಸಾಗುತ್ತಾನೆ. ಚಿತ್ರಕೂಟವೆಂಬಲ್ಲಿ ಅಣ್ಣನನ್ನು ಭೇಟಿಯಾಗುತ್ತಾನೆ.

ಎದ್ದು ಬಳಿಕಪ್ಪಿದನು ನೇಹದ ।
ಹೊದ್ದಿಗೆಯಲನುಜನನು ತಾಯಿಗ ।
ಳಿದ್ದ ಹದನನು ಕಂಡು ಕಂಗಳಲುಗಿಸಿದನು ಜಲವ ॥
ತಿದ್ದಿತೇ ಭವದೀಯ ಕರ್ಣದ ।
ಹೊದ್ದಿಗೆಯ ಸೌಭಾಗ್ಯವಿಂದ್ರನ ।
ಗದ್ದುಗೆಯನಡಜೀದನೆ ಪಿತನೆನುತೆಱಗಿದನು ಪದಕೆ ॥

ಅಳಲಿದರು ಬಳಿಕೊಬ್ಬರೊಬ್ಬರು ।
ಹಳವಿಸುತ ಹಲವಂಗದಲಿ ನೃಪ ।
ಕುಲಲಲಾಮಗೆ ವೀರದಶರಥಸಾರ್ವಭೌಮಂಗೆ ॥
ತಿಳುಹಿ ಬಳಿಕನಿಬರನು ಸಲಿಲಾಂ ।
ಜಲಿ ಮೃತಸ್ನಾನಾದಿ ಕರ್ಮಾ ।
ವಳಿಯ ಮಾಡಿಸಿ ಮುನಿಪನುಪಚರಿಸಿದನು ರಘುಪತಿಯ ॥

ಲವನೆ ಕೇಳಾ ದಿನವನಾ ದಳ ।
ಭವನದಲಿ ನೂಕಿದರು ಮರುದಿನ ।
ವವನಿಪತಿಗಾ ಭರತ ಭಯಭಕ್ತಿಯಲಿ ಕೈಮುಗಿದು ॥
ಅವಧರಿಸು ರಾಜೇಂದ್ರ ವಸುಧಾ ।
ಯುವತಿಗರಸಾಗೇಳು ರಕ್ಷಿಸು ।
ಭುವನಜನವನು ಬಿಜಯಮಾಡೆಂದೆಱಗಿದನು ಪದಕೆ ॥



ತಂದೆಯಡಗಿದ ಬಳಿಕ ನೀನೇ ।
ತಂದೆತಾಯ್‌ನಮಗವನಿತಾಯಲಿ ।
ಸಂಧಿಸುವರೇ ಮನವ ಮಕ್ಕಳು ಮರಿಯ ಮಾತೇನು ॥
ಇಂದುನೀವರಸಾಗದಿರೆ ತ ।
ಮ್ಮಂದಿರಲಿ ತಾನೊಬ್ಬ ನಿಮಗಿ ।
ಲ್ಲೆಂದು ಚಿತ್ತೈಸೆನುತ ಬಿನ್ನಹ ಮಾಡಿದನು ಭರತ ॥

ಆದಡೆಲೆ ರಾಜೇಂದ್ರ ನಿಮ್ಮ ।
ಪಾದುಕೆಯ ಚಿತ್ತೈಸಿ ದೇವರ ।
ಪಾದವೆಂದೇ ಕಂಡು ಸೇವೆಯ ಮಾಡಿಕೊಂಡಿಹೆನು ॥
ಕಾದಿಹೆನು ಹದಿನಾಲ್ಕು ವರುಷವು ।
ಮೇದಿನಿಯ ನೀವ್ ಬಾರದಿರಲು ನಿ ।
ವೇದಿಸುವೆನೀ ತನುವನನಲನಂಗೆಂದನಾ ಭರತ ॥

ಎನಲು ಭರತನ ಬಿನ್ನಹದ ನಿಜ ।
ಮನದ ಭಕುತಿಗೆ ಮೆಚ್ಚಿ ಕರುಣಾ ।
ವನಧಿ ಶಿರವನು ತಕ್ಕಯಿಸಿ ನಿಜಭಾವಶುದ್ಧಿಯಲಿ ॥
ಘನಕೃಪಾಸಾಗರನು ತನ್ನಯ ।
ನೆನಹು ನೆಲೆನಿಲುವಂತೆ ಪಾದುಕೆ ।
ಯನು ಕರುಣಿಸಲು ಶರಣು ಸಲಹೆಂದೆರಗಿದನು ಭರತ ॥

ಎಂದು ಬೀಳ್ಕೊಂಡಖಿಳಸೇನಾ ।
ವೃಂದಸಹಿತಾ ಭರತನೃಪನೆ ।
ಯ್ತಂದು ನಗರವ ಹೊಗದೆ ನಂದಿ ಗ್ರಾಮದಲಿ ಬಳಿಕ ॥
ಇಂದಿರೇಶನ ತೊರವೆಯರಸನ ।
ಸಂದ ನಿಡಪದಭಕ್ತಿಪರಮಾ ।
ನಂದರಸಮಯನಾಗಿ ಪಾಲಿಸಿದನು ಧರಾಳತಳವ ॥

– **ತೊರವೆಯ ನರಹರಿ**

## ತೊರವೆಯ ನರಹರಿ

ತೊರವೆಯ ನರಹರಿಯ ಕಾಲ ಸುಮಾರು ೧೬ನೇ ಶತಮಾನ ಎಂದು ಹೇಳಬಹುದು. ಈತನನ್ನು ಕುಮಾರ ವಾಲ್ಮೀಕಿ ಎಂದೂ ಕರೆಯುತ್ತಾರೆ. ತೊರವೆಯ ನರಸಿಂಹನು ಈತನ ಇಷ್ಟ ದೈವ. ಈತನು ಬರೆದ ರಾಮಾಯಣವು ಬೃಹತ್ ಕಾವ್ಯವಾಗಿದ್ದು ತೊರವೆ ರಾಮಾಯಣ ಎಂದೇ ಖ್ಯಾತವಾಗಿದೆ. ಈ ಕಾವ್ಯದಲ್ಲಿ ಸುಮಾರು ೫೦೦೦ ಪದ್ಯಗಳಿದ್ದು ಭಾಮಿನಿ ಷಟ್ಪದಿಯಲ್ಲಿ ರಚಿಸಲಾಗಿದೆ. ಈತನಿಗೆ 'ಕವಿರಾಜ ಹಂಸ' ಎಂಬ ಬಿರುದು ಇತ್ತೆಂದು ತಿಳಿದುಬರುತ್ತದೆ. ಮೈರಾವಣ ಕಾಳಗ ಎಂಬ ಇನ್ನೊಂದು ಕೃತಿಯನ್ನೂ ಈತನು ಬರೆದಿರುವಂತೆ ತಿಳಿದುಬಂದಿದೆ. ಮೇಲಿನ ಪದ್ಯಭಾಗವನ್ನು ತೊರವೆ ರಾಮಾಯಣದ ಅಯೋಧ್ಯಾ ಕಾಂಡದ ಆರನೆಯ ಸಂಧಿಯಿಂದ ಆಯ್ದುಕೊಳ್ಳಲಾಗಿದೆ.

### ಪದವಿಂಗಡಿಸಿರಿ

ಕೆಳಗೆ ಕೊಡಲಾದ ಪದಗಳನ್ನು ವಿಂಗಡಿಸಿ ಬರೆಯಿರಿ.

ಉದಾ : ಹೊದ್ದಿಗೆಯಲಿ + ಅನುಜನನು ⟶ ಹೊದ್ದಿಗೆಯಲನುಜನನು

ಗದ್ದುಗೆಯನು + ಅಡರಿದನೆ ⟶ ಗದ್ದುಗೆಯನಡರಿದನೆ.

ಬಿಜಯಮಾಡು + ಎಂದು + ಎರಗಿದನು ⟶ ಬಿಜಯಮಾಡೆಂದೆರಗಿದನು

ಕಂಗಳಲುಗಿಸಿದನು .....................................................

ತನುವನನಲಂಗೆ .....................................................

ಬೀಳ್ಕೊಂಡಖಿಳ .....................................................

ಬಳಿಕೊಬ್ಬರೊಬ್ಬರು .....................................................

ಮುನಿಪನುಪಚರಿಸಿದನು .....................................................

ಪಿತನೆನುತೆರಗಿದನು .....................................................

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ತನ್ನ ಬಳಿಗೆ ಬಂದ ಭರತ ಮತ್ತು ತಾಯಂದಿರಲ್ಲಿ ಶ್ರೀರಾಮನು ಹೇಗೆ ನಡೆದುಕೊಂಡನು?
2. "ಹಾಗಾದರೆ ಪಾದುಕೆಯನ್ನಾದರೂ ಕರುಣಿಸು" ಎಂದು ಭರತನು ಕೇಳಲು ಕಾರಣವೇನು?
3. ಕಾಡಿನಲ್ಲಿ ಅಣ್ಣನ ಆಶೀರ್ವಾದವನ್ನು ಪಡೆದು ಮರಳಿದ ಭರತನು ಏನು ಮಾಡಿದನು?

## ಸಂದರ್ಭ ತಿಳಿಸಿರಿ.

ಕೆಳಗಿನ ಮಾತುಗಳನ್ನು ಯಾರು, ಯಾರಿಗೆ, ಯಾವಾಗ ಹೇಳಿದರು ಎಂಬುದನ್ನು ಬರೆಯಿರಿ.

1. ತಂದೆಯಡಗಿದ ಬಳಿಕ ನೀನೇ ತಂದೆತಾಯ್.
2. ಇಂದ್ರನ ಗದ್ದುಗೆಯನಡರಿದನೆ ಪಿತನು.
3. ನೀವ್ ಬಾರದಿರಲು ನಿವೇದಿಸುವೆನೀ ತನುವನನಲಂಗೆ.

## ಪ್ರಾಸ ಗುರುತಿಸಿರಿ

ಎದ್ದು ಬಳಿಕಪ್ಪಿದನು ನೇಹದ । ಹೊದ್ದಿಗೆಯಲನುಜನನು ತಾಯಿಗ
ಇದ್ದ ಹದನವನು ಕಂಡು ಕಂಗಳಲುಗಿಸಿದನು ಜಲವ

– ಇಲ್ಲಿ ಅಡಿಗೆರೆ ಎಳೆದ ಪದಗಳ ಎರಡನೆಯ ಅಕ್ಷರವನ್ನು ಗಮನಿಸಿರಿ. ಇಲ್ಲಿ ಒಂದೇ ಅಕ್ಷರವು ಪುನರಾವರ್ತನೆಗೊಂಡಿದೆ. ಇದನ್ನು ಆದಿಪ್ರಾಸ ಎನ್ನುತ್ತೇವೆ. ಈ ಕಾವ್ಯಭಾಗದಲ್ಲಿ ಬಂದಿರುವ ಆದಿಪ್ರಾಸವುಳ್ಳ ಪದಗಳನ್ನು ಗುರುತಿಸಿ ಬರೆಯಿರಿ.

## ವಾಚನ-ವ್ಯಾಖ್ಯಾನ ಮಾಡಿರಿ

ಭರತನ ಭ್ರಾತೃಪ್ರೇಮ ಕಾವ್ಯಭಾಗವನ್ನು ಸಹಪಾಠಿಯೊಂದಿಗೆ ವಾಚನ-ವ್ಯಾಖ್ಯಾನ ಮಾಡಿರಿ.

## ಪ್ರಸ್ತಾರ ಹಾಕಿ ಛಂದಸ್ಸನ್ನು ಗುರುತಿಸಿರಿ

ಕೆಳಗೆ ಕೊಡಲಾದ ಪದ್ಯದ ಸಾಲುಗಳಲ್ಲಿರುವ ಅಕ್ಷರಗಳನ್ನು ಲಘು ಗುರುಗಳಾಗಿ ಗುರುತಿಸಿರುವುದನ್ನು ಗಮನಿಸಿರಿ. ಇದಕ್ಕೆ 'ಪ್ರಸ್ತಾರ ಹಾಕುವುದು' ಎಂದು ಹೆಸರು. ಪ್ರತಿಯೊಂದು ಸಾಲನ್ನು ಮೂರು ಮತ್ತು ನಾಲ್ಕು ಮಾತ್ರೆಗಳಿರುವ ಗಣಗಳಾಗಿ ಗಣವಿಭಜನೆ ಮಾಡಲು ಸಾಧ್ಯವಿದೆ. ಚಿಕ್ಕ ಸಾಲುಗಳಲ್ಲಿ ನಾಲ್ಕು ನಾಲ್ಕು ಗಣಗಳೂ ಉದ್ದದ ಸಾಲುಗಳಲ್ಲಿ ಆರು ಆರು ಗಣಗಳೂ ಬರುತ್ತವೆ. ಮೂರನೆಯ ಮತ್ತು ಆರನೆಯ ಸಾಲುಗಳ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವಾಗಿ ಗುರುತಿಸಬೇಕು. ಈ ರೀತಿಯ ಲಕ್ಷಣವಿರುವ ಪದ್ಯವನ್ನು ಭಾಮಿನಿ ಷಟ್ಪದಿ ಎನ್ನುತ್ತಾರೆ.

– ∪ ∪ ∪ – ∪ ∪ ∪ – ∪ ∪
ಎದ್ದು|ಬಳಿಕ|ಪ್ಪಿದನು|ನೇಹದ

– ∪ ∪ ∪ ∪ ∪ ∪ ∪ ∪ – ∪ ∪
ಹೊದ್ದಿ|ಗೆಯಲನು|ಜನನು|ತಾಯಿಗ

– ∪ ∪ ∪ ∪ ∪ – ∪ – ∪ ∪ ∪ ∪ ∪ ∪ ∪ ∪ ∪ –
ಇದ್ದ|ಹದನವನು|ಕಂಡು|ಕಂಗಳ|ಲುಗಿಸಿ|ದನು ಜಲ|ವ

ನೀವು ಕಲಿತಿರುವ ಕಾವ್ಯಾಭಾಗದಲ್ಲಿ ಸಾಧ್ಯವಿರುವಷ್ಟು ಪದ್ಯಗಳನ್ನು ಆಯ್ದುಕೊಂಡು ಪ್ರಸ್ತಾರ ಹಾಕಿ ಗಣವಿಭಜನೆ ಮಾಡಿರಿ. ಅದರ ಛಂದಸ್ಸನ್ನು ಗುರುತಿಸಿರಿ.

# ಘಟಕ - 4

# ವಿಜ್ಞಾನ ಜಗತ್ತು

## ಕಲಿಕಾ ಸಾಧನೆಗಳು

- ಕಥೆ, ಕವನ ಮೊದಲಾದ ಸಾಹಿತ್ಯ ಕೃತಿಗಳಲ್ಲಿರುವ ಸೌಂದರ್ಯಾಂಶಗಳನ್ನು ತಿಳಿದುಕೊಂಡು ಸ್ವಂತ ದೃಷ್ಟಿಕೋನದೊಂದಿಗೆ ಮೌಖಿಕವಾಗಿ ಮತ್ತು ಲಿಖಿತವಾಗಿ ಮಂಡಿಸುವುದು.
- ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಚರ್ಚೆಗಳು, ಸಂವಾದಗಳು ಇತ್ಯಾದಿಗಳಲ್ಲಿ ಭಾಗವಹಿಸಿ ಆಶಯವನ್ನು ನಿರರ್ಗಳವಾಗಿ ಮಂಡಿಸುವುದು.
- ಗದ್ಯ ಮತ್ತು ಪದ್ಯಗಳ ಅರ್ಥವನ್ನು ತಿಳಿದುಕೊಂಡು ನಿರರ್ಗಳವಾಗಿ ಓದುವುದು ಮತ್ತು ಹಾಡುವುದು.
- ವಿಭಿನ್ನ ವಿಷಯುಗಳಿಗೆ ಸಂಬಂಧಿಸಿದ ಭಾಷಣ, ಆಶುಭಾಷಣ, ಉಪನ್ಯಾಸ ಮೊದಲಾದವುಗಳನ್ನು ಅರ್ಥೈಸಿಕೊಂಡು ಅವುಗಳಲ್ಲಿರುವ ಆಶಯಗಳನ್ನು ವಿಭಿನ್ನ ರೀತಿಯಲ್ಲಿ ಮಂಡಿಸುವುದು.
- ಸೂಕ್ತವಾದ ಪದ, ಪ್ರಯೋಗ, ಶೈಲಿ ಇತ್ಯಾದಿಗಳನ್ನು ಬಳಸಿಕೊಂಡು ಕಥೆ, ಕವಿತೆ, ನಾಟಕ ಇತ್ಯಾದಿ ವಿವಿಧ ಭಾಷಾವ್ಯವಹಾರ ಪ್ರಕಾರಗಳನ್ನು ರಚಿಸುವುದು ಮತ್ತು ಪರಿಷ್ಕರಿಸಿ ಪ್ರಕಟಿಸುವುದು.
- ಗದ್ಯ, ಪದ್ಯ ಮೊದಲಾದವುಗಳಲ್ಲಿ ಬಳಕೆಯಾಗಿರುವ ಪದ್ಯ, ಪ್ರಯೋಗ, ಶೈಲಿ ಇತ್ಯಾದಿಗಳ ಅರ್ಥವನ್ನು ತಿಳಿದುಕೊಂಡು ಹೊಸ ಸಂದರ್ಭಗಳಲ್ಲಿ ಪ್ರಯೋಗಿಸುವುದು.
- ಸೃಜನಾತ್ಮಕ ರಚನೆಗಳಲ್ಲಿರುವ ವಸ್ತು, ಶೈಲಿ ಹಾಗೂ ಆಶಯಗಳನ್ನು ಅರ್ಥೈಸಿಕೊಂಡು ಬೇರೊಂದು ಪ್ರಕಾರಕ್ಕೆ ಬದಲಾಯಿಸುವುದು.




ಮೇಲಿನ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿ ನಿಮ್ಮ ಅಭಿಪ್ರಾಯವನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.


1

# ಅಂತರಜಾಲ ಮತ್ತು ಜೀವಜಾಲ

ಪೊರಕೆ ಅವಳ ಕೈಯಲ್ಲಿತ್ತು. ಅವಳ ಗುರಿ ನನ್ನ ಕಾಲಬಳಿ ಇತ್ತು. 'ಜೇಡ.... ಜೇಡ! ಬೇಡ, ಬೇಡ!' ಎಂದು ಕೂಗಿಕೊಂಡೆ.

ಅದದ್ದಿಷ್ಟೆ; ನನ್ನ ಡೆಸ್ಕ್ ಕೆಳಗೆ ಒಂದೆರಡು ಜೇಡರ ಬಲೆಗಳನ್ನು ನಾನು ಹುಷಾರಾಗಿ ಕಾಪಾಡಿಕೊಂಡು ಬಂದಿದ್ದೆ. ಅದನ್ನು ಝಾಡಿಸಲೆಂದು ಇವಳು ಪೊರಕೆ ಎತ್ತಿದ್ದಳು. ದೂಳು ಹೋದರೆ ಹೋಗಲಿ; ಆದರೆ ಜೇಡರ ಬಲೆ ಹೇಗಿದೆಯೋ ಹಾಗೇ ಇರಬೇಕೆಂಬುದು ನನ್ನ ಆಸೆ. ಏಕೆಂದರೆ ಸಿಬಿಐ ಬಲೆ ಬೀಸಿದೆ ಎಂದರೆ ಲೀಡರ್‌ಗಳ ಹಾರಾಟ ಕಡಿಮೆಯಾಗುವ ಹಾಗೆ; ಈ ಜೇಡರ ಬಲೆ ಇದ್ದ ತಾಣದಲ್ಲಿ ಸೊಳ್ಳೆಗಳು ಕಮ್ಮಿ ಎಂಬುದನ್ನು ನಾನು ಕಂಡುಕೊಂಡಿದ್ದೆ. ಹಾಗಾಗಿ ಮೇಜಿನ ಕೆಳಗಿನ ಜೇಡರ ಬಲೆಯ ರಕ್ಷಣೆ ಇದ್ದರೆ ನಾನು ಹಾಯಾಗಿ ಕಂಪ್ಯೂಟರಿನ ಜತೆ ಕಾಲಯಾಪನೆ ಮಾಡಬಹುದಿತ್ತು. ಕೆಳಗಿದ್ದ ಜೇಡ ನನ್ನ ಕಾಲಯಾತನೆ ಕಮ್ಮಿ ಮಾಡುವ ಸಾಧನವಾಗಿತ್ತು. ಆದರೇನು, ನನಗೆ ಸೊಳ್ಳೆಗಳ ಮೇಲಿದ್ದಷ್ಟೇ ಜಿಗುಪ್ಸೆ ನನ್ನಾಕೆಗೆ ಜೇಡ, ಜಿರಲೆಗಳ ಮೇಲಿದ್ದುದರಿಂದ ಅವಳ ಪೊರಕೆ ಸೇವೆಗೆ ಜಾಲಗಳೆಲ್ಲ ಪಡ್ಚವಾಗುತ್ತಿದ್ದವು.

ಸೊಳ್ಳೆ ಎಂದಾಗಲೆಲ್ಲ ಒಂದು ಪ್ರಶ್ನೆ ಎದುರಾಗುತ್ತದೆ. 'ಮೊಬೈಲ್ ಟವರ್‌ಗಳ ಹಾವಳಿಯಿಂದಾಗಿ ಮನೆಗುಬ್ಬಿಗಳು, ರಣಹದ್ದುಗಳು, ಜೇನ್ನೊಣಗಳ ಸಂಖ್ಯೆ ಕಡಿಮೆಯಾಗಿದೆ ಎಂಬ ಮಾತು ಹೌದಾದರೆ ಸೊಳ್ಳೆಗಳ ಹಾವಳಿ ಯಾಕೆ ಕಡಿಮೆ ಆಗಿಲ್ಲ' ಎಂದು ನಾನು ಆಗಾಗ ಇವಳೊಂದಿಗೆ ವಾದ ಹೂಡುತ್ತಿದ್ದೆ. ಅವಳ ಉತ್ತರ ರೆಡಿ ಇರುತ್ತಿತ್ತು. 'ನಗರಗಳಲ್ಲಿ ಕಡಿಮೆ ಆಗಿರಬಹುದು. ನಿಮಗೇನು ಗೊತ್ತು?



ಟವರೇ ಇಲ್ಲದ ಈ ಹಳ್ಳಿ ಕೊಂಪೆಗೆ ಬಂದು ಠಿಕಾಣಿ ಹೂಡಿದ್ದೀರಿ. ಅದಕ್ಕೇ ಇಲ್ಲಿ ಸೊಳ್ಳೆಯೂ ಜಾಸ್ತಿ, ಜಿರಲೆಯೂ ಜಾಸ್ತಿ, ಹೆಗ್ಗಣವೂ ಜಾಸ್ತಿ' ಎಂದು ಇವಳು ಕುಟುಕುತ್ತಿದ್ದಳು.

ಇಲ್ಲಿ ಟವರ್ ಇಲ್ಲದ್ದರಿಂದ ಸಿಗ್ನಲ್ ತೀರ ದುರ್ಬಲ ಇರುವುದರಿಂದ ನಾನಾ ವಿಧದ ಅನುಕೂಲವೇ ಇದೆ ಅನ್ನಿ. ಫೋನ್ ಕಾಲು ಕಮ್ಮಿ, ಕಾಲು ಏನು, ಅರ್ಧಕ್ಕರ್ಧ ಕಮ್ಮಿ. ಅಂತರಜಾಲವಂತೂ ಅತಿ ನಿಧಾನ. ಒಂದೊಂದು ಇಮೈಲ್ ಅಕ್ಷರವೂ ಕಂಪ್ಯೂಟರಿನಲ್ಲಿ ನಿಧಾನವಾಗಿ, ಒಂದರ ಹಿಂದೊಂದರಂತೆ ಸಾಲುಸಾಲಾಗಿ ಮೂಡುತ್ತಿರುವುದರಿಂದ ನನಗೆ ಅಂತರಜಾಲ ಬಿಟ್ಟು ಜೇಡರ ಜಾಲದ ಮೇಲೆ ನಿಗಾ ಇಡಲು ಸಾಕಷ್ಟು ಸಮಯ ಸಿಗುತ್ತಿತ್ತು. ಅದೊಂದು ಬಗೆಯ ಧ್ಯಾನಯೋಗ. ಎಲ್ಲರಿಗೂ ಸಿದ್ಧಿಸುವಂಥದ್ದಲ್ಲ. ಅಪರೂಪಕ್ಕೆ ಸೊಳ್ಳೆಯೊಂದು ಕಾಲ ಕೆಳಗೆ ಸುತ್ತಾಡಲು ಭಯಪಟ್ಟು ಮೇಜಿನ ಮೇಲಕ್ಕೆ ಬಂದು ಲ್ಯಾಪ್‌ಟಾಪ್ ಎದುರು ಸುಳಿದಾಗಲೆಲ್ಲ ನಾನು ಚಪ್ಪಾಳೆ ತಟ್ಟಿ ಅದನ್ನು ಹಿಡಿದು ಜೇಡರ ಬಲೆಯ ಮೇಲೆ ಹಾಕುತ್ತೇನೆ. ಸೊಳ್ಳೆ ವಿಲವಿಲ ಒದ್ದಾಡುತ್ತಿರುವಾಗ ಜೇಡ ಎಲ್ಲೋ ಮೂಲೆಯಿಂದ ಸರಕ್ಕನೆ ಸಾಗಿ ಬಂದು ಅದನ್ನು ದಾರದಿಂದ ಸುತ್ತುವುದನ್ನು ನೋಡುವುದೇ ಸೊಗಸು.

ಮಳೆಗಾಲದ ರಾತ್ರಿಯಲ್ಲಿ ಎಲ್ಲಕ್ಕಿಂತ ಮುದಕೊಡುವ ಜೀವಿಗಳೆಂದರೆ ಮಿಂಚುಹುಳಗಳು. ಅವು ಮರ ಸುತ್ತುತ್ತ ಲೇಸರ್ ಶೋ ನಡೆಸುತ್ತ ಹಾದಿ ತಪ್ಪಿ ನಮ್ಮ ವರಾಂಡಕ್ಕೂ ಬರುತ್ತವೆ. ಕತ್ತಲಲ್ಲಿ ದೂರದಲ್ಲಿ ಅಲ್ಲೊಂದು ಇಲ್ಲೊಂದು ರಸ್ತೆ ದೀಪಗಳು ಉರಿಯುತ್ತ ರಸಭಂಗ ಮಾಡುತ್ತಿದ್ದರೆ ನಾವು ಪ್ರೇಯಿಂಗ್ ಮ್ಯಾಂಟಿಸ್ ಥರಾ 'ಕರೆಂಟ್ ಕೈಕೊಡಬಾರದೆ' ಎಂದು ಪ್ರಾರ್ಥಿಸುತ್ತ ಲೇಸರ್ ಶೋ ನೋಡುತ್ತಿರುತ್ತೇವೆ. ಅವು ಆಗಾಗ ಕಿಟಕಿಯ ಮೂಲಕ ಮನೆಯೊಳಕ್ಕೆ ಬಂದು ನಮ್ಮ ಜೇಡರ ಬಲೆಗೂ ಬೀಳುತ್ತವೆ. ಸರಿರಾತ್ರಿಯ ಕಗ್ಗತ್ತಲ ಕೋಣೆಯಲ್ಲಿ ಜೇಡರ ಬಲೆಗೆ ಬಿದ್ದ ಮಿಂಚುಹುಳದ ಒದ್ದಾಟವನ್ನು ನೋಡಲು ಅದೃಷ್ಟ ಬೇಕು. ಅದಕ್ಕಿಂತ ಮುಖ್ಯವಾಗಿ ಮನೆಯಲ್ಲಿ ಜೇಡರ ಬಲೆ ಇರಬೇಕು. ಜೇಡಕ್ಕೆ ಅದೃಷ್ಟ ಇರಬೇಕು. ಜಠರದಲ್ಲಿ ಬೆಳಕು ಮಿನುಗಿಸುತ್ತಲೇ ಜೀವನ್ಮರಣದ ಹೋರಾಟ ನಡೆಸಿ ಕೊನೆಗೂ ಜೇಡರ ಜಠರಕ್ಕೆ ಸೇರುವ ಈ ಹುಳ ತನ್ನ ಬೆಳಕನ್ನು ಜೇಡರ ಜಠರಕ್ಕೂ ವರ್ಗಾಯಿಸೀತೇ ಎಂದು ನಾನು ನೋಡುತ್ತ ಕೂರುತ್ತೇನೆ.

ಮಳೆಗಾಲದಲ್ಲಿ ಉದ್ದುದ್ದ ಕಾಲಿನ ಸೂರ್ಯನ ಕುದುರೆ (ಪ್ರೇಯಿಂಗ್ ಮಾಂಟಿಸ್) ಆಗೊಮ್ಮೆ ಈಗೊಮ್ಮೆ ದಾರಿ ತಪ್ಪಿ ಮನೆಯೊಳಕ್ಕೆ ಬಂದು ಮೂಲೆಯಲ್ಲಿ ಕೂತು ಮುಂಗಾಲುಗಳಿಂದ ಮುಖ ಒರಸಿಕೊಳ್ಳುತ್ತಿರುತ್ತದೆ. ಆಗ ಜೇಡರ ಜಾಲದ ಸುತ್ತಲಿನ ಜೀವಜಾಲ ತುಸು ಸಂಕೀರ್ಣವಾಗುತ್ತದೆ. ಇತ್ತ ಜೇಡ ತನ್ನ ಜಾಲಕ್ಕೆ ಬಿದ್ದ

ಸೊಳ್ಳೆಯನ್ನು ದಾರದಲ್ಲಿ ಚೆನ್ನಾಗಿ ಸುತ್ತಿ ಜೊಲ್ಲು ಸುರಿಸುತ್ತ 'ಭರ್ವಾ ಕರೇಲಾ' ಮಾಡುತ್ತಿದ್ದರೆ (ಮರಾಠಿಗರ ಭರ್‌ವಾ ಕರೇಲಾ ಅಂದರೆ - ಹಾಗಲಕಾಯಿಯ ತಿರುಳು ತೆಗೆದು ಅದರ ಸ್ಥಾನದಲ್ಲಿ ಮಸಾಲೆ ತುಂಬಿ ಇಡೀ ಕಾಯಿಯನ್ನು ದಾರದಲ್ಲಿ ಸುತ್ತಿ ಕರಿದು ತಯಾರಿಸುವ ರುಚಿಕರ ಪದಾರ್ಥ) ತುಸು ದೂರದಲ್ಲಿ ಸೂರ್ಯನ ಕುದುರೆ ಅದನ್ನೇ ನೋಡುತ್ತ ಜೊಲ್ಲು ಸುರಿಸುತ್ತ ಕೂತಿರುತ್ತದೆ. ಅದು ಜೊಲ್ಲು ಸುರಿಸುವುದು ನಮಗೆ ಕಾಣುವುದಿಲ್ಲ ನಿಜ. ಆದರೆ, ಅದು ಮತ್ತೆಮತ್ತೆ ಮುಖ ಒರಸಿಕೊಳ್ಳಲು ಬೇರೇನೂ ಕಾರಣ ನನಗೆ ತೋಚುತ್ತಿಲ್ಲ.

ಹಠಾತ್ತಾಗಿ ಸನ್ನಿವೇಶ ಸೀರಿಯಸ್ಸಾಗುತ್ತದೆ. ಸೊಳ್ಳೆ, ಜೇಡ ಮತ್ತು ಪ್ರೇಯಿಂಗ್ ಮಾಂಟಿಸ್ ಈ ಮೂರನ್ನೂ ನೋಡುತ್ತಾ ಇನ್ನೂ ದೂರದ ಸೂರಿನಲ್ಲಿ ಗಪ್‌ಚಿಪ್ ಕೂತು ಶುಭಶಕುನಕ್ಕಾಗಿ ಕಾಯುತ್ತಿದ್ದ ಹಲ್ಲಿಲ್ಲದ ಹಲ್ಲಿ ಮೇಲೆ ಬಿದ್ದು ಒಂದೇ ಏಟಿಗೆ ಎಲ್ಲವನ್ನೂ ಸ್ವಾಹಾ ಮಾಡಿಬಿಡುತ್ತದೆ.


ನನ್ನ ಪಾಲಿಗೆ ಅದು ಅಪಶಕುನ. ಹಲ್ಲಿ ಅವುಗಳ ಮೇಲೆ ಬಿದ್ದುದಕ್ಕೆ ಅಲ್ಲ; ಹಲ್ಲಿ ಇದ್ದುದು ಗೊತ್ತಾದರೆ ಮರುದಿನವೇ ನಮ್ಮ ಮನೆಯಾಕೆಯ ಕೈಗೆ ಪೊರಕೆ ಬಂದಿರುತ್ತದೆ. ಜೇಡರ ಬಲೆ ಹೋಗಿ ಜೇಡರ ಬಲಿಯಾಗುತ್ತದೆ. ಹಲ್ಲಿಯ ಬಗ್ಗೆ ನನ್ನಾಕೆಗೆ ಭಯವೇನಿಲ್ಲ. ಜಿರಳೆಯನ್ನೇ ಸಲೀಸಾಗಿ ಮುಷ್ಟಿಯಲ್ಲಿ ಹಿಡಿಯಬಲ್ಲ ಧೀರೆಗೆ ಹಲ್ಲಿ ಯಾವ ಲೆಕ್ಕ? ಆದರೆ ಜೇಡರ ಸಂಖ್ಯೆಯಿಂದಾಗಿ ಹಲ್ಲಿಗಳ ಸಂಖ್ಯೆ ಹೆಚ್ಚಿದ್ದರಿಂದಾಗಿ ಜಾಲಂಧ್ರದ ಮೂಲಕ ಬಾಗುತ್ತ ಬಳುಕುತ್ತ ನಾಗರಾಜನ ಫ್ಯಾಮಿಲಿ ಬಂದು ಠಿಕಾಣಿ ಹೂಡುತ್ತದೆ ಎಂಬುದು ಅವಳ ವಾದ.

ನಾಗರಹಾವಿನ ಆಗಮನವಾಯಿತೇ ಎಂದು ಕೇಳಬೇಡಿ. 'ಸಂಭವಾಮಿ ಯುಗೇ ಯುಗೇ' ಎಂಬಂತೆ ನಮ್ಮ ಮನೆಯಲ್ಲಿ ಸೊಳ್ಳೆಗಳ ಸಂಖ್ಯೆ ಹೆಚ್ಚಿದಂತೆಲ್ಲ ಜೇಡರ ಸಂಖ್ಯೆ ಹೆಚ್ಚಾಗಿ ಅವುಗಳ ಬೆನ್ನ ಹಿಂದೆ ಹಲ್ಲಿಗಳ ಸಂಖ್ಯೆ ಹೆಚ್ಚುತ್ತ ಹೋಗಿ ಅವುಗಳ ನಿಯಂತ್ರಣಕ್ಕೆಂದು ನಾಗಗಳು ಆಗಾಗ ಅವತರಿಸುತ್ತವೆ.

ಅದೇನೂ ಆತಂಕಕ್ಕೆ ಕಾರಣವಲ್ಲ. ನಮ್ಮ ತೋಟದ ಹಾವುಗಳನ್ನು ನಿಯಂತ್ರಿಸಲು ಗೂಬೆಗಳು ಕಾಲಕಾಲಕ್ಕೆ ಬರುತ್ತಿರುತ್ತವೆ. ಹೆಬ್ಬೇವಿನ ಮರದ ಪೊಟರೆಯಲ್ಲಿ ಹಗಲೆಲ್ಲ ನಿದ್ದೆಹೊಡೆಯುತ್ತ ರಾತ್ರಿಪಾಳಿಗೆ ರೆಡಿಯಾಗಿರುತ್ತವೆ. ತೀರಾ ಸೋಮಾರಿಗಳಾಗಿ ರಾತ್ರಿಯೂ ಪೊಟರೆಯಲ್ಲೇ ಕೂತಿದ್ದರೆ ಅವಕ್ಕೆ ಉಳಿಗಾಲವಿಲ್ಲ. ಕಾಡುಬೆಕ್ಕುಗಳು ಮೀಸೆ ತಿರುವುತ್ತ ಮೆಲ್ಲಗೆ ಮರವೇರಿ ಪೊಟರೆಗೆ ಮೂತಿ ಇಡುತ್ತವೆ. ಬೆಕ್ಕು ಹೀಗೆ ಅಡ್ಡ ಹಾಯ್ದರೆ ಗೂಬೆಗೆ ಅಪಶಕುನ.

ಈ ಸುಂದರ ಜೀವಜಾಲ ಹೆಚ್ಚುದಿನ ಉಳಿಯಲಿಕ್ಕಿಲ್ಲ. ನಮ್ಮೂರಿಗೂ ಮೊಬೈಲ್ ಟವರ್‌ಗಳು, ಇಂಟರ್‌ನೆಟ್ ವೈಫೈಗಳು ಬರಲಿವೆಯೆಂದು ಅಭಿವೃದ್ಧಿಯ

ಹರಿಕಾರರು ಸೂಚಿಸುತ್ತಿದ್ದಾರೆ. ಅವೆಲ್ಲ ಬಂದಿದ್ದೇ ಆದರೆ ನಾನು ಲೀಲಾಜಾಲವಾಗಿ ಅಂತರಜಾಲದಲ್ಲಿ ವಿಹರಿಸುತ್ತ ಕಾಲಿಗೆ ಪೊರಕೆ ತಾಗಿದರೂ ಖಬರೇ ಇಲ್ಲದೆ ಈ ಜಾವಜಾಲಗಳನ್ನು ಮರೆತೇ ಬಿಡುವ ಸಂಭವವಿದೆ.



## ನಾಗೇಶ ಹೆಗಡೆ

ಶ್ರೀ ನಾಗೇಶ ಹೆಗಡೆಯವರು ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನಲ್ಲಿ 1948ರಲ್ಲಿ ಜನಿಸಿದರು. ಭೂವಿಜ್ಞಾನದಲ್ಲಿ ಎಂ.ಫಿಲ್. ಪದವಿ ಪಡೆದಿರುವ ಇವರು ನೈನಿತಾಲ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಖ್ಯಾತ ಪರಿಸರವಾದಿಗಳಾದ ಇವರು ಪರಿಸರದ ಬಗ್ಗೆ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇವರ 'ಇರುವುದೊಂದೇ ಭೂಮಿ' ಎಂಬ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಅಲ್ಲದೆ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಪರಿಸರ ಪ್ರಶಸ್ತಿ ಇವರಿಗೆ ಲಭಿಸಿವೆ. ನೆಡದಿರಿ ನೀಲಗಿರಿ, ಅಣುಶಕ್ತಿಯ ಹತ್ತು ಕರಾಳ ಮುಖಗಳು, ಕರ್ನಾಟಕ ಪರಿಸರ ಪರಿಸ್ಥಿತಿ, ನದೀ ನೀರಿಗೆ ವಿಷಪ್ರಾಶನ, ಮುಷ್ಟಿಯಲ್ಲಿ ಮಿಲೆನಿಯಂ, ನಮ್ಮೊಳಗಿನ ಬ್ರಹ್ಮಾಂಡ, ಗಗನ ಸಖಿಯರ ಸೆರಗ ಹಿಡಿದು, ಶತ್ರುವಿಲ್ಲದ ಸಮರ, ಕೆರೆಯಲ್ಲಿ ಚಿನ್ನ ಕೆರೆಯೇ ಚಿನ್ನ, ಅಂತರಿಕ್ಷದಲ್ಲಿ ಮಹಾಸಾಗರ, ಗುರುಗ್ರಹದಲ್ಲಿ ದೀಪಾವಳಿ, ಮಂಗಳನಲ್ಲಿ ಜೀವಲೋಕ, ಗುಳಿಗೆ ಗುಮ್ಮ ಇತ್ಯಾದಿಗಳು ಇವರ ಕೃತಿಗಳಾಗಿವೆ. ಅಂತರಜಾಲ ಮತ್ತು ಜೀವಜಾಲ ನಗೆಲೇಖನವನ್ನು ಇವರ 'ಹಳ್ಳಿ ಮುಕ್ಕ ಎಲ್ಲೆಲ್ ಹೊಕ್ಕ' ಕೃತಿಯಿಂದ ಆರಿಸಲಾಗಿದೆ.



### ಉತ್ತರಿಸಿರಿ.

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಮೊಬೈಲ್ ಟವರ್‌ಗಳ ಹಾವಳಿಯಿಂದ ಉಂಟಾಗುವ ಸಮಸ್ಯೆಗಳೇನು?
2. ಟವರ್ ಇಲ್ಲದೆ ಸಿಗ್ನಲ್ ದುರ್ಬಲವಾದರೆ ಆಗುವ ಅನುಕೂಲಗಳನ್ನು ಲೇಖಕರು ಹೇಗೆ ತಿಳಿಸಿದ್ದಾರೆ?

3. ಲೇಖಕರ ಅಭಿಪ್ರಾಯದಲ್ಲಿ ಸೂರ್ಯನ ಕುದುರೆ ಮತ್ತೆ ಮತ್ತೆ ಮುಖ ಒರಸಿಕೊಳ್ಳಲು ಕಾರಣವೇನು?

4. ಸುಂದರ ಜೀವಜಾಲ ಹೆಚ್ಚುದಿನ ಉಳಿಯಲಿಕ್ಕಿಲ್ಲವೆಂದು ಲೇಖಕರು ಅಭಿಪ್ರಾಯಪಡಲು ಕಾರಣವೇನು?

## ಗದ್ಯಭಾಗ ರಚಿಸಿರಿ.

ಕೆಳಗೆ ಕೊಡಲಾದ ಗದ್ಯಭಾಗದಲ್ಲಿ ಅಡಿಗೆರೆ ಎಳೆದ ಪದಗಳಿಗೆ ಸಂವಾದಿಯಾದ ಕನ್ನಡ ಪದಗಳನ್ನು ಬಳಸಿಕೊಂಡು ಬೇರೊಂದು ಗದ್ಯಭಾಗ ರಚಿಸಿರಿ.


ರಾಜೇಶನು ಅವನ ಶಾಲಾ ತಂಡದ ಲೀಡರ್ ಅರುಣನಿಗೆ ಫೋನ್ ಕರೆ ಮಾಡಿ ಕಾಲ್ಚೆಂಡಾಟ ಮೈದಾನದ ಅಳತೆಯ ಬಗ್ಗೆ ವಿಚಾರಿಸಿದನು. ಆಗ ಅರುಣನು "ನಾನೀಗ ಫ್ಯಾಮಿಲಿಯ ಜೊತೆಗೆ ಪ್ರವಾಸ ಹೋಗುತ್ತಿದ್ದೇನೆ. ಇಂಟರ್‌ನೆಟ್‌ನಲ್ಲಿ ಮಾಹಿತಿ ಇದೆಯಲ್ಲ... ಅಲ್ಲಿಂದ ಪಡೆದುಕೊ. ಮುಂದಿನ ವಾರ ನಡೆಯಲಿರುವ ಪಂದ್ಯದ ಬಗ್ಗೆ ಸೀರಿಯಸ್ಸಾಗಿ ಆಲೋಚಿಸು" ಎಂದನು.

## ಚರ್ಚಾ ಟಿಪ್ಪಣಿ ಬರೆಯಿರಿ.

'ವೈಜ್ಞಾನಿಕ ಪ್ರಗತಿಯ ಒಳಿತು ಕೆಡುಕುಗಳು' ಎಂಬ ವಿಷಯದ ಕುರಿತು ತರಗತಿಯಲ್ಲಿ ನಡೆಯಲಿರುವ ಚರ್ಚಾಗೋಷ್ಠಿಯಲ್ಲಿ ಮಂಡಿಸಲು ಅಗತ್ಯವಾದ ಟಿಪ್ಪಣಿ ಬರೆಯಿರಿ.

## ಹಾಸ್ಯ ಲೇಖನ ಬರೆಯಿರಿ

ನಿಮಗೆ ಇಷ್ಟವಿರುವ ಯಾವುದಾದರೂ ವಸ್ತು ಅಥವಾ ವಿಷಯದ ಕುರಿತು ಒಂದು ಹಾಸ್ಯ ಲೇಖನ ಬರೆಯಿರಿ. ತರಗತಿಯ ಎಲ್ಲಾ ಲೇಖನಗಳನ್ನು ಒಟ್ಟು ಸೇರಿಸಿ ಹಾಸ್ಯಲೇಖನ ವಿಶೇಷಾಂಕ ತಯಾರಿಸಿರಿ.




# 2

# ಪ್ಲಾಸ್ಟಿಕೋಪಾಖ್ಯಾನ

(ವಿಕಾಸಪುರವೆನ್ನುವ ರಾಜ್ಯದ ದೊರೆಯಾದ ವಿಜ್ಞಾನೇಶ್ವರ ಮತ್ತು ಆತನ ಮಡದಿಯಾದ ಸುಮತಿ ತಮ್ಮ ರಾಜ್ಯದ ಕುರಿತು ಮಾತನಾಡುತ್ತಿದ್ದಾರೆ)

ವಿಜ್ಞಾನೇಶ್ವರ : ದೇವೀ, ಊರ ಜನ ಏನಂತಿದ್ದಾರೆ ಗೊತ್ತಾ?

ಸುಮತಿ : ಗೊತ್ತು. ವಿಕಾಸಪುರದಲ್ಲಿ ಹುಟ್ಟಿದ ನಾವೇ ಧನ್ಯರು. ಊರ ದೊರೆ ವಿಜ್ಞಾನೇಶ್ವರರು ಅಸಾಮಾನ್ಯರು ಅಂತಿದ್ದಾರೆ.

ವಿಜ್ಞಾನೇಶ್ವರ : ಆಹಾ! ಅವರ ಮಾತು ನಿಜವಾಗಬೇಕಾದರೆ ಈ ಊರು ನಿಜವಾದ ಅರ್ಥದಲ್ಲಿ ವಿಕಾಸಪುರವೆನಿಸಬೇಕು. ದೇವರು ಈ ಊರನ್ನು ಸೃಷ್ಟಿಸಿ ಅದರ ವಿಕಾಸಕ್ಕಾಗಿ ನನ್ನನ್ನು ಸೃಷ್ಟಿಸಿದಂತಿದೆ. ಈ ಊರ ಉದ್ಧಾರಕ್ಕಾಗಿ ಇಲ್ಲಿಯ ಜನರ ಉಪಯೋಗಕ್ಕಾಗಿ ಬೇಕಾದ್ದನ್ನು ಸೃಷ್ಟಿಸುವ ಹೊಣೆ ನನ್ನ ಹೆಗಲ ಮೇಲಿದೆ.

ಸುಮತಿ : ಹೌದು ಆದರೆ ನೀವೇನು ಮಾಡಿದಿರಿ?

ವಿಜ್ಞಾನೇಶ್ವರ : ಏನು ಮಾಡಿಲ್ಲ ಹೇಳು? ಬೆಂಕಿಯ ಅನ್ವೇಷಣೆ ಮೊದಲ್ಗೊಂಡು ಅದೆಷ್ಟು ಸಂಶೋಧನೆ ಮಾಡಿದೆ! ಅದೆಷ್ಟು ವೈಜ್ಞಾನಿಕ ಸಂತತಿಯನ್ನು

ಸೃಷ್ಟಿಸಿದೆ ಇತ್ತೀಚಿನ ಸೃಷ್ಟಿಯಂತೂ ಬಹಳ ಅದ್ಭುತವಾದುದು; ಬಹೂಪಯೋಗಿಯಾದುದು.

ಸುಮತಿ : ಯಾವುದು ಅದು? ಯಾರ ಬಗ್ಗೆ ಹೇಳ್ತಿದ್ದೀರಾ?

ವಿಜ್ಞಾನೇಶ್ವರ : ಅದೇನೆ ಹಾಗೆ ಕೇಳ್ತಿದೀಯಾ? ನಾನೀಗ ಹೇಳ್ತಿರೋದು ನಮ್ಮ ಕುಮಾರ ಪ್ಲಾಸ್ಟಿಕನ ಬಗ್ಗೆ. ಪರೋಪಕಾರಿ ಆದರೂ ಸ್ವಲ್ಪ ಅಸುರೀ ಪ್ರವೃತ್ತಿಯವನಾದ್ದರಿಂದ ಜನ ಅವನನ್ನು ಪ್ಲಾಸ್ಟಿಕಾಸುರ ಎಂದೇ ಕರೆಯುತ್ತಿದ್ದಾರೆ.

ಸುಮತಿ : ಹುಟ್ಟುವಾಗ ಎಲ್ಲರೂ ಒಳ್ಳೆಯವರಾಗಿರುತ್ತಾರೆ. ಆದರೆ ಬೆಳೆಯುತ್ತಾ ಕೆಲವೊಮ್ಮೆ ಕೆಟ್ಟವರಾಗ್ತಾರೆ.

ವಿಜ್ಞಾನೇಶ್ವರ : ಇಲ್ಲ, ಹಾಗಾಗದು. ಅವನನ್ನು ಸೃಷ್ಟಿಸಿದ್ದೇ ಈ ಊರಿಗಾಗಿ. ಊರ ಜನರ ಹಿತಕ್ಕಾಗಿ. ಹಾಗಾಗಿ ಅವನನ್ನು ಈಗಲೇ ಕರೆಸಿ ಎಚ್ಚರಿಕೆ ಕೊಡ್ತೀನಿ. ಯಾರಲ್ಲಿ? ಕುಮಾರ ಪ್ಲಾಸ್ಟಿಕನನ್ನು ಇತ್ತ ಬರಹೇಳಿ.

(ಪ್ಲಾಸ್ಟಿಕಾಸುರ ಬರುವನು)

ಪ್ಲಾಸ್ಟಿಕಾಸುರ : (ನಮಸ್ಕರಿಸಿ) ಪೂಜ್ಯ ತಂದೆಯವರಿಗೆ ಪ್ರಣಾಮಗಳು. ನನ್ನನ್ನೇಕೆ ಬರಹೇಳಿದಿರಿ? ನನ್ನಿಂದೇನಾಗಬೇಕು?

ವಿಜ್ಞಾನೇಶ್ವರ : ನಿನ್ನಿಂದ ಆಗಬೇಕಾದ್ದು ಬಹಳಷ್ಟಿದೆ. ನಿನ್ನನ್ನು ಸೃಷ್ಟಿಸಿದ್ದೇ ಊರಿಗೆ ಉಪಕಾರವಾಗಲೆಂದು. ಜನ ನಿನ್ನನ್ನು ಬಹಳ ಪ್ರಯೋಜನಕಾರಿ ಎಂದು ನಂಬಿದ್ದಾರೆ. ಹೋಗು ಅವರ ನಂಬಿಕೆ ಹುಸಿಯಾಗದಂತೆ ಬಹೂಪಕಾರಿಯಾಗು. ಎಲ್ಲರಿಗೂ ಬೇಕಾದವನಾಗಿ ಬಹುಕಾಲ ಬಾಳು.

ಪ್ಲಾಸ್ಟಿಕಾಸುರ : ಆಗಲಿ ಅಪ್ಪಾಜಿ. ಹಾಗೆಯೇ ಮಾಡುವೆನು. (ನಿರ್ಗಮಿಸುವನು)

ವಿಜ್ಞಾನೇಶ್ವರ : ನೋಡಿದ್ಯಾ ದೇವಿ. ಕುಮಾರನ ಒಳ್ಳೆಯತನವನ್ನು? ಮುಂದೇನಾಗುತ್ತದೋ ಗಮನಿಸುತ್ತಿರೋಣ ಬಾ (ನಿರ್ಗಮಿಸುವರು)

(ಪ್ಲಾಸ್ಟಿಕಾಸುರ ತಂದೆಯಲ್ಲಿಗೆ ಬರುವನು)

ಪ್ಲಾಸ್ಟಿಕಾಸುರ : ಅಪ್ಪಾಜಿ ತಮ್ಮಲ್ಲೊಂದು ಅರಿಕೆಯಿದೆ.

ವಿಜ್ಞಾನೇಶ್ವರ : ಅರಿಕೆ? ಏನದು?

ಪ್ಲಾಸ್ಟಿಕಾಸುರ : ಬಹುಪಯೋಗಿಯಾಗಿರುವಂತೆ ನೀವು ನನಗೆ ಅಪ್ಪಣೆ ಕೊಡಿಸಿದಿರಿ. ಅಲ್ಲವೇ?

ವಿಜ್ಞಾನೇಶ್ವರ : ಹೌದು. ಏನೀಗ?

ಪ್ಲಾಸ್ಟಿಕಾಸುರ : ಕೈಗೆ ಬಳೆಯಾಗಬಲ್ಲುದು ಬೆರಳಿಗೆ ಉಂಗುರವಾಗದು. ಕಾಲಿಗೆ ಚಪ್ಪಲಿಯಾಗಬಲ್ಲುದು ತಲೆಗೆ ಮುಂಡಾಸು ಎನಿಸದು. ಕೈಗೆ ಬಳೆಯಾಗಿ, ಬೆರಳಿಗೆ ಉಂಗುರವಾಗಿ, ಕಾಲಿಗೆ ಚಪ್ಪಲಿಯಾಗಿ, ತಲೆಗೆ ಮುಂಡಾಸಾಗಿ..... ಹೀಗೆ ಬಹುರೂಪಿಯಾಗಿದ್ದರೆ ಮಾತ್ರವೇ ಬಹೂಪಯೋಗಿಯಾಗಿರಲು ಸಾಧ್ಯ.

ವಿಜ್ಞಾನೇಶ್ವರ : ಸರಿ ಅದಕ್ಕೀಗ ಏನು ಮಾಡಬೇಕು ಅಂತಿದ್ದೀಯಾ?

ಪ್ಲಾಸ್ಟಿಕಾಸುರ : ಹಿಂದೆ ಶಿವನು ಅದ್ಯಾವನಿಗೋ ಉರಿಹಸ್ತದ ವರ ಕರುಣಿಸಿದಂತೆ ನನಗೂ ನೀವು ಬಹುರೂಪದ ವರ ಕರುಣಿಸಲೆಂದು ನನ್ನ ಅರಿಕೆ.

ವಿಜ್ಞಾನೇಶ್ವರ : ಅಯ್ಯೋ ವರ ಕರುಣಿಸಲು ನಾನು ದೇವರಲ್ಲವಲ್ಲ.

ಪ್ಲಾಸ್ಟಿಕಾಸುರ : ಬೇಕಾಗಿಲ್ಲ. ಅನುವು ಮಾಡಿಕೊಟ್ಟರೆ ಅದೇ ಮಹಾ ಅನುಗ್ರಹವೆಂದು ತಿಳಿಯುತ್ತೇನೆ.

ವಿಜ್ಞಾನೇಶ್ವರ : ಹೌದಾ? ಅಂದ ಮೇಲೆ ಹಿಂದುಮುಂದು ನೋಡಲೇಕೆ? ಬಹರೂಪಿಯಾಗಲು ಅನುವು ಮಾಡಿಕೊಟ್ಟದ್ದೇನೆ. ಬಗೆಬಗೆಯ ರೂಪದಲ್ಲಿ ಬಗೆಬಗೆಯಾಗಿ ಉಪಕಾರಿಯಾಗಿ ಬಹುಕಾಲ ಬಾಳುವೆಯಂತೆ. ಬಾಟಲಿಯಾಗಲಿ, ಚೀಲವಾಗಲಿ, ಬಕೆಟಾಗಲಿ, ಪಾತ್ರೆ, ಪ್ಲೇಟಾಗಲಿ ಯಾವ ರೂಪದಲ್ಲಾದರೂ ಕಾಣಿಸಿಕೊ. ಜನರಿಗೆ ಒಂದಲ್ಲೊಂದು ರೀತಿಯಲ್ಲಿ ಉಪಯೋಗಿಯಾಗಿದ್ದುಕೊ, ಆದರೆ ಒಂದು ವಿಚಾರ....

ಪ್ಲಾಸ್ಟಿಕಾಸುರ : ಏನಪ್ಪಾಜಿ?

ವಿಜ್ಞಾನೇಶ್ವರ : ಯಾವ ರೂಪಗಳೇ ಇದ್ದರೂ ಅವು ನಿನ್ನ ಒಡನಾಡಿಗಳು. ನೀನೇ ಅವಕೆ ಮುಂದಾಳು. ಇದೋ ಮುಂದಾಳುತ್ವದ ಸಂಕೇತವಾಗಿ ನಿನ್ನ ತಲೆಯ ಮೇಲೆ ಮುಂಡಾಸು ಇರಿಸಿ ಗೌರವಿಸುತ್ತೇನೆ. ನಿನಗೆ ಶುಭವಾಗಲಿ.

(ಪ್ಲಾಸ್ಟಿಕಾಸುರನಿಗೆ ಮುಂಡಾಸು ತೊಡಿಸಿ ನಿರ್ಗಮಿಸುವನು)

ಪ್ಲಾಸ್ಟಿಕಾಸುರ : ಅಹ್ಹಹ್ಹಾ ಅಪ್ಪಾಜಿಯವರಿಂದ ಅನುಮತಿ ಪಡೆದುಕೊಂಡೆ. ಈಗಿಂದೀಗಲೇ ಬಹುರೂಪಿಯಾಗಿ ಕಾಣಿಸಿಕೊಳ್ಳುತ್ತೇನೆ.

ಬಾಟಲಾಸುರ, ಚೀಲಾಸುರ ಮುಂತಾದ ಒಡನಾಡಿಗಳೊಂದಿಗೆ ನಾಡಿನಾದ್ಯಂತ ಕಾಣಿಸಿಕೊಳ್ಳುತ್ತೇನೆ.

(ನಿರ್ಗಮಿಸುವನು)

(ಪ್ಲಾಸ್ಟಿಕಾಸುರನ ಹಾವಳಿಯನ್ನು ತಡೆಯಲಾರದ ವಿಕಾಸಪುರದ ಪ್ರಜೆಗಳು ಪ್ಲಾಸ್ಟಿಕಾಸುರನನ್ನು ನಿಗ್ರಹಿಸುವ ಕುರಿತು ಚರ್ಚೆ ನಡೆಸುತ್ತಿದ್ದಾರೆ)

ಒಬ್ಬ : ಅಯ್ಯೋ! ಎಂಥ ಕಾಲ ಬಂದು ಬಿಟ್ಟಿತು. ಎಲ್ಲಿ ನೋಡಿದ್ರೂ ಪ್ಲಾಸ್ಟಿಕ್ ಪ್ಲಾಸ್ಟಿಕ್ ಪ್ಲಾಸ್ಟಿಕ್

ಇನ್ನೊಬ್ಬ : ಅದ್ಯಾವನೋ ಸೃಷ್ಟಿಸಿದನೋ ಈ ಪ್ಲಾಸ್ಟಿಕಾಸುರನನ್ನು! ಈ ದರಿದ್ರ ಪ್ಲಾಸ್ಟಿಕ್‌ನಿಂದಾಗಿ ನಮ್ಮ ಪರಿಸರವೆಲ್ಲಾ ಹಾಳಾಗುತ್ತಿದೆ.

ಒಬ್ಬ : ಎಲ್ಲಕ್ಕೂ ಪ್ಲಾಸ್ಟಿಕ್; ಹಾಲಿಗೂ ಪ್ಲಾಸ್ಟಿಕ್! ನೀರಿಗೂ ಪ್ಲಾಸಿಕ್.

ಇನ್ನೊಬ್ಬ : ಬೇಳೆಗೂ ಪ್ಲಾಸ್ಟಿಕ್! ಬೆಲ್ಲಕ್ಕೂ ಪ್ಲಾಸ್ಟಿಕ್.

ಒಬ್ಬ : ನಮ್ಮ ಕೆಲ್ಸ ಆದ್ಮೇಲೆ ಅವುಗಳನ್ನು ಎಲ್ಲೆಂದರಲ್ಲಿ ಬಿಸಾಡುತ್ತೇವೆ.

ಇನ್ನೊಬ್ಬ : ಪರಿಸರದ ಅಂದಗೆಡಿಸುತ್ತಿರುವ ಇವುಗಳಿಗೊಂದು ಗತಿ ಕಾಣಿಸೋಣ. ಎಲ್ಲವನ್ನೂ ಹೆಕ್ಕಿ ಹೊಂಡತೋಡಿ ಹೂತುಬಿಡೋಣ. (ಬಿದ್ದಿರುವ ಪ್ಲಾಸ್ಟಿಕ್ ವಸ್ತುಗಳನ್ನು ಹೆಕ್ಕುತ್ತಾ ಹೋಗುವರು)

(ಕೆಲವು ದಿನಗಳ ಬಳಿಕ............)

ಒಬ್ಬ : ಅಯ್ಯೋ ಒಂದು ಮಾಡಲು ಹೋದರೆ ಇನ್ನೊಂದಾಗಿ ಹೋಯ್ತಲ್ಲಾ

ಇನ್ನೊಬ್ಬ : ಹೌದು ಪರಿಸರದ ಅಂದಗೆಡುತ್ತೆ ಅಂತ ಪ್ಲಾಸ್ಟಿಕ್ ವಸ್ತುಗಳನ್ನೆಲ್ಲಾ ಹೆಕ್ಕಿ ಹೊಂಡ ತೋಡಿ ಹೂತುಬಿಟ್ಟೆವು. ಆದರೆ ಅವು ಎಷ್ಟು ಕಾಲವಾದರೂ ಮಣ್ಣಲ್ಲಿ ಕರಗುವುದಿಲ್ಲ. ಬದಲಾಗಿ ಮಣ್ಣಿನೊಳಗಿದ್ದು ನೀರು ಇಂಗುವುದಕ್ಕೆ ಅಡ್ಡಿಯಾಗುತ್ತಿವೆ.

ಒಬ್ಬ : ಹೌದು. ಇನ್ನು ಹಾಗೆ ಮಾಡುವುದು ಬೇಡ.

ಇನ್ನೊಬ್ಬ : ಮತ್ತಿನ್ನೇನು ಮಾಡೋಣ?

ಒಬ್ಬ : ಎಲ್ಲ ಒಂದೆಡೆ ಒಟ್ಟು ಮಾಡಿ ಸುಟ್ಟುಬಿಡೋಣ.

ಇನ್ನೊಬ್ಬ : ಸರಿ, ಹಾಗೆಯೇ ಸುಟ್ಟು ನಾಶಮಾಡೋಣ. ಬಾ ಹೆಕ್ಕೋಣ.

(ನಿರ್ಗಮಿಸುವರು)

(ಇಬ್ಬರು ಕೆಮ್ಮುತ್ತಾ ಬರುವರು)

ಒಬ್ಬ : (ಕೆಮ್ಮುತ್ತಾ) ಯಾಕೆ? ಏನಾಯಿತು? ಯಾಕೆ ಕೆಮ್ಮುತ್ತಿದ್ದೀಯಾ?

ಇನ್ನೊಬ್ಬ : ನೀನೂ ಕೆಮ್ತಾ ಇದ್ದೀಯಾ? ನಿನಗೇನಾಯ್ತು?

ಒಬ್ಬ : ನಾನು ನೀವು ಅಂತ ಅಲ್ಲ. ಮೊನ್ನೆ ಪ್ಲಾಸ್ಟಿಕ್ ಸುಟ್ಟೆವಲ್ಲ; ಆ ಮೇಲೆ ಎಲ್ರೂ ಕೆಮ್ಮುತ್ತಿದ್ದಾರೆ.

ಇನ್ನೊಬ್ಬ : ಹೌದಂತೆ! ಪ್ಲಾಸ್ಟಿಕ್ ಸುಡುವುದು ಹಾನಿಕಾರಕವಂತೆ ಅದರ ಕಮಟು ವಾಸನೆ ಹಾಗೂ ದಟ್ಟ ಹೊಗೆ ಆರೋಗ್ಯಕ್ಕೆ ಹಾನಿಕಾರಕವಂತೆ. ಪ್ಲಾಸ್ಟಿಕ್ ಸುಡುವಾಗ ಬಿಡುಗಡೆಯಾಗುವ ಡಯಾಕ್ಸಿನ್, ಬೆಂಜಿನ್ ಮೊದಲಾದ ವಿಷಾನಿಲಗಳಂತೂ ಕ್ಯಾನ್ಸರ್‌ಕಾರಕವಂತೆ.

ಒಬ್ಬ : ಹೌದು ನಮಗೊಂದು ವರವಾಗಬೇಕಿದ್ದ ಪ್ಲಾಸ್ಟಿಕ್ ನಮಗಿಂದು ಶಾಪವಾಗಿ ಪರಿಣಮಿಸುತ್ತಾ ಇದೆ. ಅದರಿಂದಾಗುವ ಹಾನಿಗಳನ್ನು ಪಟ್ಟಿ ಮಾಡ್ಕೊಂಡು ಬಂದಿದ್ದೀನಿ. ಜನರಲ್ಲಿ ಆ ಬಗ್ಗೆ ಜಾಗೃತಿ ಮೂಡ್ಸಿದ್ರೆ ಒಳ್ಳೇದು. ಬಸ್ಟಾಂಡಿನ ಬಳಿ ಹೇಗೂ ಜನ ಜಮಾಯಿಸಿದ್ದಾರೆ. ಒಮ್ಮೆ ಗಟ್ಟಿಯಾಗಿ ಓದಿಬಿಡು. ಆ ಮೇಲೆ ಪ್ಲಾಸ್ಟಿಕಾಸುರನ ಸೃಷ್ಟಿಕರ್ತನ ಬಳಿ ಹೋಗಿ ದೂರು ಸಲ್ಲಿಸೋಣ. (ಕಾಗದ ಕೊಡುವನು)

ಇನ್ನೊಬ್ಬ : ಸರಿ ಹಾಗೆಯೇ ಆಗಲಿ. (ಓದುತ್ತಾ) ಮಹಾಜನರೇ, ಪ್ಲಾಸ್ಟಿ ವಸ್ತುಗಳಿಗೆ ಬಣ್ಣಕೊಡಲು ಬಳಸುವ ರಾಸಾಯನಿಕಗಳು ಅದರಲ್ಲಿ ಹಾಕಿರುವ ಆಹಾರ ಪದಾರ್ಥಗಳಲ್ಲಿ ಸೇರಿಕೊಂಡು ಅದನ್ನು ತಿಂದವರಿಗೆ ಕ್ಯಾನ್ಸರ್ ಹಾಗೂ ಕಿಡ್ನಿ ಸಂಬಂಧಿತ ಕಾಯಿಲೆಗಳನ್ನು ತಂದೊಡ್ಡುತ್ತವೆ. ಉಪ್ಪು, ಉಪ್ಪಿನಕಾಯಿ ಇತ್ಯಾದಿಗಳನ್ನು ಪ್ಲಾಸ್ಟಿಕ್ ಭರಣಿಗಳಲ್ಲಿ ಹಾಕಿಡುವುದರಿಂದಲೂ ಪ್ಲಾಸ್ಟಿಕ್ ಕಪ್, ಪ್ಲೇಟ್‌ಗಳಲ್ಲಿ ಬಿಸಿ ಪಾನೀಯ ಅಥವಾ ಆಹಾರ ಪದಾರ್ಥ ಸೇವಿಸುವುದರಿಂದಲೂ ರಾಸಾಯನಿಕ ಕ್ರಿಯೆಗೆ ಒಳಗಾಗಿ ಆ ಆಹಾರ ಪದಾರ್ಥಗಳು ಆರೋಗ್ಯಕ್ಕೆ ಹಾನಿಕಾರಕವೆನಿಸುತ್ತವೆ. ಮಣ್ಣು ಸೇರಿದ ಪ್ಲಾಸ್ಟಿಕ್ ಕರಗದೆ ಉಳಿದಾಗ ಮರದ ಬೇರಿನ ಬೆಳವಣಿಗೆಗೂ ಮಳೆನೀರಿನ ಇಂಗುವಿಕೆಗೂ ಅಡ್ಡಿಯಾಗುತ್ತದೆ. ಅದನ್ನು ಸುಟ್ಟಾಗ ಬಿಡುಗಡೆಯಾಗುವ ವಿಷಾನಿಲಗಳಿಂದಾಗಿ ವಾಯುಮಾಲಿನ್ಯ ವುಂಟಾಗುತ್ತವೆ. ಹಾಗಾಗಿ ಬನ್ನಿ ಮಹಾಜನರೇ, ಬನ್ನಿ ನಮ್ಮೊಂದಿಗೆ ಸೇರಿಕೊಳ್ಳಿ. ಇದಕ್ಕೇನಾದರೂ ಪರಿಹಾರ ಸೂಚಿಸುವಂತೆ ಪ್ರಭುಗಳಲ್ಲಿ ಕೇಳಿಕೊಳ್ಳೋಣ.

ಒಬ್ಬ : ಹೌದು ಹಾಗೆಯೇ ಮಾಡೋಣ. ಎಲ್ಲರೂ ಹೋಗೋಣ. ಪ್ರಭು ಸನ್ನಿಧಿಯಲ್ಲಿ ಅರಿಕೆ ಮಾಡಿಕೊಳ್ಳೋಣ. (ನಿರ್ಗಮಿಸುವರು)

(ವಿಜ್ಞಾನೇಶ್ವರನ ಬಳಿ ಜನರು ಬರುವರು)

ವಿಜ್ಞಾನೇಶ್ವರ : ಯಾರು? ಪ್ರಜಾಪರಿವಾರದವರು! ಏನ್ಸಮಾಚಾರ?

ಒಬ್ಬ : ಏನು ಹೇಳಲಿ ಪ್ರಭು? ತಾವೇನೋ ನಮ್ಮ ಕಲ್ಯಾಣಕ್ಕಾಗಿ ಪ್ಲಾಸ್ಟಿಕಾಸುರನನ್ನು ಸೃಷ್ಟಿಸಿ ಪ್ಲಾಸ್ಟಿಕ್ ಸಂತತಿ ಬೆಳೆಯಲೆಂದು ಹಾರೈಸಿದಿರಿ. ಆದರೆ ಆ ಅನಿಷ್ಟ ಬೆಳೆದು ನಮಗಾದ ತೊಂದರೆಗಳನ್ನು ಯಾರಲ್ಲಿ ಹೇಳಲಿ?

ವಿಜ್ಞಾನೇಶ್ವರ : ಹೌದು ಪ್ಲಾಸ್ಟಿಕ್ ಹಾವಳಿ ಬಗ್ಗೆ ನಾನೂ ಕೇಳಿದ್ದೀನಿ. ನಿಮ್ಮ ಸಮಸ್ಯೆ ನನಗರ್ಥವಾಗುತ್ತದೆ. ಆದರೇನು ಮಾಡಲಿ? ನಾನು ಸೃಷ್ಟಿಸಿದ ಕುಮಾರನೇ ಆದರೂ ಇಂದು ಆತ ನನ್ನ ಕೈಮೀರಿ ಬೆಳೆದಿದ್ದಾನೆ. ಭಸ್ಮಾಸುರನಿಗೆ ಜನ್ಮಕೊಟ್ಟು; ವರಕೊಟ್ಟು ಸೋತ ಶಿವನು ಕೊನೆಗೆ ತನ್ನ ರಕ್ಷಣೆಗಾಗಿ ವಿಷ್ಣುವಿಗೆ ಮೊರೆ ಹೋದನಂತೆ. ಕಷ್ಟ ಕಾಲದಲ್ಲಿ ಆ ದೇವರೇ ನಮಗೆ ದಾರಿ ತೋರಬೇಕಷ್ಟೆ. ಆತನಲ್ಲೇ ಅರಿಕೆ ಮಾಡುತ್ತೇನೆ. ಪರಿಹಾರ ಸಿಗಲೂಬಹುದು.

(ಕೈ ಜೋಡಿಸಿ ಭಕ್ತಿಯಿದ)

ಓ ಜಗನ್ನಿಯಾಮಕನೇ, ನಿನ್ನ ಸಂಕಲ್ಪದಂತೆ ಈ ವಿಕಾಸಪುರದ ವಿಕಾಸಕ್ಕಾಗಿ ಪ್ಲಾಸ್ಟಿಕಾಸುರನನ್ನು ಸೃಷ್ಟಿಸಿದೆ. ಆದರೆ ಪ್ಲಾಸ್ಟಿಕ್ ಹಾವಳಿಯಿಂದಾಗಿ ಪರಿಸರವಿಂದು ವಿನಾಶದ ಅಂಚಿನಲ್ಲಿದೆ. ಇದಕ್ಕೆ ನೀನೇ ಪರಿಹಾರವನ್ನು ಸೂಚಿಸು ತಂದೆ. (ಮೌನವಾಗಿ ಪ್ರಾರ್ಥಿಸುವನು) (ಅಶರೀರವಾಣಿ ಕೇಳಿಸುವುದು)

ಅಶರೀರವಾಣಿ : ರಾಜಾ ವಿಜ್ಞಾನೇಶ್ವರ, ಇದರಲ್ಲಿ ನಿನ್ನ ತಪ್ಪಿಲ್ಲ. ನನ್ನ ಸಂಕಲ್ಪದಂತೆ ಊರ ಉದ್ಧಾರಕ್ಕಾಗಿ ನಿನ್ನ ಉದರದಿಂದ ಪ್ಲಾಸ್ಟಿಕಾಸುರನು ಉದಿಸಿ ಬಂದ. ಜನರ ಅಗತ್ಯಗಳನ್ನು ಪೂರೈಸಲೋಸುಗ ಪ್ಲಾಸ್ಟಿಕ್ ಸಂತತಿ ಹೆಚ್ಚಿತು. ಮಿತಿಯಲ್ಲಿದ್ದರೆ ಯಾವುದೂ ಹಾನಿಕಾರಕವಲ್ಲ. ಅತಿಯಾದ ಬಳಕೆಯಿಂದ, ದುರ್ಬಳಕೆಯಿಂದ ಈ ಸಮಸ್ಯೆ ತಲೆದೋರಿದೆ. ಈಗ ಮಿತ ಬಳಕೆಯಲ್ಲದೆ ಬೇರೆ ಪರಿಹಾರವಿಲ್ಲವೆಂದು ನಿನ್ನ ಪ್ರಜೆಗಳಿಗೆ ಮನವರಿಕೆ ಮಾಡಿಕೊಡುವುದೊಂದೇ ದಾರಿ. ನೀನು ಕಣ್ತೆರೆ. ನಿನ್ನವರ ಕಣ್ತೆರೆಸಲು ಕಾರ್ಯೋನ್ಮುಖನಾಗು.

| | | |
|---|---|---|
| ವಿಜ್ಞಾನೇಶ್ವರ | : | (ಎಚ್ಚೆತ್ತು) ಹೌದು ಅಶರೀರವಾಣಿಯೋ ಅಂತರ್ವಾಣಿಯೋ ಯಾವುದೋ ಒಂದು ಕೇಳಿಸಿತು. ಇದಕ್ಕೆ ಪರಿಹಾರ ನಿಮ್ಮ ಕೈಲೇ ಇರುವುದೆಂದಿತು |
| ಜನರು | : | ಏನು? ಪರಿಹಾರ ನಮ್ಮ ಕೈಲೇ ಇರುವುದೇ? |
| ವಿಜ್ಞಾನೇಶ್ವರ | : | ಹೌದು ಮಿತಬಳಕೆಯಿಂದಲೇ ಈ ಸಮಸ್ಯೆಗೆ ಪರಿಹಾರ. ಪ್ಲಾಸ್ಟಿಕ್ ಚೀಲಕ್ಕೆ ಬದಲು ಸಾಧ್ಯವಾದಷ್ಟು ಮಟ್ಟಿಗೆ ಕಾಗದದ ಪೊಟ್ಟಣ ಅಥವಾ ಬಟ್ಟೆಚೀಲಗಳನ್ನು ಬಳಸಿರಿ. ಆದಷ್ಟು ಪ್ಲಾಸ್ಟಿಕ್ ವಸ್ತುಗಳ ಖರೀದಿ ಕಡಿಮೆ ಮಾಡಿರಿ. ಬಳಸಿದ ಪ್ಲಾಸ್ಟಿಕನ್ನೇ ಪುನರ್ಬಳಕೆ ಮಾಡಿರಿ. ತ್ಯಾಜ್ಯ ಪ್ಲಾಸ್ಟಿಕನ್ನು ಎಲ್ಲೆಂದರಲ್ಲಿ ಬಿಸಾಡುವ ಬದಲು ಅಲಂಕಾರ ವಸ್ತುಗಳ ತಯಾರಿಕೆಗೆ ಬಳಸಿರಿ. ಪ್ಲಾಸ್ಟಿಕ್ ಹಾವಳಿಗೆ ಪರಿಹಾರವಿಲ್ಲ. ಮಿತಬಳಕೆಯೇ ಸೂಕ್ತ ಪರಿಹಾರ ಎಂಬುದನ್ನು ಕಂಡುಕೊಳ್ಳಿರಿ. |
| ಜನರು | : | (ಒಟ್ಟಾಗಿ) ಹಾಗೆಯೇ ಆಗಲಿ. ಪ್ರಭುಗಳ ಮಾತಿನಂತೆ ನಡೆಯೋಣ. ಪ್ಲಾಸ್ಟಿಕ್ ಮಿತವಾಗಿ ಬಳಸೋಣ, ಪರಿಸರ ಮಾಲಿನ್ಯ ತಡೆಯೋಣ. (ತೆರೆ ಬೀಳುವುದು) |



## ರಾಂ ಎಲ್ಲಂಗಳ

ರಾಂ ಎಲ್ಲಂಗಳ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ರಾಮರಾಯ ಶಾನುಭೋಗ್ ಕಾಸರಗೋಡು ತಾಲೂಕು ಮಧೂರು ಗ್ರಾಮದ ಎಲ್ಲಂಗಳದಲ್ಲಿ 30-5-1958ರಲ್ಲಿ ಜನಿಸಿದರು. ಇವರ ತಂದೆ ಶಂಕರನಾರಾಯಣ ಶಾನುಭೋಗ್ ಮತ್ತು ತಾಯಿ ಪದ್ಮಾವತಿ. ಎಂ.ಎ.ಬಿ.ಎಡ್. ಪದವೀಧರರಾದ ಶ್ರೀ ರಾಂ ಎಲ್ಲಂಗಳ ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ತಾತ್ಕಾಲಿಕ ನೆಲೆಯಲ್ಲಿ ಉಪನ್ಯಾಸಕರಾಗಿ ವೃತ್ತಿಜೀವನವನ್ನು ಆರಂಭಿಸಿ 1988ರಿಂದ ಮಂಗಳೂರಿನ ವಾಮಂಜೂರ್ ಸೈಂಟ್ ರೇಮಂಡ್ಸ್ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ವಕ್ರಸಂಚಾರ, ಹೊಂಬೆಳಕು, ಅಪ್ಪಿಕೋ, ಬೆಳಕು, ಬಹುಮಾನ ಇತ್ಯಾದಿಗಳು ಇವರ ಕೃತಿಗಳಾಗಿವೆ. ಇವರ ಹಲವಾರು ವ್ಯಂಗ್ಯ ಚಿತ್ರಗಳು, ಶಿಶುಗೀತೆಗಳು ಹಾಗೂ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ರತ್ನವರ್ಮ ಹೆಗಡೆ ಪ್ರಶಸ್ತಿ, ಕಾಸರಗೋಡು ಜಿಲ್ಲಾ ಚುಟುಕು ಸಾಹಿತ್ಯ ಪ್ರಶಸ್ತಿ, ಕಲಾ ಪ್ರತಿಭಾ ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಪ್ಲಾಸ್ಟಿಕೋಪಾಖ್ಯಾನ ನಾಟಕವನ್ನು ಇವರ ಬಹುಮಾನ ಎಂಬ ನಾಟಕ ಸಂಕಲನದಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಪ್ಲಾಸ್ಟಿಕ್‌ನ ಸೃಷ್ಟಿಯಿಂದಾದ ಸಮಸ್ಯೆಗಳೇನು?
2. ಪ್ಲಾಸ್ಟಿಕನ್ನು ಸುಡುವುದರಿಂದ ಉಂಟಾಗುವ ಅಪಾಯವೇನು?
3. ಪ್ಲಾಸ್ಟಿಕ್ ಯಾವಯಾವ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ?
4. ಪ್ಲಾಸ್ಟಿಕ್ ಸಮಸ್ಯೆಗೆ ಪರಿಹಾರವೇನು?

## ಗದ್ಯರೂಪದಲ್ಲಿ ಬರೆಯಿರಿ

ಈ ನಾಟಕವನ್ನು ಸಂಕ್ಷಿಪ್ತವಾಗಿ ಗದ್ಯರೂಪದಲ್ಲಿ ಬರೆಯಿರಿ.

## ಅಭಿನಯಿಸಿರಿ

ಈ ನಾಟಕದ ಪಾತ್ರಗಳನ್ನು ಗುಂಪುಗಳಲ್ಲಿ ಹಂಚಿಕೊಂಡು ತರಗತಿಯಲ್ಲಿ ಅಭಿನಯಿಸಿರಿ.

## ಪ್ರಬಂಧ ಬರೆಯಿರಿ

'ಮಾಲಿನ್ಯ ಮತ್ತು ಸಂಸ್ಕರಣೆ' ಈ ವಿಷಯದ ಕುರಿತು ಗಾಂಧಿಜಯಂತಿಯಂದು ನಡೆಯುವ ವಿಚಾರಗೋಷ್ಠಿಯಲ್ಲಿ ಮಂಡಿಸಲು ಅಗತ್ಯವಾದ ಪ್ರಬಂಧ ಬರೆಯಿರಿ.

## ನಾಟಕ ರಚಿಸಿರಿ.

ನಿಮಗಿಷ್ಟವಾದ ವಿಷಯವನ್ನು ಆರಿಸಿಕೊಂಡು ಒಂದು ಚಿಕ್ಕ ನಾಟಕ ರಚಿಸಿರಿ. ತರಗತಿಯ ಎಲ್ಲಾ ನಾಟಕಗಳನ್ನು ಒಟ್ಟು ಸೇರಿಸಿ ನಾಟಕ ಸಂಚಿಕೆ ತಯಾರಿಸಿರಿ.

3

# ಪರಿಸರ ಸಂಹಾರ



ಉಸಿರೊಳಗೆ ಉಸಿರಾಗಿ ಬೆರೆತಿರುವ ಪವನ
ಜೀವಕೋಟಿಗಳ ಜನನದಲೆ ಆಗಮನ
ಅವಕಾಶವಿದ್ದೆಡೆಗೆ ನುಗ್ಗುವೆಯ ಭರದಿ
ನಿಮಿಷವೂ ನಿನಗಿಲ್ಲ ವಿರಾಮ ಈ ಜಗದಿ
    ಮಲಿನತೆಯ ತುಂಬುತ್ತ ನಿನ್ನಲ್ಲಿ, ಬಯಸುವೆವು
    ಪರಿಶುದ್ಧ ಬೀಸುವಿಕೆಯಾಟಮಾಟ
    ಎದ್ದೊಡನೆ ಕರ್ಮದಲಿ ನಿರತರಾಗುತಲಿಹೆವು
    ಪರಿಸರದ ಸಂಹಾರ ದಿನಕೊನೆಯ ತನಕ
ಸಾರಿಗೆಯ ಮಾಧ್ಯಮದಿ ನಡೆಸುತ್ತ ದರಬಾರು
ಇಂಗಾಲ ತೂರುವೆವು ಸುತ್ತಮುತ್ತ
ಯಂತ್ರಾಟ್ಟಹಾಸದಲಿ ದಟ್ಟ ಕಾರ್ಬನ್‌ಯಾನ
ಸೇರುವುದು ನಿನ್ನೊಡಲ, ಪ್ರಗತಿಯಲಿ ಅಭಿಮಾನ!
    ಮೂಗು ರಂಧ್ರವ ಸೇರಿ ಪುಪ್ಪುಸಕೆ ಮುನ್ನಡೆವೆ
    ವಿಷಕಣದ ರಾಶಿಯನು ಹೊತ್ತ ಪ್ರಸ್ಥಾನ
    ಮಾತಿನಲಿ ಬಡಿವಾರ, ಪರಿಸರದ ರಕ್ಷಣೆಯು
    ವೃಕ್ಷಸಮುದಾಯಕ್ಕೆ ಕೊಡಲಿಯೇಟು
ಅಣ್ವಸ್ತ್ರ ವಿಕಿರಣದಿ ಪರಿಸರವು ಮಲಿನ
ನಾಳಿನಾ ಮನುಜಕುಲ ಕುಂಟಹೆಳವ
ಅಣುವಿನಲಿ ಚಳಿಗಾಲ ಓಸೋನ್ ತೆರೆ ಭಗ್ನ
ನಾಡಿನಾ ಜಲರಾಶಿ ಕಣಕಣದಿ ಮಲಿನ
    ಕರ್ತವ್ಯ ನಿರ್ವಹಣದಿ ಮರುತ ನೀನಾದರ್ಶ
    ಹರಡುತಿಹೆ ನಿನ್ನೊಳಗೆ ತೂರಿದುದನೆಲ್ಲ
    ಭಗ್ನಸುಂದರ ಸೃಷ್ಟಿ, ಸಮೂಹ ಜೀವದಹನ
    ಬರದಿರಲಿ ಬರದಿರಲಿ ಊಹಾತೀತ ಮರಣ



ಅಣುಶಕ್ತಿ ಸ್ಫೋಟನದಿ ಬದುಕೆಲ್ಲ ಬರಡು ನೆಲ
ಮೊಳಕಾಲಿನೆತ್ತರಕೆ ನೆಲದಿ ಬೂದಿಯ ರಾಶಿ
ಬ್ರಹ್ಮಾಂಡ ಸ್ಫೋಟನಕೆ ನಮಗಿಲ್ಲ ಅಧಿಕಾರ
ನಿರ್ದೋಷಿ ಜೀವಿಗಳು ಬಾಳಲಿ ನಿರಂತರ

**– ಪ್ರೊ.ಎನ್. ಜಿ. ಪಟವರ್ಧನ್**

## ಪ್ರೊ. ಎನ್. ಜಿ. ಪಟವರ್ಧನ್

ಪ್ರೊ. ನಾರಾಯಣ ಗೋವಿಂದ ಪಟವರ್ಧನ್ ಅವರು ಬೆಳ್ತಂಗಡಿ ತಾಲೂಕಿನ ಮುಂಡಾಜೆ ಎಂಬಲ್ಲಿ ೧೯೪೩ ಜುಲೈ ೧೯ರಂದು ಜನಿಸಿದರು. ಇವರ ತಂದೆ ಗೋವಿಂದ ಪಟವರ್ಧನ್ ತಾಯಿ ಸೀತಾಬಾಯಿ. ಮುಂಡಾಜೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ, ಉಜಿರೆ ಮಂಗಳೂರಿನಲ್ಲಿ ಉನ್ನತ ವ್ಯಾಸಂಗ ನಡೆಸಿ ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ತಮ್ಮ ವೃತ್ತಿಜೀವನವನ್ನು ಆರಂಭಿಸಿ ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ಸುಮಾರು ಮೂರು ದಶಕಗಳ ಕಾಲ ಸೇವೆಸಲ್ಲಿಸಿ ೨೦೦೧ರಲ್ಲಿ ನಿವೃತ್ತರಾದರು.

ಅನುವಾದ, ಕವನ, ಲಲಿತ ಪ್ರಬಂಧ, ಛಂದಸ್ಸು, ಹನಿಗವನ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಸುಮಾರು ೨೦ ಕೃತಿಗಳನ್ನು ರಚಿಸಿದ್ದಾರೆ. 'ಮುದ್ದಣನ ಅದ್ಭುತ ರಾಮಾಯಣ'ವನ್ನು ಹೊಸಗನ್ನಡಕ್ಕೆ ಅನುವಾದಿಸಿದ್ದಾರೆ. ಅಕ್ಷಯ, ಮಾನಸ ಮುಂತಾದವು ಇವರ ಕವನಸಂಕಲನಗಳು. ವಿಚಾರ ವಿಹಾರ ವೈಚಾರಿಕ ಪ್ರಬಂಧ ಸಂಕಲನಕ್ಕೆ 'ವಿಶ್ವೇಶ್ವರಯ್ಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ' ಲಭಿಸಿದೆ. 'ಚುಟುಕು ಭಾರ್ಗವ ಪ್ರಶಸ್ತಿ' ಇವರ ಸಾಧನೆಯ ಕಿರೀಟಕ್ಕೆ ಸೇರಿದ ಮತ್ತೊಂದು ಗರಿ. 'ಪರಿಸರ ಸಂಹಾರ' ಕವನವನ್ನು ಇವರ 'ಮಾನಸ' ಕವನಸಂಕಲನದಿಂದ ಆಯ್ದುಕೊಳ್ಳಲಾಗಿದೆ.



## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಗಾಳಿಗೆ ನಿಮಿಷವೂ ವಿರಾಮವಿಲ್ಲವೆಂದು ಕವಿ ಹೇಳಲು ಕಾರಣವೇನು?
2. ಗಾಳಿಯ ಒಡಲಿನಲ್ಲಿ ಏನೇನು ಸೇರಿಕೊಳ್ಳುತ್ತವೆ?
3. ಭವಿಷ್ಯದ ಮನುಜಕುಲವು ಕುಂಟಹೆಳವರಾಗಲು ಕಾರಣವೇನು?
4. 'ನಿರ್ದೋಷಿ ಜೀವಿಗಳು ಬಾಳಲಿ ನಿರಂತರ' ಎಂದು ಕವಿ ಹಾರೈಸಲು ಕಾರಣವೇನು?

## ಆಶಯ ಬರೆಯಿರಿ.

ಪರಿಸರ ಸಂಹಾರ ಕವನದ ಆಶಯ ಬರೆಯಿರಿ.

## ಲಿಖಿತ ಭಾಷಣ ತಯಾರಿಸಿರಿ.

ಪರಿಸರ ನಾಶ - ಕಾರಣ ಮತ್ತು ಪರಿಹಾರ - ಈ ವಿಷಯದ ಕುರಿತು ವಿಶ್ವ ಪರಿಸರ ದಿನದಂದು ಭಾಷಣ ಮಾಡಲು ಒಂದು ಲಿಖಿತ ಭಾಷಣ ತಯಾರಿಸಿರಿ.

## ಆರಿಸಿ ಬರೆಯಿರಿ.

ಕೆಳಗೆ ಕೊಡಲಾದ ಆಶಯಗಳಿಗೆ ಸಮಾನವಾದ ಸಾಲುಗಳನ್ನು ಕವನದಿಂದ ಆರಿಸಿ ಬರೆಯಿರಿ.

1. ಗಾಳಿಗೆ ಈ ಪ್ರಪಂಚದಲ್ಲಿ ಸ್ವಲ್ಪವೂ ವಿಶ್ರಾಂತಿಯಿಲ್ಲ
2. ಮಾನವ ಬೆಳಗ್ಗಿನಿಂದ ಸಂಜೆಯ ತನಕ ಪರಿಸರ ನಾಶದ ಕೆಲಸವನ್ನು ಮಾಡುತ್ತಿದ್ದಾನೆ.
3. ನಾಡಿನ ಜಲಮೂಲಗಳೆಲ್ಲ ಅಶುದ್ಧವಾಗಿವೆ.
4. ಈ ಪ್ರಪಂಚವನ್ನು ಛಿದ್ರ ಮಾಡಲು ನಮಗೆ ಅಧಿಕಾರವಿಲ್ಲ.

## ವಾಕ್ಯ ಬದಲಾಯಿಸಿ ಬರೆಯಿರಿ.

ಕೆಳಗೆ ಕೊಡಲಾದ ಉದಾಹರಣೆಯನ್ನು ಗಮನಿಸಿಕೊಂಡು ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆಯೆಳೆದ ಪದಗಳ ಬದಲಿಗೆ ಆವರಣದಲ್ಲಿ ಕೊಟ್ಟಿರುವ ಪದಗಳನ್ನು ಬಳಸಿಕೊಂಡು ವಾಕ್ಯವನ್ನು ಬದಲಾಯಿಸಿ ಬರೆಯಿರಿ.

ಉದಾ : ಈ ಭೂಮಿಯಲ್ಲಿ <u>ವಿವಿಧ</u> ರೀತಿಯ ಪ್ರಾಣಿಪಕ್ಷಿಗಳಿವೆ. (ವೈವಿಧ್ಯ)

ಈ ಭೂಮಿಯು <u>ವೈವಿಧ್ಯಮಯ</u> ಪ್ರಾಣಿಪಕ್ಷಿಗಳಿಂದ ಕೂಡಿದೆ.

1. ಮಾನವನು <u>ಸುಂದರ</u> ಪ್ರಕೃತಿಯನ್ನು ಹಾಳುಮಾಡುತ್ತಿದ್ದಾನೆ. (ಸೌಂದರ್ಯ)
2. ಹಲವಾರು ಕಾರಣಗಳಿಂದಾಗಿ ನಮ್ಮ ಪರಿಸರವು <u>ಮಲಿನ</u>ವಾಗುತ್ತಿದೆ. (ಮಾಲಿನ್ಯ)
3. ಭಾರತದಲ್ಲಿ <u>ವಿಶಿಷ್ಟ</u>ವಾದ ಆಚಾರವಿಚಾರಗಳಿವೆ. (ವೈಶಿಷ್ಟ್ಯ)

ಘಟಕ - 5

# ಪ್ರೇರಕ ಶಕ್ತಿಗಳು

## ಕಲಿಕಾ ಸಾಧನೆಗಳು

- ಕಥೆ, ಕವನ ಮೊದಲಾದ ಸಾಹಿತ್ಯಕೃತಿಗಳಲ್ಲಿರುವ ಸೌಂದರ್ಯಾಂಶಗಳನ್ನು ತಿಳಿದುಕೊಂಡು ಸ್ವಂತ ದೃಷ್ಟಿಕೋನದೊಂದಿಗೆ ಮೌಖಿಕವಾಗಿ ಮತ್ತು ಲಿಖಿತವಾಗಿ ಮಂಡಿಸುವುದು.
- ಗದ್ಯ ಮತ್ತು ಪದ್ಯಗಳ ಅರ್ಥವನ್ನು ತಿಳಿದುಕೊಂಡು ನಿರರ್ಗಳವಾಗಿ ಓದುವುದು ಮತ್ತು ಹಾಡುವುದು.
- ವಿಭಿನ್ನ ವಿಷಯುಗಳಿಗೆ ಸಂಬಂಧಿಸಿದ ಆಶಯುಗಳನ್ನು ಶಿಷ್ಟಭಾಷೆಯಲ್ಲಿ ಬರೆದು ಮಂಡಿಸುವುದು.
- ನಿಯತಕಾಲಿಕಗಳಲ್ಲಿ ಬರುವ ವ್ಯಂಗ್ಯಚಿತ್ರಗಳು, ಅಡಿಟಿಪ್ಪಣಿಗಳು, ಇತ್ಯಾದಿಗಳ ಆಶಯುಗಳನ್ನು ತಿಳಿದುಕೊಂಡು ಆಸ್ವಾದಿಸಿ ಸಮಾನವಾದವುಗಳನ್ನು ರಚಿಸುವುದು.
- ಸೂಕ್ತವಾದ ಪದ, ಪ್ರಯೋಗ, ಶೈಲಿ ಇತ್ಯಾದಿಗಳನ್ನು ಬಳಸಿಕೊಂಡು ಕಥೆ, ಕವಿತೆ, ನಾಟಕ ಇತ್ಯಾದಿ ವಿವಿಧ ಭಾಷಾವ್ಯವಹಾರ ಪ್ರಕಾರಗಳನ್ನು ರಚಿಸುವುದು ಮತ್ತು ಪರಿಷ್ಕರಿಸಿ ಪ್ರಕಟಿಸುವುದು.
- ಕಲಾಪ್ರಕಾರಗಳನ್ನು ಆಸ್ವಾದಿಸಿ ಅವುಗಳಿಗೆ ಸಂಬಂಧಿಸಿದ ಟಿಪ್ಪಣಿ, ಪ್ರಬಂಧ ಇತ್ಯಾದಿಗಳನ್ನು ತಯಾರಿಸುವುದು ಮತ್ತು ಅಭಿನಯಿಸುವುದು.
- ಸೃಜನಾತ್ಮ ರಚನೆಗಳಲ್ಲಿರುವ ವಸ್ತು, ಶೈಲಿ ಹಾಗೂ ಆಶಯುಗಳನ್ನು ಅರ್ಥೈಸಿಕೊಂಡು ಬೇರೊಂದು ಪ್ರಕಾರಕ್ಕೆ ಬದಲಾಯಿಸುವುದು.
- ವಿಭಿನ್ನ ಕಾಲಘಟ್ಟಗಳಲ್ಲಿ ರಚನೆಯಾದ ಕೃತಿಗಳನ್ನು ಅವಲೋಕಿಸಿ ಆ ಕಾಲಘಟ್ಟದ ಸಂಸ್ಕೃತಿ, ಭಾಷೆ, ಆಚಾರವಿಚಾರಗಳನ್ನು ವ್ಯಾಖ್ಯಾನಿಸುವುದು.



### ಸಂಭಾಷಣೆ ಬರೆಯಿರಿ

ಮೇಲಿನ ಚಿತ್ರವನ್ನು ಗಮನಿಸಿರಿ. ಈ ಚಿತ್ರಕ್ಕೆ ಹೊಂದಿಕೆಯಾಗುವ ಸೂಕ್ತ ಸಂಭಾಷಣೆ ಬರೆಯಿರಿ.

1

# ಹಿಟ್ಟಿನ ಋಣ

ಸುಮಾರು ಇನ್ನೂರು ವರ್ಷಗಳ ಹಿಂದಿನ ಒಂದು ರಣರಣ ಬಿಸಿಲಿನ ದಿನ. ಬೆಂಗಳೂರಿನಿಂದ ಇಪ್ಪತ್ತಾರು ಮೈಲಿ ದೂರದ ದೇವನಹಳ್ಳಿ. ಆಗ ಇನ್ನೂ ಹಳ್ಳಿಯೇ. ಮಧ್ಯಾಹ್ನ ಸುಮಾರು ಒಂದೂವರೆ – ಎರಡರ ಸಮಯ. ಸೇಡುತೀರಿಸಿಕೊಳ್ಳುವವನಂತೆ ಸೂರ್ಯ ಭೂಮಿಮನೆಗಳನ್ನು ಕಾದಕಾವಲಿಯಂತಾಗಿಸುತ್ತಿದ್ದಾನೆ. ಮನುಷ್ಯರೊತ್ತಟ್ಟಿಗಿರಲಿ ನಾಯಿ, ಬೆಕ್ಕುಗಳು, ಅಷ್ಟೇಕೆ ಕಾಗೆ, ಗುಬ್ಬಚ್ಚಿಗಳೂ ತಮ್ಮ ನೆರಳಿನ ನೆಲೆಯಿಂದ ತಲೆ ಹೊರಗೆ ಹಾಕುವ ಧೈರ್ಯ ಮಾಡಿರಲಿಲ್ಲ. ಶತ್ರು ರಾಜನೊಬ್ಬ ಸೂರೆಗೊಂಡ ನಗರದಂತೆ ಎಲ್ಲ ಕಡೆಯೂ ನಿರ್ಜನ, ನೀರವ. ಗೋಪಾಲಕೃಷ್ಣ ದೇವಸ್ಥಾನದ ಮುಂದಿನ ರಸ್ತೆಯ ಇಕ್ಕೆಲಗಳಲ್ಲಿದ್ದ ಹೆಚ್ಚುಕಡಿಮೆ ಎಲ್ಲ ಮನೆಗಳಲ್ಲೂ ಜನ ಊಟ ಮುಗಿಸಿ ಮಧ್ಯಾಹ್ನದ ವಿಶ್ರಾಂತಿ ಪಡೆಯುತ್ತಿದ್ದ ಸಮಯ. ಕಟ್ಟುಮಸ್ತಾದ ೨೦-೨೪ರ ಹರೆಯದ ಸೈನಿಕ ಕುದುರೆಯ ಮೇಲೇರಿ ಅದೇ ರಸ್ತೆಯಲ್ಲಿ ಬರುತ್ತಿದ್ದಾನೆ. ಬಹಳ ದೂರದಿಂದ ಬಂದಿರುವಂತೆ ಕಾಣುತ್ತದೆ. ಕುದುರೆಯೂ ಸೋತು ಕಾಲೆಳೆಯುತ್ತಿದೆ. ಸೈನಿಕನೂ ಅತೀವ ಬಳಲಿದ್ದಾನೆ. ದಾಹ, ಹಸಿವು, ಪ್ರಯಾಣದ ಆಯಾಸ ಹಾಗೂ ಬಿಸಿಲಿನ ನಿರ್ದಯ ಹೊಡೆತದಿಂದ ಕಂಗೆಟ್ಟುಹೋಗಿದ್ದಾನೆ.



ಆಹಾರವಿಲ್ಲದಿದ್ದರೂ ಸರಿ ನೀರಾದರೂ ಸಿಗದಿದ್ದರೆ ತಾನು ತಡೆದುಕೊಳ್ಳುವ ಸ್ಥಿತಿಯನ್ನು ದಾಟಿದ್ದೇನೆ ಎಂಬ ಅಸಹಾಯಕ ಭಾವ ಮುಖದಲ್ಲಿ ಸ್ಪಷ್ಟವಾಗಿ ಕೆತ್ತಲ್ಪಟ್ಟಿದೆ. ಯಾವ ಮನೆಯೆದುರೂ ಒಂದು ಮನುಷ್ಯ ಪ್ರಾಣಿಯೂ ಕಾಣಿಸುತ್ತಿಲ್ಲ. ಕೂಗುವ ತ್ರಾಣವೂ ಇಲ್ಲ. ಹಾಗೆ ಸಾಗಿದ....

ಒಂದು ಮನೆಯ ಮುಂದೆ ೬೫-೭೦ರ ವೃದ್ಧ ವಿಧವೆಯೊಬ್ಬಳು ಊಟಮಾಡಿದ ಎಂಜಲೆಲೆಯನ್ನು

KT-257-7/Kannada-8 AT

ಹೊರಗೆಸೆಯಲು ತನ್ನ ಮನೆಯಿಂದಾಚೆ ಬರುತ್ತಿದ್ದಾಳೆ! 'ಬದುಕಿದೆ' ಎಂದುಕೊಂಡ ಸೈನಿಕ.

ಆಕೆಯ ಮನೆಯ ಮುಂದೆ ಬಂದು ಸೋತ ದೇಹವನ್ನು ಕುದುರೆಯಿಂದಿಳಿಸುತ್ತಾ ನುಡಿದ "ಅಮ್ಮಾ ತುಂಬಾ ಬಾಯಾರಿದ್ದೇನೆ. ನೀರು ಬೇಕು". ವೃದ್ಧೆ ಯುವ ಸಿಪಾಯಿಯನ್ನೊಮ್ಮೆ ದಿಟ್ಟಿಸಿದಳು. ಈತನಿಗೆ ಬಾಯಾರಿಕೆಯಷ್ಟೇ ಅಲ್ಲ; ತೀವ್ರವಾದ ಹಸಿವೂ ಕಾಡುತ್ತಿದೆ ಎಂದು ಆ ತಾಯ ಹೃದಯಕ್ಕೆ ಅರಿವಾಯಿತು. ಕಟ್ಟಾ ಸಂಪ್ರದಾಯಸ್ಥ ಮನೆತನದವಳಾದ ಆ ವೃದ್ಧೆಗೆ ಯುವ ಮುಸಲ್ಮಾನ ಸಿಪಾಯಿಯ ಮೇಲೆ ಕರುಣೆ ಉಕ್ಕಿಬಂತು. ಬೇಗ ಎಂಜಲೆಲೆಯನ್ನು ಎಸೆದು ಮನೆಯೊಳಗೆ ಹೆಜ್ಜೆ ಇಡುತ್ತಾ ಅಂತಃಕರಣದಿಂದ "ಒಳಗೆ ಬಾಪ್ಪ" ಎಂದಳು. ಸಿಪಾಯಿ ವಿನಮ್ರನಾಗಿ ಅವಳನ್ನು ಹಿಂಬಾಲಿಸಿದ.

ವಿಶಾಲ ಅಂಗಳದಲ್ಲಿ ಆತನನ್ನು ನಿಲ್ಲಿಸಿ ಶುಭ್ರ ಹಿತ್ತಾಳೆಯ ತಂಬಿಗೆಯಲ್ಲಿ ಎಂದೂ ಬತ್ತದ ತನ್ನ ಮನೆಯ ಬಾವಿಯ ಅಮೃತ ಸಮಾನವಾದ ಸಿಹಿನೀರನ್ನು ತಂದಿತ್ತಳು. ಬಾಯಾರಿದವನಿಗೆ ಗಂಗೆಯೇ ಪ್ರತ್ಯಕ್ಷಳಾದಂತೆ ಮೈಮನಸ್ಸುಗಳೆರಡನ್ನೂ ತಂಪು ಮಾಡಿಕೊಂಡ ಸಿಪಾಯಿ.

"ಸ್ವಲ್ಪ ಹಿಟ್ಟು, ಹುಳಿಯಿದೆ. ತಿನ್ನುವಿಯಂತೆ; ಕೂತುಕೋಪ್ಪ" ಎಂದಳು ವೃದ್ಧೆ.

ನೀರು ಬಯಸಿದಾಗ ಹಾಲಿತ್ತಂತೆ ನೀರಿನ ಜೊತೆ ಅಸಹನೀಯ ಕ್ಷುದ್ಬಾಧೆ ತೀರಿಸಲು ಊಟವೂ ದೊರೆವ ಪ್ರಸಂಗಕ್ಕಾಗಿ ಪರಮಾನಂದವಾಯಿತು ಆ ಸಿಪಾಯಿಗೆ.

ಒಂದು ಎಲೆಯಲ್ಲಿ ಎರಡು ದೊಡ್ಡ ಗಾತ್ರದ ಮೃದುವಾದ ಮುದ್ದೆ, ನೆಂಜಿಕೊಳ್ಳಲು ಹುಳಿ ಎರಡನ್ನೂ ಅವನ ಮುಂದೆ ಇಟ್ಟಳು. ಹಸಿವಿನಿಂದ ಕಂಗಾಲಾಗಿದ್ದ ಆ ಯುವ ಸೈನಿಕ ಅತ್ಯಂತ ಆದರದಿಂದ ಆ ವೃದ್ಧೆಯ ಕೈಯ ಅಮೃತೋಪಮವಾದ ಹಿಟ್ಟು, ಹುಳಿ ತಿಂದು ಸಂತೃಪ್ತನಾದ. ಹೊಟ್ಟೆ ತುಂಬಿದೊಡನೆ ಮನೆಯ ಮೂಲೆ ಮೂಲೆಯನ್ನೂ ಕಣ್ಣಾಡಿಸಿ ನೋಡಿದ. ವೃದ್ಧೆ ಕುತೂಹಲದಿಂದ "ಯಾಕಪ್ಪ ಹಾಗೆ ನೋಡ್ತಿದ್ದೀ ಮನೇನ?" ಎಂದು ಕೇಳಿದಳು. ಸಿಪಾಯಿ "ಏನಿಲ್ಲಮ್ಮ ಹಿಟ್ಟು ನೀರು ನೀಡಿ ನನ್ನ ಪ್ರಾಣ ಕಾಪಾಡಿದ ತಾಯಿಯ ಮನೆ ನೋಡುತ್ತಿದ್ದೇನೆ" ಎಂದ. "ನೋಡುವಂಥ ಚೆಂದವೇನೂ ಈ ಮನೆಯಲ್ಲಿಲ್ಲಪ್ಪ" ಎಂದಳು ವೃದ್ಧೆ.

ಊಟ ಮುಗಿಸಿ ಎಲೆ ಹೊರಗೆಸೆದು ತಾನು ಉಂಡ ಜಾಗವನ್ನು ಶುಭ್ರಗೊಳಿಸಿ "ಅಮ್ಮ ನಿನ್ನ ಹೆಸರೇನು?" ಎಂದು ಕೇಳಿದ.

ವೃದ್ಧೆ "ನನ್ನ ಹೆಸರು ತಗೊಂಡು ನೀನೇನು ಮಾಡ್ತೀಯಪ್ಪ?" ಎಂದು ಕೇಳಿದಳು ಸಂಕೋಚದಿಂದ. "ಇರಲಿ ಅಮ್ಮ ನನಗೆ ಅನ್ನ ನೀರಿತ್ತ ತಾಯಿಯ ಹೆಸರನ್ನು ನಾನು ನೆನಪಿಟ್ಟುಕೊಳ್ಳಬೇಡವೇ? ಅದಕ್ಕೆ ಕೇಳಿದೆ; ಹೇಳು ತಾಯಿ" ಎಂದ.

ಆ ಕರುಣಾಮಯಿ ವೃದ್ಧೆ ಸಂಕೋಚದಿಂದಲೇ "ಏನೋ ನೀನು ಒತ್ತಾಯ ಮಾಡ್ತಿದ್ದೀಯಲ್ಲಾ ಎಂದು ಹೇಳ್ತೀನಿ. ನನ್ನನ್ನು ಎಲ್ಲರೂ ಭಾಗಮ್ಮಾ ಎಂದು ಕರೀತಾರಪ್ಪ. ಅದೇ ನನ್ನ ಹೆಸರು" ಎಂದಳು.

ಸಿಪಾಯಿ ಆ ಹೆಸರನ್ನು ಮನಸ್ಸಿನಲ್ಲೇ ನಾಲ್ಕಾರು ಬಾರಿ ಹೇಳಿಕೊಂಡು ವೃದ್ಧೆಗೆ ಆಭಾರ ಮನ್ನಿಸಿ ಕುದುರೆಗೂ ನೀರು ಕುಡಿಸಿಕೊಂಡು ಅಲ್ಲಿಂದ ಹೊರಟ.

ವರ್ಷಗಳು ಕಳೆದುಹೋದವು.

ವೃದ್ಧೆ ಭಾಗಮ್ಮ ವಯಸ್ಸಿನ ಭಾರದಿಂದ ಮತ್ತೂ ನಿಶ್ಶಕ್ತಳಾಗುತ್ತ ಬಂದಳು. ಹೆಚ್ಚಿನ ಕಾಲ ಮಲಗಿಯೇ ಕಳೆಯಬೇಕಾಗಿತ್ತು. ತನ್ನ ದೀರ್ಘ ಜೀವಿತದಲ್ಲಿ ಕಳೆದುಹೋದ ನೂರಾರು, ಸಾವಿರಾರು ಸಿಹಿಕಹಿ ಘಟನೆಗಳಲ್ಲಿ ಅದೆಷ್ಟು ಅವಳ ನೆನಪಿನಂಗಳದಲ್ಲಿ ಉಳಿದಿದ್ದುವೋ?!

ಒಂದು ಮಧ್ಯಾಹ್ನ ದೇವನಹಳ್ಳಿಯ ದೇವಸ್ಥಾನದ ಆ ಬೀದಿಯ ಮನೆಗಳವರನ್ನು ಒಂದು ಕಂಚಿನ ಕಂಠ ಬಡಿದೆಬ್ಬಿಸಿತು! ಅಶ್ವಾರೂಢನಾದ, ರಾಜಯೋಗ್ಯ ಉಡುಪು ಧರಿಸಿದ ಇಪ್ಪತ್ತರ ಆಸುಪಾಸಿನ ಒಬ್ಬ ದೃಢದೇಹಿ ರಸ್ತೆಯಲ್ಲಿ "ಭಾಗಮ್ಮ ಕೌನ್? ಭಾಗಮ್ಮ ಕೌನ್?..." ಎಂದು ಕೇಳುತ್ತಾ ಬರುತಿದ್ದ. ಜನ ಆಶ್ಚರ್ಯಚಕಿತರಾದರು. 'ನವಾಬನಂತೆ ಕಾಣುತ್ತಿದ್ದ ಈ ತರುಣನಿಗೆ ಬಾಳ ಮುಸ್ಸಂಜೆಯಲ್ಲಿರುವ ಬ್ರಾಹ್ಮಣ ವಿಧವೆ ಭಾಗಮ್ಮನ ಬಳಿ ಅದೇನು ಕೆಲಸ?!' ಕೆಲವರ ಮನಸ್ಸಿನಲ್ಲಿ ಭೀತಿಯೂ ಸುಳಿದಾಡಿತು. ಜನರ ಊಹಾಪೋಹಗಳ, ಆಲೋಚನೆಗಳ ನಡುವೆ ಆ ತರುಣನ ಕಂಠ ಮೊಳಗುತ್ತಲೇ ಇತ್ತು. "ಭಾಗಮ್ಮ ಕೌನ್? ಇಸ್ ಗಾಂವ್ ಮೆ ಭಾಗಮ್ಮ ಕೌನ್?" ದಿಗ್ಭ್ರಮೆ, ಗಲಿಬಿಲಿಗಳ ನಡುವೆಯೂ ಯಾರೋ ಒಬ್ಬ ಆಕೆಯ ಮನೆಯನ್ನು ತೋರಿಸಿದ. ಅಶ್ವಾರೋಹಿ ಕೆಳಗಿಳಿದು ತನ್ನ ಬೆಲೆಬಾಳುವ ಪಾದತ್ರಾಣಗಳನ್ನು ಹೊರಗೇ ಬಿಟ್ಟು ಆ ಮನೆಯ ಗಿಡ್ಡ ಬಾಗಿಲಿನ ಮೂಲಕ ತಲೆತಗ್ಗಿಸಿ ಒಳ ನಡೆದ. "ಅಜ್ಜಿ ನಿನ್ನನ್ನು ಹುಡುಕಿಕೊಂಡು ಯಾರೋ ಸರದಾರ ಬಂದಿದ್ದಾರೆ" ಒಬ್ಬ ವರದಿ ಒಪ್ಪಿಸಿದ.

ನಿತ್ರಾಣಳಾಗಿದ್ದ ಆ ವೃದ್ಧೆ ಕಷ್ಟಪಟ್ಟು ಹೊರಗೆ ಬಂದು ಕ್ಷೀಣವಾಗಿದ್ದ ತನ್ನ ದೃಷ್ಟಿಯಿಂದ ಅವನನ್ನು ನೋಡುತ್ತಾ "ಯಾರಪ್ಪಾ. ಏನು ಬೇಕಾಗಿತ್ತು ಇವತ್ತೋ ನಾಳೆಯೋ ದೇವರ ಪಾದ ಸೇರುವ ಈ ಮುದುಕಿಯಿಂದ?" ಎಂದು ಕೇಳಿದಳು.

ಸರದಾರ್ "ಅಮ್ಮಾ... ನಂಗೆ ತುಂಬಾ ಹಸಿವು. ಸ್ವಲ್ಪ ಹಿಟ್ಟು ಹುಳಿ ಬೇಕಾಗಿತ್ತು. ಕೊಡುತ್ತೀಯಾ?" ಎಂದ. ಮುದುಕಿಗೆ ಚೋದ್ಯವೆನಿಸಿತು. ಸರದಾರನಿಗೆ ಹಿಟ್ಟು ಹುಳಿ! ಅದೂ ಹೋಗಿಹೋಗಿ ತನ್ನ ಮನೆಯಿಂದ! ಆದರೂ ತನ್ನ ಮನೆಯಲ್ಲಿ ಅನ್ನ ಅಥವಾ ಹಿಟ್ಟಿನ ಕಡೆಯ ಚೂರಿರುವವರೆಗೂ ಕೇಳಿದವರಿಗೆ 'ಒಲ್ಲೆ' ಎನ್ನುವ ಪರಿಪಾಠವಿರದ ಆ ತಾಯಿ ಕಾಲೆಳೆಯುತ್ತಾ ಅಡಿಗೆ ಮನೆ ಕಡೆ ತಿರುಗಿ "ನಿಲ್ಲಪ್ಪಾ ಬಂದೆ" ಎಂದು ಮೊದಲು ಒಂದು ಚೊಂಬಿನಲ್ಲಿ ನೀರು ತಂದಿತ್ತು, ಆತ ಕೈಕಾಲು ತೊಳೆದುಕೊಂಡು ಕುಳಿತ ಮೇಲೆ ಬಾಳೆಎಲೆಯಲ್ಲಿ ಹಿಟ್ಟು ಹುಳಿಗಳನ್ನು ತಂದಿತ್ತಳು. ಎರಡನೆ ಬಾರಿ ಆ ಮಮತಾಮಯಿ ಇತ್ತ ಅಮೃತೋಪಮವಾದ ರಾಗಿ ಮುದ್ದೆಯನ್ನುಂಡು ಕೈತೊಳೆದು ಆ ಜಾಗ ಶುಭ್ರಗೊಳಿಸಿ ಸಂತೃಪ್ತಿಯಿಂದ ಸರದಾರ "ಅಮ್ಮಾ ಈಗ ಕೆಲವು ವರ್ಷಗಳ ಹಿಂದೆ ನಾನು ಕೋಲಾರದಿಂದ ಮೈಸೂರಿಗೆ ಹೋಗುವ ದಾರಿಯಲ್ಲಿ ಬಹಳ ದೂರ ಪ್ರಯಾಣ ಮಾಡಿ, ಬಿಸಿಲಿಗೆ ಬಳಲಿ ನಿನ್ನ ಬಾಗಿಲಿಗೆ ಬಂದಿದ್ದೆ. ಆಗ ನೀನು ಅಕ್ಕರೆಯಿಂದ ನನಗಿತ್ತ ಹಿಟ್ಟು ಹುಳಿಗಳ ಬಲದಿಂದ ನಾನೀಗ ನವಾಬನಾಗಿದ್ದೇನೆ ತಾಯಿ. ಆವತ್ತು ನೀನು ನನಗೆ ತೋರಿದ ಕರುಣೆಯ ಬೆಲೆಯನ್ನು ನಾನು ಎಂದೂ ತೀರಿಸಲಾರೆ ತಾಯಿ. 'ಒಲ್ಲೆ' ಅನ್ನದೆ ನಾನು ಅರ್ಪಿಸುತ್ತಿರುವ ಈ ಕಿರುಕಾಣಿಕೆಯನ್ನು ಒಪ್ಪಿಕೊಂಡು ನನ್ನನ್ನು ಹರಸು" ಎಂದು ಹೇಳಿ ತಾನು ಜೊತೆಯಲ್ಲಿ ತಂದಿದ್ದ ತಹನಾಮೆಯನ್ನು ಆಕೆಗೊಪ್ಪಿಸಿದ.

ತಾನು ಸೈನಿಕನಾಗಿದ್ದಾಗ ತೋರಿದ ಕರುಣೆಗೆ ಪ್ರತಿಯಾಗಿ ಭಾಗಮ್ಮ ಹಾಗೂ ಆಕೆಯ ವಂಶಜರು ಅನುಭವಿಸಿಕೊಂಡು ಹೋಗಲು ದೇವನಹಳ್ಳಿಯ ಸುತ್ತುಮುತ್ತಲಿನ ಐದು ಹಳ್ಳಿಗಳನ್ನು ಅವನು ಬಳುವಳಿಯಾಗಿ ನೀಡಿದ್ದ! ಕಾಲನ ಕರೆಯ ಹಾದಿಕಾಯುತ್ತಿದ್ದ ಆ ಕರುಣಾಮಯಿ ವೃದ್ಧೆ ಇದರಿಂದೇನೂ ಉಬ್ಬಿಹೋಗಲಿಲ್ಲ. ಆದರೆ ಸರದಾರನಿಗೆ ಸಂತೋಷವಾಗಲೆಂದು ಮಾತ್ರ ಆ ಕೊಡುಗೆಯನ್ನು ಸ್ವೀಕರಿಸಿ ಆತನನ್ನು ಮನಸಾರೆ ಹರಸಿದಳು. ಉಪಕೃತಿಯ ಭಾರವನ್ನು ತೃಣದಷ್ಟಾದರೂ ಇಳಿಸಿಕೊಂಡ ತೃಪ್ತ ಮನಸ್ಸಿನಿಂದ ನವಾಬ ಊರಿಗೆ ಮರಳಿದ.

**– ರತ್ನಾಮೂರ್ತಿ**

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಕುದುರೆಯ ಮೇಲೇರಿ ಬರುತ್ತಿದ್ದ ಸೈನಿಕನ ಸ್ಥಿತಿ ಹೇಗಿತ್ತು?
2. ವೃದ್ಧ ವಿಧವೆಯು ಸಿಪಾಯಿಗೆ ಏನೇನು ಕೊಟ್ಟಳು?
3. ಊಟ ಮುಗಿಸಿ ಎಲೆ ಹೊರಗೆಸೆದು ಉಂಡಜಾಗವನ್ನು ಶುಭ್ರಗೊಳಿಸಿದ ಅನಂತರ ಸಿಪಾಯಿ ಏನು ಮಾಡಿದನು?
4. ಸರದಾರನು ಭಾಗಮ್ಮನಿಗೆ ಏನನ್ನು ನೀಡಿದನು?

## ಪಾತ್ರಚಿತ್ರಣ ಮಾಡಿರಿ

'ಹಿಟ್ಟಿನ ಋಣ' ಕಥೆಯಲ್ಲಿ ನಿಮಗೆ ಮೆಚ್ಚುಗೆಯಾದ ಪಾತ್ರದ ಪಾತ್ರಚಿತ್ರಣ ಮಾಡಿರಿ.

## ಏಕಪಾತ್ರಾಭಿನಯ ಮಾಡಿರಿ.

ಸಿಪಾಯಿ ಮತ್ತು ವೃದ್ಧ ವಿಧವೆಯರೊಳಗೆ ನಡೆದ ಮಾತುಕತೆಯನ್ನು ಸಂಭಾಷಣೆಯಾಗಿ ಬರೆದು ತರಗತಿಯಲ್ಲಿ ಏಕಪಾತ್ರಾಭಿನಯ ಮಾಡಿರಿ.

## ಊಹಿಸಿ ಬರೆಯಿರಿ

ಅನ್ನಆಹಾರಗಳಿಲ್ಲದೆ ದಣಿದು ಬಂದ ಸೈನಿಕನಿಗೆ ಭಾಗಮ್ಮ ಏನನ್ನೂ ಕೊಡದಿರುತ್ತಿದ್ದರೆ ಏನಾಗುತ್ತಿತ್ತು? ಊಹಿಸಿ ಬರೆಯಿರಿ.

## ಗದ್ಯಭಾಗ ರಚಿಸಿರಿ

ಕೆಳಗೆ ಕೊಡಲಾದ ಗದ್ಯಭಾಗದಲ್ಲಿ ಅಡಿಗೆರೆ ಎಳೆದ ಭಾಷಾಪ್ರಯೋಗಗಳನ್ನು ಬಳಸಿಕೊಂಡು ಬೇರೊಂದು ಗದ್ಯಭಾಗವನ್ನು ರಚಿಸಿರಿ.

ಅಂದು ಬೇಸಗೆಯ ಒಂದು ದಿನ. ರಣರಣ ಬಿಸಿಲಿನಲ್ಲಿ ನಾವು ಮಕ್ಕಳೆಲ್ಲ ಕ್ರಿಕೆಟ್ ಆಡುತ್ತಿದ್ದೆವು. ಬಿಸಿಲಿನ ನಿರ್ದಯ ಹೊಡೆತವನ್ನು ಲೆಕ್ಕಿಸದೆ ನಮ್ಮ ಆಟ ಭರದಿಂದ ಸಾಗಿತ್ತು. ಫಕ್ಕನೆ ಚೆಂಡು ಪೊದರುಗಳೆಡೆಯಲ್ಲಿ ಕಾಣೆಯಾಯಿತು. ವಿಷಯ ತಿಳಿಯದ ಗೆಳೆಯ ರವಿ "ಏಯ್ ಸುರೇಶ ಆಚೆನಿಲ್ಲು, ಏಯ್ ಅಶ್ಫಾಕ್ ಬೌಂಡರಿ ಹತ್ತಿರ ಹೋಗಿ ನಿಲ್ಲು..." ಎನ್ನುತ್ತಲೇ ಇದ್ದ. ಅವನ ಕಂಠ ಮೊಳಗುತ್ತಲೇ ಇರುವುದನ್ನು ಗಮನಿಸಿ ಅತ್ತಕಡೆ ಹೋಗಿ ವಿಚಾರ ತಿಳಿಸಿದೆ. ಅವನನ್ನೂ ಕರೆದುಕೊಂಡು ಚೆಂಡನ್ನು ಹುಡುಕಲು ಹೊರಟೆ. ಚೆಂಡು ಸಾಗಿದ ದಾರಿಯನ್ನು ನನ್ನ ನೆನಪಿನಂಗಳದಲ್ಲಿ ಹುಡುಕಾಡಿದೆ. ಅದು ಫಲಿಸಿತು. ಚೆಂಡು ಸಿಕ್ಕಿತು.

# 2

# ಅಂಬೇಡ್ಕರ್

ನಾಡನಡುವಿನಿಂದ ಸಿಡಿದ
ನೋವಿನ ಕೂಗೇ
ಆಕಾಶದ ಅಗಲಕ್ಕೂ
ನಿಂತ ಆಲವೇ

ಕೋಟಿ ಕೋಟಿ ಕಪ್ಪು ಜನರ
ಮೊತ್ತ ಮೊದಲ ಮಾತೇ
ನೀರಿನಾಚೆ ಮೋಡದಾಚೆ
ಮೊಳಗಿದಂಥ ಘೋಷವೆ

ಬಾಳಿನಲ್ಲಿ ಕಂಡುಕೊಂಡೆ
ಹೋರಾಟದ ದಾರಿಯ
ಕರೆದು ಕರೆದು ತೋರಿಸಿದೆ
ಮಹಾಮನೆಯ ಬಿರುಕನು



ಜಾತಿಯನ್ನು ಹೂತು ಬಿಡಲು
ಲಕ್ಷ ಲಕ್ಷ ಜನರನು
ಕಟ್ಟಿ ಕ್ರಿಯಾರಂಗಕಿಳಿದ
ಸ್ವಾಭಿಮಾನ ಸಮುದ್ರ

ಮಹಾರಾಷ್ಟ್ರದ ಮಣ್ಣಿನಲ್ಲಿ
ಮೂಡಿಬಂದ ಗುಡುಗು ಸಿಡಿಲೆ
ಮಳೆಯನೇಕೆ ತಾರಲಿಲ್ಲ
ಮಿಂಚು ಮಾಯ ಅಷ್ಟೆಯೆ


ಅಭಿಮಾನದ ನೇಗಿಲಿಂದ
ಬಂಜರು ನೆಲ ಉತ್ತವನೆ
ಪಾತಿ ಮಾಡಿ ನಾಟಿ ಹಾಕಿ
ಬೆಳೆಯ ಕಾಣದೋದವನೆ

ಕಪ್ಪುಕ್ಕಿನ ಕೋಳಗಳನು
ಕಡಿದು ಎಸೆದ ವಜ್ರವೆ
ಬಂಗಾರದ ಕೋಳವೋ
ಮಾಹಾಬೌದ್ಧ ಭಿಕ್ಷುವೆ

ಮಲಗಿದ್ದವರ ಕೂರಿಸಿದೆ
ನಿಲಿಸುವವರು ಯಾರೋ?
ಛಲದ ಜೊತೆಗೆ ಬಲದ ಪಾಠ
ಕಲಿಸುವವರು ಯಾರೋ?

**– ಡಾ। ಜಿ.ಎಸ್. ಸಿದ್ಧಲಿಂಗಯ್ಯ**

## ಡಾ।। ಜಿ. ಎಸ್. ಸಿದ್ಧಲಿಂಗಯ್ಯ



ತುಮಕೂರು ಜಿಲ್ಲೆಯ ಬೆಳ್ಳಾವೆಯಲ್ಲಿ 20-02-1931ರಲ್ಲಿ ಜನಿಸಿದ ಡಾ। ಜಿ.ಎಸ್. ಸಿದ್ಧಲಿಂಗಯ್ಯನವರು ಮೈಸೂರು ವಿಶ್ವವಿದ್ಯಾನಿಲಯದಿಂದ 1955ರಲ್ಲಿ ಬಿ.ಎ. (ಆನರ್ಸ್) ಪದವಿಯನ್ನು, 1961ರಲ್ಲಿ ಕನ್ನಡ ಎಂ.ಎ. ಪದವಿಯನ್ನು ಪಡೆದರು. ಅನೇಕ ಸರಕಾರಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ ಇವರು 1988ರಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಾಗಿ ಪ್ರಾಮಾಣಿಕ ಅಧಿಕಾರಿ ಎಂದು ಖ್ಯಾತರಾದರು. 1974ರಲ್ಲಿ ಚಿತ್ರದುರ್ಗದಲ್ಲಿ ಹಿಂದುಳಿದ ಜಾತಿ, ಹಿಂದುಳಿದ ವರ್ಗದವರಿಗೆ ವಸತಿ ಶಾಲೆಯನ್ನು ಆರಂಭಿಸಲು ಅವರು ಕಾರಣರಾದರು. ಅತ್ಯುತ್ತಮ ಅಧ್ಯಾಪಕರೆಂಬ ಹೆಸರನ್ನು ಪಡೆದಿದ್ದ ಇವರು 1989ರಿಂದ 1992ರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು.

ಮಹಾನುಭಾವ ಬುದ್ಧ, ಕವಿ ಲಕ್ಷ್ಮೀಶ, ಚಾಮರಸ, ಹೊಸಗನ್ನಡ ಕಾವ್ಯ, ರಸಗಂಗೆ, ಉತ್ತರ, ಚಿತ್ರವಿಚಿತ್ರ, ಐವತ್ತರ ನೆರಳು, ಋಷ್ಯಶೃಂಗ, ಪಂಚಮುಖ, ವಚನಸಾಹಿತ್ಯ - ಒಂದು ಇಣುಕು ನೋಟ, ಶತಾಬ್ದಿ ದೀಪ, ಜಂಗಮ ಜ್ಯೋತಿ, ಅಣ್ಣನ ನೂರೊಂದು ವಚನಗಳು ಇವರ ಕೃತಿಗಳಾಗಿವೆ.

### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. ಡಾ। ಜಿ. ಸಿದ್ಧಲಿಂಗಯ್ಯ ಅವರು "ಆಕಾಶದ ಅಗಲಕ್ಕೂ ನಿಂತ ಆಲವೇ" ಎಂದು ಹೇಳಿದುದು ಯಾರನ್ನು?
2. ಮಹಾರಾಷ್ಟ್ರದ ಮಣ್ಣಿನಲ್ಲಿ ಮೂಡಿಬಂದವರಲ್ಲಿ ಕವಿ ಏನೆಂದು ಹೇಳಿದ್ದಾರೆ?
3. "ಮಹಾಬೌದ್ಧ ಭಿಕ್ಷು" ಎಂದು ಕವಿ ಹೇಳಿರುವ ಡಾ। ಅಂಬೇಡ್ಕರ್ ಏನು ಮಾಡಿದ್ದಾರೆ?
4. 'ಮಲಗಿದ್ದವರ ಕೂರಿಸಿದೆ ನಿಲಿಸುವವರು ಯಾರೋ?' ಎಂಬ ಮಾತಿನ ಆಶಯವೇನು?

### ಆಶಯ ಬರೆಯಿರಿ

'ಅಂಬೇಡ್ಕರ್' ಕವನದ ಆಶಯವನ್ನು ಬರೆಯಿರಿ.

## ಸ್ವಾರಸ್ಯ ಬರೆಯಿರಿ.

ಕೆಳಗೆ ಕೊಡಲಾದ ಸಾಲುಗಳ ಸ್ವಾರಸ್ಯ ಬರೆಯಿರಿ.

ಅಭಿಮಾನದ ನೇಗಿಲಿಂದ
ಬಂಜರು ನೆಲ ಉತ್ತವನೆ
ಪಾತಿ ಮಾಡಿ ನಾಟಿ ಹಾಕಿ
ಬೆಳೆಯ ಕಾಣದೋದವನೆ

## ವ್ಯಕ್ತಿಪರಿಚಯ ಬರೆಯಿರಿ.

ಕೆಳಗೆ ಕೊಡಲಾದ ಮಾಹಿತಿಯ ಆಧಾರದಲ್ಲಿ ವ್ಯಕ್ತಿಪರಿಚಯ ಬರೆಯಿರಿ

| | | |
|---|---|---|
| ಹೆಸರು | : | ಕಯ್ಯಾರ ಕಿಞ್ಞಣ್ಣ ರೈ |
| ಜನನ | : | 8-6-1915, ಕಾಸರಗೋಡು ಸಮೀಪದ ಪೆರಡಾಲ ಗ್ರಾಮ |
| ತಂದೆ | : | ದುಗ್ಗಪ್ಪ ರೈ |
| ತಾಯಿ | : | ದೈಯ್ಯಕ್ಕ |
| ವಿದ್ಯಾಭ್ಯಾಸ | : | ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ವಿದ್ವಾನ್ ಪದವಿ ಹಾಗೂ ಖಾಸಗಿಯಾಗಿ ಎಂ.ಎ. ಪದವಿ. |
| ಮಾತೃಭಾಷೆ | : | ತುಳು |
| ಉದ್ಯೋಗ | : | ಸ್ವಲ್ಪ ಕಾಲ ಪತ್ರಿಕೋದ್ಯಮಿ; ಅನಂತರ ನಿವೃತ್ತಿ ಹೊಂದುವವರೆಗೆ ಪೆರಡಾಲದ ನವಜೀವನ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕ. |
| ಕಾವ್ಯನಾಮ | : | ದುರ್ಗಾದಾಸ. |
| ಕೃತಿಗಳು | : | ಶ್ರೀಮುಖ, ಐಕ್ಯಗಾನ, ಪುನರ್ನವ, ಚೇತನ, ಗಂಧವತೀ ಇತ್ಯಾದಿ ಕವನ ಸಂಕಲನಗಳು<br>ದುಡಿತವೇ ನನ್ನ ದೇವರು - ಆತ್ಮಚರಿತ್ರೆ<br>ಪಂಚಮಿ - ಉಪನಿಷತ್ತುಗಳ ಭಾಷಾಂತರ |
| ಪ್ರಶಸ್ತಿಗಳು | : | 1969ರಲ್ಲಿ ಭಾರತ ಸರಕಾರದಿಂದ ಶ್ರೇಷ್ಠ ಅಧ್ಯಾಪಕ ಪ್ರಶಸ್ತಿ, 1996ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1985ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, 1995ರಲ್ಲಿ ಕನ್ನಡ ಕುಲಭೂಷಣ ಪ್ರಶಸ್ತಿ, ಇತ್ತೀಚೆಗೆ ಪಂಪ ಪ್ರಶಸ್ತಿ ಹಾಗೂ ನಾಡೋಜ ಪ್ರಶಸ್ತಿ, ಮಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ |
| ವಿಶೇಷ ಗೌರವ | : | ಮಂಗಳೂರಿನಲ್ಲಿ 1997ರಲ್ಲಿ ನಡೆದ 66ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ. |

3

# ಅಕ್ಷರ ಸಂತ ಹರೇಕಳ ಹಾಜಬ್ಬ

ಮಂಗಳೂರು ನಗರದಿಂದ ಕೇರಳಕ್ಕೆ ಸಾಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಮಾರು ಹತ್ತು ಕಿಲೋಮೀಟರ್ ಕ್ರಮಿಸಿದರೆ ತೊಕ್ಕೊಟ್ಟು ಎಂಬ ಸದಾ ಜನಸಂದಣಿಯಿಂದ ಗಿಜಿಗಿಡುವ ಪೇಟೆ. ಈ ಪೇಟೆಯಿಂದ ಸರಿಸುಮಾರು ಎಂಟು ಕಿಲೋಮೀಟರ್ ದೂರದಲ್ಲಿ ಮಂಗಳಗಂಗೋತ್ರಿ. ಇಲ್ಲಿಂದ ಸರಿಯಾಗಿ ನಾಲ್ಕು ಕಿಲೋಮೀಟರ್ ಮುಂದಕ್ಕೆ ಚಲಿಸಿದರೆ ನಗರ ಜೀವನದ ಜಂಜಡಗಳಿಂದ ಅಲ್ಪ ದೂರವೇ ಉಳಿದ ನ್ಯೂಪಡ್ಪು ಎಂಬ ಪುಟ್ಟ ಹಳ್ಳಿ ಇದೆ. ಅದೇ ನಮ್ಮ ಅಕ್ಷರ ಭಗೀರಥ ಶಿಕ್ಷಣದ ಗಂಗೆ ಹರಿಸಿದ ಗುಡ್ಡಬೆಟ್ಟಗಳಿಂದಾವೃತವಾದ ಹಳ್ಳಿ. ಈ ಹಳ್ಳಿಯಲ್ಲೇ ಅಕ್ಷರಸಂತನ ಆಶ್ರಮ ಅಥವಾ ನ್ಯೂಪಡ್ಪು ಸರಕಾರಿ ಸಂಯುಕ್ತ ಪ್ರೌಢಶಾಲೆಯಿದೆ. ಶಿಕ್ಷಣದ ಪರಿಕಲ್ಪನೆಯೂ ಇಲ್ಲದ, ಜನರಿಂದಲೇ ತುಂಬಿರುವ ಈ ಹಳ್ಳಿಯಲ್ಲಿ ಅಂತಹವರಲ್ಲೊಬ್ಬನೇ ಆದ ಹಾಜಬ್ಬ ಎಂಬ ಅಕ್ಷರಕ್ರಾಂತಿ ಪುರುಷ ಹುಟ್ಟಿ ಬಂದು ಇಂದು ಈ ಹಳ್ಳಿಯನ್ನು ದೇಶಕ್ಕೇ ಮಾದರಿಯಾಗಬಲ್ಲ ಹಳ್ಳಿಯಾಗಿ ಬೆಳೆಸುವ ಕಾಯಕದಲ್ಲಿ ತಲ್ಲೀನರಾಗಿದ್ದಾರೆ.



ಮಂಗಳೂರು ತಾಲೂಕಿನ ಹರೇಕಳ ಎಂಬ, ನೇತ್ರಾವತಿಯ ಸೆರಗಿನ ತುದಿಯ ಹಳ್ಳಿಯ ಬಡ ಬೀಡಿ ಕಾರ್ಮಿಕರಾದ ಕುಟ್ಟಿಮಾಕ-ಬೀಫಾತಿಮಾ ದಂಪತಿಯ ಪುತ್ರನಾಗಿ ಜನ್ಮತಾಳಿದ ಹಾಜಬ್ಬ ಬಡತನದಲ್ಲೇ ಬೆಳೆದವರು. ಆ ಹಳ್ಳಿಯ ಆ ಕಾಲದ ಎಲ್ಲರಂತೆಯೇ ಹಾಜಬ್ಬರೂ ತನ್ನ ಆರನೇ ವಯಸ್ಸಿಗೆ ಬೀಡಿಯ ಪರಿಕರಗಳನ್ನು ಕೈಗೆತ್ತಿಕೊಂಡರು. ಯೌವನಕ್ಕೆ ಕಾಲಿಡುತ್ತಲೇ ಸಹಜವಾಗಿಯೇ ಎಲ್ಲಾ ಬ್ಯಾರಿ ಮುಸ್ಲಿಮರಂತೆ ಹಾಜಬ್ಬ ವ್ಯಾಪಾರದ ಕನಸು ಕಾಣತೊಡಗಿದರು. ಮಂಗಳೂರು ಕೇಂದ್ರ ಮಾರುಕಟ್ಟೆಯ ರಖಂ ಹಣ್ಣಿನ ವ್ಯಾಪಾರಿಗಳಿಂದ ಕಿತ್ತಳೆ ಹಣ್ಣುಗಳನ್ನು ಖರೀದಿಸಿ ಬುಟ್ಟಿಯಲ್ಲಿ ತುಂಬಿಸಿ ತಲೆಮೇಲೆ ಹೊತ್ತು ನಗರದ ಬೀದಿಬೀದಿ ತಿರುಗಾಡಿ ವ್ಯಾಪಾರ ಮಾಡತೊಡಗಿದರು. ಆ ಮೂಲಕ ತನ್ನ ಕನಸನ್ನು ಸಾಕಾರಗೊಳಿಸಿದರು.

ತೊಂಭತ್ತರ ದಶಕದ ಸುಡುಬೇಸಗೆಯ ದಿನಗಳಲ್ಲಿ ಹಾಜಬ್ಬ ಎಂದಿನಂತೆ ತನ್ನ ವ್ಯಾಪಾರದಲ್ಲಿ ತಲ್ಲೀನರಾಗಿದ್ದರು. ಹಾಜಬ್ಬರ ಬಳಿಬಂದ ಬಿಳಿಗೂದಲಿನ ವಿದೇಶೀ ಪ್ರವಾಸಿಗ ಜೋಡಿಯೊಂದು “How much for oranges?” ಎಂದು ಪ್ರಶ್ನಿಸಿತು.

ಇಂಗ್ಲಿಷ್ ಬಿಡಿ, ಕನ್ನಡ ಅಕ್ಷರಮಾಲೆಯ ಪರಿಚಯವೂ ಇಲ್ಲದ ಹಾಜಬ್ಬ ನಿರುತ್ತರರಾದರು. ಅವರು ಚಿಂತಾವಿಷ್ಟರಾದರು. 'ಇಂದು ತನಗಾದ ಮುಜುಗರ ತನ್ನ ಹಳ್ಳಿಯ ಮುಂದಿನ ಪೀಳಿಗೆಗೆ ಆಗಲೇಕೂಡದು' ಎಂದು ನಿರ್ಧರಿಸಿದರು. 'ಈ ಹಳ್ಳಿಗೊಂದು ಶಾಲೆಯಾಗಬೇಕು' ಎಂಬ ಕನಸಿನ ಬೆನ್ನೇರಿಬಿಟ್ಟರು. ತನ್ನ ಮಹತ್ವಾಕಾಂಕ್ಷೆಯನ್ನು ಸಹವ್ಯಾಪಾರಿಗಳಲ್ಲಿ, ಗೆಳೆಯರಲ್ಲಿ ಹೇಳಿಕೊಂಡಾಗ ಅವರು "ಹಾಜಬ್ಬನಿಗೆ ಮತಿಭ್ರಮಣೆಯಾಗಿದೆ" ಎಂದು ಗೇಲಿ ಮಾಡಿ ನಗತೊಡಗಿದರು. ತನ್ನ ಕನಸನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಎಂದೂ ಸರಕಾರಿ ಕಛೇರಿಗಳಿಗೆ ಕಾಲಿಟ್ಟು ಗೊತ್ತಿಲ್ಲದ ಹಾಜಬ್ಬ ಜಿಲ್ಲಾಧಿಕಾರಿ ಕಛೇರಿ, ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ ಎಂದು ಅಲೆಯತೊಡಗಿದರು. ಎಲ್ಲಿಯೂ ಅವರಿಗೆ ಹಾರ್ದಿಕ ಸ್ವಾಗತ ಲಭಿಸಲಿಲ್ಲ. ಆದರೂ ಅವರು ಧೃತಿಗೆಡಲಿಲ್ಲ.

ಹಾಜಬ್ಬರ ಹಗಲಿನ ಸಮಯವೆಲ್ಲವೂ ಸರಕಾರಿ ಕಛೇರಿಗಳಿಗೆ ಅಲೆಯುವುದರಲ್ಲಿಯೇ ಮುಗಿದುಹೋಗುತ್ತಿತ್ತು. ಇದರಿಂದ ಮೂರು ಹೊತ್ತು ಉಣ್ಣುತ್ತಿದ್ದ ಹಾಜಬ್ಬರ ಕುಟುಂಬದ ಒಂದು ಹೊತ್ತಿನ ಊಟಕ್ಕೆ ಸಂಚಕಾರ ಬಂತು. ಅವರ ಪತ್ನಿ ಮೈಮೂನಾ ಸುತ್ತುತ್ತಿದ್ದ ಬೀಡಿಯಿಂದಾಗಿ ಎರಡು ಹೊತ್ತಿಗೆ ಮಾತ್ರ ಒಂದಿಷ್ಟು ಗಂಜಿನೀರು ಕುಡಿಯಲು ಸಾಧ್ಯವಾಗುತ್ತಿತ್ತು.

ಅದೊಂದು ಸುದಿನ. ತನ್ನ ಪಕ್ಕದ ಹಳ್ಳಿಯವರಾದ ಜಿಲ್ಲಾ ಪಂಚಾಯತ್ ಸದಸ್ಯ ಅಜೀಜ್ ಮಲಾರ್ ಎದುರ್ಗೊಂಡಾಗ ಹಾಜಬ್ಬರ ಆಸೆ ಕೈಗೂಡುವ ಕಾಲ ಒದಗಿ ಬಂತು. ಹಾಜಬ್ಬ ಅವರಿಗೆ ದುಂಬಾಲುಬಿದ್ದರು. ಹಾಜಬ್ಬರ ನೈಜ ಕಾಳಜಿಯನ್ನರಿತ ಮಲಾರ್ ಜಿಲ್ಲಾ ಪಂಚಾಯತ್‌ನಲ್ಲಿ ವಿಷಯ ಪ್ರಸ್ತಾಪಿಸಿ ಶಾಲೆಗೆ ಅನುಮತಿ ದೊರಕಿಸಿಕೊಟ್ಟರು. ೧೯೯೯ ಜೂನ್ ೬ರಂದು ಸ್ಥಳೀಯ ತ್ವಾಹ ಮಸೀದಿಯ ಮದ್ರಸದಲ್ಲಿ ತಾತ್ಕಾಲಿಕ ಶಾಲೆ ಆರಂಭವಾಗುವುದರೊಂದಿಗೆ ಹಾಜಬ್ಬರ ಕನಸು ನನಸಾಯಿತು. ಇನ್ನು ಆದಷ್ಟು ಬೇಗ ಶಾಲೆಗೊಂದು ಸ್ವಂತ ಕಟ್ಟಡವಾಗಬೇಕೆಂದು ಹಾಜಬ್ಬ ಮತ್ತೆ ಚಪ್ಪಲಿ ಸವೆಸಲಾರಂಭಿಸಿದರು. ಶಾಲೆ ನಿರ್ಮಾಣಕ್ಕಾಗಿ ಚಂದಾ ಎತ್ತಲು ಉಳ್ಳವರ ಕಛೇರಿ, ಮನೆಬಾಗಿಲಿಗೆ ಎಡತಾಕತೊಡಗಿದರು. ಹೀಗೆ ಹೋದಾಗಲೇ "ಹೊಟ್ಟೆಹೊರೆಯಲು ಮೈಮುರಿದು ದುಡಿಯಲು ನಿನಗೇನು ಧಾಡಿ? ಶಾಲೆಯ ಹೆಸರಿನಲ್ಲಿ ಭಿಕ್ಷಾಟನೆ ಮಾಡಲು ನಾಚಿಯಾಗೋದಿಲ್ವಾ?" ಎಂದು ಹಲವಾರು ಬಾರಿ ಜನರು ಮೂದಲಿಸಿದರು. ಆದರೂ ಹಾಜಬ್ಬ ವಿಚಲಿತರಾಗಲಿಲ್ಲ. ತನ್ನ ಬದ್ಧತೆಯಿಂದ ಹಿಂದೆ ಸರಿಯಲಿಲ್ಲ.

ನ್ಯೂಪಡ್ಪು ತ್ವಾಹಾ ಮಸೀದಿಯಿಂದ ಎರಡು ಫರ್ಲಾಂಗು ದೂರದಲ್ಲಿ ಖಾಸಗಿ ವ್ಯಕ್ತಿಯೊಬ್ಬರಿಂದ ೪೦ ಸೆಂಟ್ಸ್ ಸರಕಾರಿ ಜಾಗ ಆಕ್ರಮಿಸಲ್ಪಟ್ಟಿತ್ತು. 'ಅದು ಯಾರದ್ದೇ ಪಟ್ಟಾ ಜಾಗವಲ್ಲ' ಎಂಬುದನ್ನು ಖಾತರಿಪಡಿಸಿಕೊಂಡ ಹಾಜಬ್ಬರು ಅದನ್ನು ತಾನು ಆರಂಭಿಸಿದ ಶಾಲೆಗಾಗಿ ಕೊಡಿಸಬೇಕೆಂದು ಸರಕಾರಿ ಕಛೇರಿಗಳಿಗೆ

ಅಲೆಯತೊಡಗಿದರು. ಜಾಗವನ್ನು ಧರ್ಮಾರ್ಥವಾಗಿ ಕೊಡಿಸಿ ಎಂದು ಕೇಳಲಿಲ್ಲ. ದುಡ್ಡು ಕೊಟ್ಟೇ ಜಾಗ ಖರೀದಿಸಲು ಸಿದ್ಧರಾದರು. ಅದು ಸರಕಾರಿ ಜಾಗವಾದುದರಿಂದ ದಾಖಲೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಕಛೇರಿಗಳಿಗೆ ಅಲೆಯುವುದು ಅನಿವಾರ್ಯವಾಗಿತ್ತು. ಹಾಜಬ್ಬರ ಪ್ರಯತ್ನ ಕೊನೆಗೂ ಫಲಿಸಿತು. ಆ ಜಾಗಕ್ಕೆ ೫೫,೦೦೦/- ರೂಪಾಯಿ ಬೆಲೆ ನಿಗದಿಯಾಯಿತು. ತನ್ನ ಹಳ್ಳಿಯಲ್ಲಿ ಶಾಲೆಯೊಂದನ್ನು ಆರಂಭಿಸಬೇಕೆಂಬ ಕನಸು ಕುಡಿಯೊಡೆದಂದಿನಿಂದ ಹಾಜಬ್ಬ ತನ್ನ ಅಲ್ಪ ಆದಾಯದ ಒಂದು ಪಾಲನ್ನು ಶಾಲೆಗಾಗಿ ಉಳಿತಾಯ ಮಾಡುತ್ತಾ ಬಂದಿದ್ದರು. ಉಳಿದ ಮೊತ್ತವನ್ನು ಪಾವತಿಸಲು ಪಡೆದ ಅವಧಿಯೂ ಮುಗಿಯಿತು. ಅವಧಿ ಒಂದಲ್ಲ, ಎರಡಲ್ಲ, ಮೂರೂ ಮುಗಿಯಿತು. ಆದರೂ ಹಾಜಬ್ಬರಿಂದ ದುಡ್ಡು ಹೊಂದಿಸಲಾಗಲಿಲ್ಲ.

ಹಾಜಬ್ಬ ಎಂತಹ ಉಭಯಸಂಕಟದಲ್ಲಿದ್ದರೆಂದರೆ ಆ ವ್ಯಕ್ತಿಯನ್ನು ಕಂಡಾಗಲೆಲ್ಲಾ ತಲೆಮರೆಸಿಕೊಳ್ಳುತ್ತಿದ್ದರು. ಅವರನ್ನು ಹುಡುಕಿಕೊಂಡು ಮನೆಗೆ ಬಂದರೆ ಅಡಗಿ ಕುಳಿತು ಹೆಂಡತಿಯಿಂದ "ಅವರು ಮನೆಯಲ್ಲಿಲ್ಲ" ಎಂದು ಹೇಳಿಸುತ್ತಿದ್ದರು. ಇಷ್ಟೆಲ್ಲಾ ಮುಜುಗರದಿಂದ ಹಾಜಬ್ಬ ಬದುಕುತ್ತಿದ್ದುದು ತನ್ನ ಹಳ್ಳಿಯ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ, ತಾನು ಸಮಾಜದ ಒಳಿತಿಗಾಗಿ, ಕಂಡ ಕನಸುಗಳ ಈಡೇರಿಕೆಗಾಗಿ, ಸ್ವಾರ್ಥರಹಿತ ಅದಮ್ಯ ಬಯಕೆಗಳ ಪೂರೈಕೆಗಾಗಿ. ಹಾಜಬ್ಬ ಎಂಬ ಮಹಾತ್ಮನ ನಿಸ್ವಾರ್ಥ ಬಯಕೆಯನ್ನು ಅರ್ಥೈಸಿಕೊಂಡ ಮಂಗಳೂರಿನ ಸುಫಿ ಶಮ್ನಾಡರು ಹಾಜಬ್ಬರಿಗೆ ೫೦೦೦ ರೂಪಾಯಿ ದೇಣಿಗೆ ನೀಡಿದರು. ಆ ಬಳಿಕ ಉಸ್ಮಾನ್ ಹಾಜಿ ಎಂಬ ಸಹೃದಯ ಉದ್ಯಮಿಯೊಬ್ಬರು ೩೦೦೦ ರೂಪಾಯಿ ದೇಣಿಗೆ ನೀಡಿದರು. ಧರ್ಮಸ್ಥಳದ ಧರ್ಮಾಧಿಕಾರಿ ಡಾ। ವೀರೇಂದ್ರ ಹೆಗ್ಗಡೆ, ಉಳ್ಳಾಲ ದರ್ಗಾ ಸಮಿತಿ ಹೀಗೆ ಕೆಲವರು ಹಾಜಬ್ಬರ ನೆರವಿಗೆ ನಿಂತರು. ಇದರಿಂದಾಗಿ ಶಾಲೆಯ ಭೂಮಿಯನ್ನು ಋಣಮುಕ್ತಗೊಳಿಸಿದರು.

ಸರ್ವಶಿಕ್ಷಾ ಅಭಿಯಾನ ಯೋಜನೆಯಡಿ ಎರಡು ಕೊಠಡಿಗಳು ಮಂಜೂರಾಗಿ ನಿರ್ಮಾಣವೂ ಆಯಿತು. ಶಾಲೆಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿದರು. ಅಧ್ಯಾಪಕರಿಗೆ ಕುಳಿತುಕೊಳ್ಳಲು ಮೇಜುಕುರ್ಚಿಗಳನ್ನು ತನ್ನ ಕೈಯಿಂದಲೇ ದುಡ್ಡುಕೊಟ್ಟು ಹಾಜಬ್ಬ ತಂದರು. ಮಧ್ಯಾಹ್ನದ ಬಿಸಿಯೂಟಕ್ಕೆ ಬೇಕಾದ ಪಾತ್ರೆಪಗಡಿಗಳನ್ನು ಮತ್ತು ಅರೆಯುವ ಕಲ್ಲನ್ನು ಹಾಜಬ್ಬ ತನ್ನ ಮನೆಯಿಂದಲೇ ತಂದರು. ಶಾಲೆಯ ಕೆಲಸಗಳಿಂದಾಗಿ ತಿರುಗಾಡುವಾಗಲೆಲ್ಲಾ ಹಾಜಬ್ಬ ತನ್ನ ಜೇಬಿನಿಂದಲೇ ಖರ್ಚು ಮಾಡುತ್ತಿದ್ದರು.

೨೦೦೪ರ ಸೆಪ್ಟೆಂಬರ್ ೧೬ ಹಾಜಬ್ಬ ಎಂಬ ಅಪ್ರತಿಮ ಸಮಾಜ ಸೇವಕ ರಾಜ್ಯಕ್ಕೆ ಪರಿಚಯವಾದ ದಿನ. ಹೊಸದಿಗಂತ ಪತ್ರಿಕೆಯಲ್ಲಿ ಪ್ರಕಟವಾದ 'ಕಿತ್ತಳೆ ಬುಟ್ಟಿಯಲ್ಲಿ ಅರಳಿದ ಕನಸುಗಳು' ಎಂಬ ಲೇಖನವನ್ನು ಕನ್ನಡಿಗರು ಬೆರಗುಗಣ್ಣಿನಿಂದ ಓದಿದರು. ಹಾಜಬ್ಬರ ಯಶೋಗಾಥೆ ದೇಶದಾದ್ಯಂತ ಮನೆಮಾತಾಯಿತು. ಸಿ.ಎನ್.ಎನ್., ಐ.ಬಿ.ಎನ್., ರಿಲಯನ್ಸ್ ಮೊದಲಾದ ಸಂಸ್ಥೆಗಳು ೨೦೦೮ರಲ್ಲಿ



ನಿಸ್ವಾರ್ಥ ಸಮಾಜಸೇವೆಯ ಮೂಲಕ ಇತರರಿಗೆ ಮಾದರಿಯಾದವರನ್ನು ಗುರುತಿಸಿ 'ದಿ ರಿಯಲ್ ಹೀರೋ' ಎಂಬ ಪ್ರಶಸ್ತಿ ನೀಡಲು ತೀರ್ಮಾನಿಸಿದ್ದವು. ಶಿಕ್ಷಣ ಕ್ಷೇತ್ರದಲ್ಲಿ ಅಪರೂಪದ ಸೇವೆ ಸಲ್ಲಿಸಿದ ವ್ಯಕ್ತಿಯಾಗಿ ಹಾಜಬ್ಬ 'ರಿಯಲ್ ಹೀರೋ' ಪ್ರಶಸ್ತಿಗೆ ಆಯ್ಕೆಯಾದರು. ಪ್ರಶಸ್ತಿಯೊಂದಿಗೆ ೫ ಲಕ್ಷ ರೂಪಾಯಿ ನಗದು ಬಹುಮಾನವೂ ಬಂತು. ಅವರ ವ್ಯಕ್ತಿತ್ವಕ್ಕೆ ಮೆರುಗೂ ಬಂತು. ಹಾಜಬ್ಬ ಎಲ್ಲವನ್ನೂ ಶಾಲೆಗೆ ಸಮರ್ಪಿಸಿಬಿಟ್ಟರು.

ಹಾಜಬ್ಬರಿಗೆ ಸಂದ ಪ್ರಶಸ್ತಿ, ಗೌರವ, ಸಮ್ಮಾನಗಳು ಸುಮಾರು ೮೦. ಬಿರುದು, ಸಮ್ಮಾನದೊಂದಿಗೆ ಸಿಕ್ಕ ಪೈಸೆಪೈಸೆಯನ್ನೂ ಅವರು ಶಾಲಾಭಿವೃದ್ಧಿಗೆ ವಿನಿಯೋಗಿಸಿದರು. ಹಾಜಬ್ಬರ ಬದುಕಿಗೆ ಇಂದಿಗೂ ಕಿತ್ತಳೆ ಹಣ್ಣಿನ ತಲೆಹೊರೆ ವ್ಯಾಪಾರ ಮತ್ತು ಮಗನ ಕೂಲಿಕೆಲಸವೇ ಆಧಾರ. ಅವರದು ಸಾಮಾನ್ಯನೊಬ್ಬನ ಅಸಾಮಾನ್ಯ ಸಾಧನೆ. ದೊಡ್ಡ ಕನಸುಕಂಡು ಅದನ್ನು ನನಸಾಗಿಸುವುದಕ್ಕೆ ಬೇಕಾಗಿರುವುದು ಶ್ರೀಮಂತಿಕೆಯಲ್ಲ. ಶ್ರದ್ಧೆ ಮತ್ತು ಪ್ರಾಮಾಣಿಕತೆ. ಇದಕ್ಕೆ ಹಾಜಬ್ಬನವರ ಬದುಕು ಸಾಧನೆ ಒಂದು ಜೀವಂತ ನಿದರ್ಶನ.

**– ಇಸ್ಮತ್ ಫಜೀರ್**



## ಇಸ್ಮತ್ ಫಜೀರ್

ಇವರು ಬಂಟ್ವಾಳ ತಾಲೂಕಿನ ಫಜೀರು ಗ್ರಾಮದವರು. ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞಾನದಲ್ಲಿ ಡಿಪ್ಲೋಮಾ ಮಾಡಿಕೊಂಡವರು. ಸ್ವಂತ ಪ್ರಯೋಗಾಲಯದಲ್ಲಿ ವೃತ್ತಿ ನಿರತರು. ದೇಹಸಂಬಂಧಿ ದೋಷ ಹುಡುಕಿ ಹೇಳುವುದಕ್ಕೆ ಆದ್ಯತೆ ನೀಡುವವರು. ಜೊತೆಗೆ ಸಮಾಜಕ್ಕೆ ಚಿಕಿತ್ಸೆ ಕೊಡಬೇಕೆಂದೇ ಪತ್ರಿಕೆ ಬರಹಗಳೊಂದಿಗೆ ನಂಟು ಬೆಳಿಸಿಕೊಂಡವರು. ಪತ್ರಿಕೋದ್ಯಮದಲ್ಲಿ ಪದವಿ ಗಳಿಸಿಕೊಂಡವರು.

ವಾರ್ತಾಭಾರತಿ, ಗೌರಿಲಂಕೇಶ, ಕರಾವಳಿ ಅಲೆ, ಮದರಂಗಿ ಮೊದಲಾದ ದಿನ, ವಾರ, ಮಾಸಪತ್ರಿಗೆಗಳಲ್ಲಿ ವಿಚಾರ, ವಿಮರ್ಶೆ, ವಿಶೇಷ ವರದಿ ಇವರ ಬರಹಗಳು.

ಇಸ್ಮತ್ ಕೃತಿಕಾರರು ಕೂಡಾ. ವರದಕ್ಷಿಣೆಯ ವಿರುದ್ಧದ ಅಕ್ಷರ ಸಮರವೇ 'ಶಾಪದ ಕಣ್ಣೀರು'. ಇವರ ವೈದ್ಯಕೀಯ ಲೇಖನಗಳ ಸಂಕಲನ 'ಆರೋಗ್ಯ ಸಿಂಚನ' ಟಿಪ್ಪು, ಶಿವಾಜಿ ಹಾಗೂ ಔರಂಗಜೇಬರ ಧಾರ್ಮಿಕ ನೀತಿಯ ಕಿರು ಅಧ್ಯಯನವೇ 'ವಿಕೃತ ಇತಿಹಾಸದ ಬಲಿಪಶುಗಳು'. ಅಪರೂಪದ ಸಮಾಜಸೇವಕ – ಹರೇಕಳ ಹಾಜಬ್ಬ ಮುಂತಾದವುಗಳು ಇವರ ಇತರ ಕೃತಿಗಳು.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಹಾಜಬ್ಬರ ಬಳಿಗೆ ಬಿಳಿಗೂದಲಿನ ದಂಪತಿಗಳು ಬಂದಾಗ ನಡೆದ ಘಟನೆಯೇನು?
2. ಹಾಜಬ್ಬರ ಆಸೆ ಕೈಗೂಡುವ ಕಾಲ ಯಾವಾಗ ಒದಗಿಬಂತು?
3. ಶಾಲಾಕಟ್ಟಡಕ್ಕೆ ಸ್ಥಳ ಪಡೆದುಕೊಂಡುದು ಹೇಗೆ?

## ಆತ್ಮಕಥೆಯಾಗಿ ಪರಿವರ್ತಿಸಿರಿ.

ಕೆಳಗೆ ಕೊಡಲಾದ ಗದ್ಯಭಾಗವನ್ನು ಹಾಜಬ್ಬರು ಸ್ವತಃ ಹೇಳುವಂತೆ ಬರೆಯಿರಿ.

ಹಾಜಬ್ಬ ಎಂತಹ ಉಭಯಸಂಕಟದಲ್ಲಿದ್ದರೆಂದರೆ ಆ ವ್ಯಕ್ತಿಯನ್ನು ಕಂಡಾಗಲೆಲ್ಲಾ ತಲೆಮರೆಸಿಕೊಳ್ಳುತ್ತಿದ್ದರು. ಅವರನ್ನು ಹುಡುಕಿಕೊಂಡು ಮನೆಗೆ ಬಂದರೆ ಅಡಗಿ ಕುಳಿತು ಹೆಂಡತಿಯಿಂದ "ಅವರು ಮನೆಯಲ್ಲಿಲ್ಲ" ಎಂದು ಹೇಳಿಸುತ್ತಿದ್ದರು. ಇಷ್ಟೆಲ್ಲಾ ಮುಜುಗರದಿಂದ ಹಾಜಬ್ಬ ಬದುಕುತ್ತಿದ್ದುದು ತನ್ನ ಹಳ್ಳಿಯ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ, ಸ್ವಾರ್ಥರಹಿತ ಒಳಿತಿಗಾಗಿ; ಹಾಜಬ್ಬರ ನಿಸ್ವಾರ್ಥ ಬಯಕೆಯನ್ನು ಅರ್ಥೈಸಿಕೊಂಡ ಮಂಗಳೂರಿನ ಸುಫಿ ಶಮ್ನಾಡರು ಹಾಜಬ್ಬರಿಗೆ ದೇಣಿಗೆ ನೀಡಿದರು. ಅನಂತರ ಬಹಳಷ್ಟು ಮಂದಿಯಿಂದ ಧನಸಂಗ್ರಹ ಮಾಡಿದರು. ಅದರಿಂದಾಗಿ ಹಾಜಬ್ಬರು ಶಾಲೆಯ ಭೂಮಿಯನ್ನು ಋಣಮುಕ್ತಗೊಳಿಸಿದರು.

## ಸನ್ಮಾನ ಪತ್ರ ಬರೆಯಿರಿ

ಹಾಜಬ್ಬರ ವಿಶೇಷ ಸಾಧನೆಯನ್ನು ಪರಿಗಣಿಸಿ ನಿಮ್ಮ ಊರಿನಲ್ಲಿ ಅಭಿನಂದನ ಸಮಾರಂಭ ನಡೆಯಲಿದೆಯೆಂದು ಭಾವಿಸಿರಿ. ಆ ಸಂದರ್ಭದಲ್ಲಿ ಸಮರ್ಪಿಸುವುದಕ್ಕಾಗಿ ಸನ್ಮಾನ ಪತ್ರವನ್ನು ಸಿದ್ಧಪಡಿಸಿರಿ.

## ವರದಿ ತಯಾರಿಸಿರಿ

ಹಾಜಬ್ಬರಂತೆ ನಿಮ್ಮ ಊರಿನಲ್ಲಿ ವಿಶೇಷವಾದ ಸಮಾಜ ಸೇವೆ ಮಾಡಿದ ವ್ಯಕ್ತಿಯ ಸಂದರ್ಶನ ನಡೆಸಿ ಸಂದರ್ಶನ ವರದಿ ಬರೆಯಿರಿ.

4

# ಏಕಲವ್ಯನ ಸಾಧನೆ

**ಕಥಾ ಸಂದರ್ಭ :**
ದ್ರೋಣಾಚಾರ್ಯರು ಧನುರ್ವಿದ್ಯಾ ಪಾರಂಗತರು. ಆದುದರಿಂದ ಭೀಷ್ಮಾಚಾರ್ಯರು ಅವರನ್ನು ಕೌರವರಿಗೂ ಪಾಂಡವರಿಗೂ ಬಿಲ್ಲುವಿದ್ಯೆಯನ್ನು ಕಲಿಸುವ ಗುರುಗಳಾಗಿ ನೇಮಿಸುತ್ತಾರೆ. ಏಕಲವ್ಯನು ಹಿರಣ್ಯಧನು ಎಂಬ ಬೇಡನ ಮಗ. ಬಾಲ್ಯದಲ್ಲಿಯೇ ಅವನಿಗೆ ಬಿಲ್ಲುವಿದ್ಯೆಯನ್ನು ಕಲಿಯುವ ಮಹದಾಸೆ. ಧನುರ್ವಿದ್ಯೆಯನ್ನು ಕಲಿಸುವ ಗುರುಗಳ ಕುರಿತಾಗಿ ತಂದೆಯೊಡನೆ ವಿಚಾರಿಸುತ್ತಾನೆ. ದ್ರೋಣಾಚಾರ್ಯರ ವಿಚಾರ ತಿಳಿದು ಅವರನ್ನು ಹುಡುಕುತ್ತಾ ಕಾಡಿನಿಂದ ನಾಡಿಗೆ ಬರುತ್ತಾನೆ.

॥ ರಾಗ ಆಭೇರಿ, ಆದಿತಾಳ ॥

ಕಾಣದ ಹಾದಿಯಲ್ಲಿ। ಬಂದೆನು ಮಹಿ।ಮನನರಸುತಿಲ್ಲಿ ॥ ದ್ರೋಣನೆಂಬವ ಹಸ್ತಿ।ನಾ
ನಗರಿಯ ರಾಜ।ಸೂನುಗಳಿಗೆ ವಿದ್ಯಾದಾನ ಮಾಡುವನಂತೆ ॥ 1 ॥

ಏಕಲವ್ಯ : ಪರಮ ಗುರುಗಳಾದ ದ್ರೋಣಾಚಾರ್ಯರಲ್ಲಿ ಬಿಲ್ಲುವಿದ್ಯೆಯನ್ನು ಕಲಿಯುವ ನಿರ್ಧಾರವನ್ನು ಮಾಡಿದ್ದೇನೆ. ನನ್ನಲ್ಲಿ ಒಬ್ಬ ವಿದ್ಯಾರ್ಥಿಯಲ್ಲಿರಬೇಕಾದ ಶ್ರದ್ಧೆ, ಆಸಕ್ತಿ, ಉತ್ಸಾಹ ಎಲ್ಲವೂ ಇವೆ. ಕಾಡಿನ ಕಾಣದ ಹಾದಿಯಲ್ಲಿ ಮಹತ್ತರವಾದ ವ್ಯಕ್ತಿತ್ವವಿರುವ ಗುರುಗಳನ್ನು ಅರಸುತ್ತಾ ಬಂದಿದ್ದೇನೆ. ದ್ರೋಣಾಚಾರ್ಯರು ರಾಜಕುಮಾರರಾದ ಕೌರವಪಾಂಡವರಿಗೆ ಧನುರ್ವಿದ್ಯೆಯನ್ನು ಅಭ್ಯಾಸ ಮಾಡಿಸುತ್ತಿದ್ದಾರಂತೆ. ಅವರನ್ನು ಕಾಣುವ ತವಕದಿಂದ ಬಂದವನಿದ್ದೇನೆ. ಅದೋ ಅವರೇ ಅಲ್ಲವೆ ದ್ರೋಣಾಚಾರ್ಯರು.... ಅವರ ಪಾದಗಳಿಗೆ ಮಣಿಯುತ್ತೇನೆ.

॥ ರಾಗ ಕೇದಾರಗೌಳ, ಅಷ್ಟತಾಳ ॥

ಮಣಿದು ಹಿರಣ್ಯಧ।ನ್ವನ ಪುತ್ರನೇಕಲ।ವ್ಯನು ವಿದ್ಯಾರ್ಥಿಯು ಎನ್ನಲು।ಮನದಿ ತರ್ಕಿಸುತ ದ್ರೋ।ಣನು ಬೇಡ ಬೇಡ ಪೋ।ಗೆನಲೆಂದನೇಕಲವ್ಯ ॥ 2 ॥

ಏಕಲವ್ಯ : ಆಚಾರ್ಯ ದ್ರೋಣರೇ, ನಾನು ಹಿರಣ್ಯಧನು ಎನ್ನುವ ಸಚ್ಚಾರಿತ್ರ್ಯವುಳ್ಳ ವ್ಯಕ್ತಿಯ ಮಗ. ಬಿಲ್ಲುವಿದ್ಯೆಯನ್ನು ಕಲಿಯ ಬೇಕೆಂಬುದು ನನ್ನ ಮಹತ್ವಾಕಾಂಕ್ಷೆ. ಅದು ಕೈಗೂಡಬೇಕಾದರೆ ನಿಮ್ಮ ಶಿಷ್ಯನಾಗುವುದೇ ಸರಿ ಎಂದು ತಿಳಿದು ಇದೋ ತಮ್ಮ ಪಾದಮೂಲಗಳಿಗೆ ಪೊಡಮಟ್ಟಿದ್ದೇನೆ. ಶಿಷ್ಯನಾಗಿ ಸ್ವೀಕರಿಸ ಬೇಕೆಂದು ಬೇಡಿಕೊಳ್ಳುತ್ತೇನೆ ಗುರುವರ್ಯ.

ದ್ರೋಣಾಚಾರ್ಯ: ಆಗದು ಆಗದು. ನೀನು ಯಾರು, ನಿನ್ನ ಕುಲಗೋತ್ರಗಳೇನು ಎಂಬುದು ಯಾವುದೂ ನಮಗೆ ತಿಳಿಯದು. ಆದುದರಿಂದ ಇಂತಹ ಕೋರಿಕೆಯನ್ನು ನನ್ನ ಮುಂದಿಡಬೇಡ.

॥ ರಾಗ ಮಧ್ಯಮಾವತಿ, ಆದಿತಾಳ ॥

ಅಡವಿಯೊಳಗೆ ನಮ್ಮ ಗುಡಿಸಂಸಾರಗಳು । ಒಡಗೂಡಿ ಬೇಟೆಜೀವನವೃತ್ತಿ ಕೂಳು ॥ ಮೃಡ ಭಕ್ತರಹುದು ಶಿಷ್ಟರು ಮತ್ರ್ಯಾಶನರು । ಬಿಡೆನು ಸೇವೆಯ ವಿದ್ಯಾರ್ಜನೆಗಿನ್ನಾರಿಹರು ॥

ಏಕಲವ್ಯ : ಗುರುವರ್ಯಾ, ನಾವು ಇಲ್ಲಿಯೇ ಸಮೀಪದ ಅರಣ್ಯವಾಸಿಗಳು. ಕೂಲಿಗಾಗಿ ಬೇಟೆಯ ವೃತ್ತಿಯನ್ನಾಯ್ದುಕೊಂಡವರಿದ್ದೇವೆ. ಹಾಗಂತ ಸಾಮಾನ್ಯಮಾನವರಂತೆ ಆಹಾರವನ್ನೇ ಸ್ವೀಕರಿಸುವವರಿದ್ದೇವೆ. ಆ ಪರಶಿವನ ಪರಮ ಭಕ್ತರ ಗರ್ಭದಿಂದ ಮೂಡಿಬಂದವನು ನಾನು. ತಮ್ಮ ಪಾದಸೇವೆಯನ್ನು ಸದಾ ಮಾಡುತ್ತೇನೆ. ಶಿಷ್ಯನಾಗಿ ಸ್ವೀಕರಿಸಿ ನನ್ನನ್ನು ಪೊರೆಯಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

॥ ರಾಗ ಕೇದಾರಗೌಳ, ಝಂಪೆ ತಾಳ ॥

ದುಷ್ಟ ಶಿಷ್ಯ ಪರಿಗ್ರಹ।ಶುಕ್ರನಂ।ತಿಪ್ಪ ಕೀರ್ತಿಯ ನಿಗ್ರಹ ॥ ಶ್ರೇಷ್ಠ ಕುಲಜರ ಪಂಕ್ತಿಯು।ಧರ್ಮವ।ಲ್ಲೆಂದರಷ್ಟೆ ಗತಿಯು ॥

ದ್ರೋಣಾಚಾರ್ಯ: ಅಯ್ಯಾ ಕುಮಾರ, ನೀನು ಹೇಳುವುದು ಸರಿ. ಆದರೆ ನಾನು ನನ್ನ ಬಗ್ಗೆ ಗಮನಿಸಬೇಡವೇ? ಕಾಡಾಡಿಗಳಿಗೆ ವಿದ್ಯೆಯನ್ನು ಹೇಳಿಕೊಡಲು ಹೊರಟರೆ ನಮ್ಮ ಕೀರ್ತಿಗೆ ಕಳಂಕ ತಟ್ಟುತ್ತದೆ. ರಾಜಕುಮಾರರ ಗುರುವಾದ ನನ್ನನ್ನು ಎಲ್ಲರೂ ನಿಂದಿಸ

ದಿರಲಾರರು. ಆದುದರಿಂದ ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಹಿಂದಕ್ಕೆ ನಡೆಯುವುದೇ ಲೇಸು.

ಏಕಲವ್ಯ : ಅಯ್ಯೋ ನನ್ನ ವಿಧಿಯೇ! ನನ್ನ ಬಯಕೆ ಈಡೇರದೇ ಹೋಯಿತಲ್ಲ. ದ್ರೋಣಾಚಾರ್ಯರ ಮೂರ್ತಿಯನ್ನು ಮನದಲ್ಲಿ ತುಂಬಿಕೊಂಡಿದ್ದೇನೆ. ನನಗೆ ಬಗೆದದ್ದು ಬಂದೇಬರುತ್ತದೆ ಎಂಬ ವಿಶ್ವಾಸವನ್ನು ತುಂಬಿಕೊಂಡು ಕಾಡಿನ ಕಡೆಗೆ ಸಾಗುತ್ತೇನೆ.

(ಏಕಲವ್ಯನು ಕಾಡಿಗೆ ತೆರಳುತ್ತಾನೆ)

॥ ವಾರ್ಧಕ ॥

ಬಳಿಕಿತ್ತ ದ್ರೋಣಕೃತ ಪಕ್ಷಿಲಕ್ಷ್ಯ ಪರೀಕ್ಷೆ।ಯಲಿ ಜಲಾಹರಣ ಮೊದಲಾಗಿ ಪಾರ್ಥನು
ಶಿಷ್ಯ।ರಲಿ ಶ್ರೇಷ್ಠನಪ್ರತಿಮನೆಂದು ಕಳುಹಿದನೆಲ್ಲರಂ ಬೇಟೆಗಣಿಯಾದರು ॥

ದ್ರೋಣಾಚಾರ್ಯ: ಶಿಷ್ಯೋತ್ತಮರೇ, ನನಗೆ ಬಹಳ ಸಂತೋಷದ ದಿನವಿಂದು. ಕೌರವಪಾಂಡವರಲ್ಲಿ ಯಾರು ಉತ್ತಮ ಬಿಲ್ಗಾರನೆಂದು ತಿಳಿಯುವ ಪರೀಕ್ಷೆ ಮಾಡಿದೆ. ಹಾರುವ ಹಕ್ಕಿಗೆ ಗುರಿಯಿಡುವಂತಹ, ನೀರಿನಲ್ಲಿ ಅಡಗಿ ಕುಳಿತಿರುವವರನ್ನು ಗುರುತಿಸುವಂತಹ ಪರೀಕ್ಷೆಗಳಲ್ಲೆಲ್ಲ ಪ್ರಿಯ ಶಿಷ್ಯನಾದ ಪಾರ್ಥನು ಸಫಲನಾಗಿದ್ದಾನೆ. ಅವನು ನಿಜವಾಗಿಯೂ ಶ್ರೇಷ್ಠ ಬಿಲ್ಗಾರನು. ಅದು ಸರಿ, ಈಗ ಬೇಟೆಗಾಗಿ ಕಾಡಿಗೆ ಹೋಗಬೇಕಾಗಿದೆ. ಎಲ್ಲರೂ ಸಿದ್ಧತೆಗಳನ್ನು ಮಾಡಿಕೊಂಡು ಅತ್ತ ಸರಿಯಿರಿ.

(ದ್ರೋಣಾಚಾರ್ಯರ ಸಲಹೆಯಂತೆ ಪಾಂಡವರು ಕಾಡಿನಲ್ಲಿ ಬೇಟೆಗಾಗಿ ಸಾಗುತ್ತಾರೆ)

॥ ರಾಗ ಶಂಕರಾಭರಣ, ಮಟ್ಟೆತಾಳ ॥

ಮಣ್ಣಮೂರ್ತಿ ಪೂಜಿಸುತ್ತ।ತಿಣ್ಣ ಶರದ ಸಾಧನೆಗಳ।ನೆಣ್ಣುತಿರಲು ಶ್ವಾನಭಷಣ।ವನ್ನು
ಕೇಳುತಾ ॥ 1 ॥ ಶ್ವಾನ ಬೊಗಳುತ್ತೈದಲೇಳು । ಬಾಣ ಬಾಯಿಗೆಚ್ಚ ಗಾಯ।ಕಾಣದಂತೆ
ಬಿಗಿದುದಂಬ।ನೇನನೆಂಬೆನು ॥ 2 ॥

ಏಕಲವ್ಯ : ದ್ರೋಣಾಚಾರ್ಯರೇ ನನ್ನ ಗುರುಗಳೆಂದು ನಂಬಿದವನು ನಾನು. ಆದುದರಿಂದ ಅವರ ಮಣ್ಣಿನ ಬಿಂಬವನ್ನು ರಚಿಸಿದ್ದೇನೆ. ಅವರ ಅನುಗ್ರಹವನ್ನು ಬೇಡಿ ಬಿಲ್ಲುವಿದ್ಯೆಯಲ್ಲಿ ಸಾಧನೆಗೈಯುತ್ತಿದ್ದೇನೆ. ಅದೋ ಅದೋ ನಾಯಿಯೊಂದು ಬೊಗಳುತ್ತಿರುವುದು ಕೇಳಿಸುತ್ತಿದೆಯಲ್ಲ. ನನ್ನ ವಿದ್ಯಾಭ್ಯಾಸಕ್ಕೆ ಭಂಗವನ್ನು ತರುತ್ತಿದೆಯಲ್ಲ.

ನಾನು ಕಲಿತ ಶಬ್ದವೇಧಿ ಎಂಬ ವಿದ್ಯೆಯನ್ನು ಈಗ ಪ್ರಯೋಗ ಮಾಡುತ್ತೇನೆ. ಏಳು ಬಾಣಗಳಿಂದ ಶ್ವಾನದ ಸದ್ದಿಲ್ಲದಂತೆ ಮಾಡುತ್ತೇನೆ. ಅದರ ಬಾಯಿ ಗಾಯ ಕಾಣದ ಹಾಗೆ ಹೊಲಿದಂತಾಗಲಿ.

॥ ರಾಗ ಆರ್ಯಸವಾಯ್, ಏಕತಾಳ ॥

ಬೇಟೆಗೆನುತ ಬಂದಿಹ ನೃಪಕುವರರ । ಕೂಟದೊಳರ್ಜುನ ಮುಂಬಂದ।ಸಾಟಿಯಿಲ್ಲದಿಹ ಶರ ಸಂಯೋಜನ।ದಾಟವ ಕಲಿಸಿದರಾರೆಂದ ॥

ಅರ್ಜುನ : ನಮ್ಮ ಜೊತೆಯಲ್ಲಿದ್ದ ನಾಯಿಯು ಫಕ್ಕನೆ ಮೂಕವಾಗಿದೆ. ನೋಡಿದರೆ ಆಶ್ಚರ್ಯವಾಗುವಂತಹದು ನಡೆದಿದೆ. ಈ ಚಾಕಚಕ್ಯತೆಯನ್ನು ಮಾಡಿದವನು ಇಲ್ಲೇ ಇದ್ದಾನಲ್ಲ. ಎಲಾ... ಬೇಡರ ಕುವರನೇ ಇಂತಹ ವಿಶೇಷ ಸಾಧನೆಗೆ ನಿನಗೆ ತರಬೇತಿ ನೀಡಿದವರಾರು?

॥ ಭಾಮಿನಿ ॥

ಹರಿಹರಾತ್ಮಕ ದ್ರೋಣನೆಂಬವ । ಗುರುವೆನಗೆ ಈ ಮೂರ್ತಿ ರೂಪದಿ । ಕರುಣೆಯನು ತೋರಲ್ಕೆ ಸಾಧಿಸಿಕೊಂಡೆ ಶರವಿದ್ಯೆ ॥

ಏಕಲವ್ಯ : ಅಯ್ಯಾ ರಾಜಕುಮಾರ, ನನ್ನ ಗುರುಗಳ ಬಗ್ಗೆ ಹೇಳಲು ನನಗೆ ಅಭಿಮಾನವಿದೆ. ಮೂರು ಲೋಕಗಳನ್ನೂ ರಕ್ಷಿಸುವ ಆ ಹರಿಹರಿಲ್ಲವೆ? ಅವರನ್ನೇ ಒಳಗೊಂಡವರು ನನ್ನ ಗುರುವರ್ಯ. ಧನುರ್ವಿದ್ಯಾ ಪಾರಂಗತರವರು. ನೋಡಲಾರೆಯಾ ಅವರ ಈ ಪ್ರತಿಮೆಯನ್ನು. ದ್ರೋಣಾಚಾರ್ಯರೇ ನನ್ನ ಗುರುಗಳು.

॥ ರಾಗ ಮಧ್ಯಮಾವತಿ, ತ್ರಿವುಡೆ ತಾಳ ॥

ನೊಂದ ಮನದರ್ಜುನನು ದ್ರೋಣನ।ವಂದಿಸಲು ಪ್ರಿಯ ಶಿಷ್ಯ ಮೊಗಸಿರಿ । ಕಂದಿರುವುದಾರಿಂದ । ಬಂತೇ । ನೆಂದು ಪೇಳೆನಲೆಂದನು । ದುಗುಡದಿಂದ ॥

ಅರ್ಜುನ : ಆಚಾರ್ಯರೇ, ನಿಮಗಿದೋ ಪ್ರಣಾಮಗಳು....

ದ್ರೋಣಾಚಾರ್ಯ: ಪಾರ್ಥ... ಎದ್ದೇಳು. ಈಗ ಹೀಗೆ ವಿಶೇಷವಾಗಿ ವಂದನೆ ಏಕೆಂದು ಅರ್ಥವಾಗಲಿಲ್ಲ. ಮುಖವು ಕಂದಿದೆ. ಮನಸ್ಸಿನಲ್ಲಿ ದುಃಖ ತುಂಬಿಕೊಂಡಿದೆ ಎಂದು ಅರ್ಥವಾಗುತ್ತದೆ. ಏತರಿಂದ ಈ ದುಗುಡ ಬಂದಿತು ಹೇಳು.

KT-257-8/Kannada-8 AT

॥ ರಾಗ ಮಧ್ಯಮಾವತಿ, ತ್ರಿವುಡೆ ತಾಳ ॥

ಹಿಂದೆ ನೀವೆನಗಪ್ರತಿಮ ಭಟ।ನೆಂದ ನುಡಿ ಪುಸಿ ಅಡವಿಯೊಳು ಮ।ಣ್ಣಿಂದ ತವ ವಿಗ್ರಹದನುಗ್ರಹ।ಹೊಂದಿ ಮಿಗಿಲೆನಿಸಿರ್ಪನು। ಏಕಲವ್ಯ ॥

ಅರ್ಜುನ : ಗುರುಗಳೇ, ನನ್ನನ್ನು ಹಿಂದೆ ಅಪ್ರತಿಮ ಬಿಲ್ಗಾರನೆಂದು ನೀವಲ್ಲವೆ ಘೋಷಿಸಿದ್ದು! ಆದರೆ ಸ್ಥಿತಿ ಬೇರೆಯೇ ಇದೆ ಎಂದು ಈಗ ಅರಿವಾಯಿತು. ಹಾಗಾದ ಮೇಲೆ ದುಃಖ ಆವರಿಸದಿದ್ದೀತೇ? ನಿಮ್ಮನ್ನು ಗುರುವೆಂದು ಪರಿಗಣಿಸಿ ಮಣ್ಣಿನ ಬಿಂಬವನ್ನು ಮಾಡಿ ವಿದ್ಯಾರ್ಜನೆ ಮಾಡಿದವನು ಈ ಏಕಲವ್ಯ. ಅವನೀಗ ನನಗಿಂತ ಎಷ್ಟೋ ಹೆಚ್ಚು ಸಮರ್ಥನೆಂದು ಸಾಬೀತುಪಡಿಸಿದ್ದಾನೆ.



॥ ರಾಗ ಆರ್ಯಸವಾಯ್, ಏಕತಾಳ ॥

ಆರಾತನ ನೀ ತೋರಿಸು ಮಾತನು ಮೀರದೆ ನಡೆಯುವೆನೇಳೆನುತ । ಸೇರಲು ಕಣಿವೆಯ ತೀರಕೆ ಗುರುಪದ ಸಾರಸಕೆರಗಿದ ಕೈರಾತ ॥

ದ್ರೋಣಾಚಾರ್ಯ : ಪಾರ್ಥ, ನನಗೆ ಆಶ್ಚರ್ಯವಾಗುತ್ತಿದೆ. ನೀನು ಹೇಳುತ್ತಿರುವುದೇನು? ನನಗೆ ಕಾಡಿನಲ್ಲೊಬ್ಬ ಶಿಷ್ಯನೆ? ಯಾರವನು? ಅವನನ್ನು ತೋರಿಸು ನೋಡೋಣ.

ಅರ್ಜುನ : ಗುರುಗಳೇ, ಹೀಗೆ ಬನ್ನಿ. ಅದೋ ಆ ಕಣಿವೆಯ ತೀರಕ್ಕೆ ಹೋಗಿ ಒಮ್ಮೆ ಚೆನ್ನಾಗಿ ದಿಟ್ಟಿಹರಿಸಿ....

(ಅರ್ಜುನನ ಜೊತೆ ದ್ರೋಣಾಚಾರ್ಯರು ಏಕಲವ್ಯನ ಬಳಿಗೆ ಬರುತ್ತಾರೆ)

ಏಕಲವ್ಯ : ಗುರುವರ್ಯಾ.... ಇಲ್ಲಿಯ ವರೆಗೆ ಚಿತ್ತೈಸಿದಿರಾ.... ಧನ್ಯನಾದೆ... ನಿಮ್ಮ ಪಾದಾರವಿಂದಗಳಲ್ಲಿ ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ...

॥ ರಾಗ ಕಾಂಬೋಧಿ, ಅಷ್ಟ ತಾಳ ॥

ಗುರುವೆ ಮೆಚ್ಚಿರುವಿರೆಂಬುದನು । ವಿದ್ಯೆ । ಕರುಣಿಸಲರಿತೆ ಮೂರ್ತಿಯನು ॥

ನಿರತ ಹಣ್ಣೆಲೆ ಹೂಗಳಿರಿಸಿದೆ ಪ್ರತ್ಯಕ್ಷ । ಪರಿಕಿಸಿದೆನರ್ಚನೆಗಳನು ಸ್ವೀಕರಿಸಬೇಕೆಂದಿತ್ತನೆಲ್ಲವ ॥

ದ್ರೋಣಾಚಾರ್ಯ: ಬಾಲಕ ಎದ್ದೇಳು... ಏನಿದು ವಿಚಿತ್ರ....

ಏಕಲವ್ಯ : ಆಚಾರ್ಯರೇ, ಇಲ್ಲಿ ವಿಚಿತ್ರವೇನೂ ಇಲ್ಲ. ಈ ವರೆಗೆ ತಮ್ಮ ಪ್ರತಿಮೆಯ ಆರಾಧನೆ ಮಾಡಿದೆ. ಸತತ ಶ್ರದ್ಧೆಯಿಂದ ಬಿಲ್ಲುವಿದ್ಯೆಯನ್ನು ಸಾಧಿಸಿದೆ. ಅಪೂರ್ವವಾದ ಶರಸಂಧಾನವೂ ನನಗೆ ಕರಗತವಾಯಿತು. ಮಣ್ಣಿನಿಂದ ಮಾಡಿದ ತಮ್ಮ ಬೊಂಬೆಗೆ ಹೂವುಹಣ್ಣುಗಳಿಂದ ಪೂಜೆ ಸಲ್ಲಿಸುತ್ತಾ ದಿನಗಳೆದೆ. ಇಂದು ನನ್ನ ಭಾಗ್ಯವೆಂಬಂತೆ ತಮ್ಮನ್ನು ಪ್ರತ್ಯಕ್ಷವಾಗಿ ಕಾಣಲು ಸಾಧ್ಯವಾಗಿದೆ. ಬದುಕಿನಲ್ಲಿ ಇದಕ್ಕಿಂತ ಮಿಗಿಲಾದುದು ಈ ಏಕಲವ್ಯನಿಗೆ ದೊರಕುವುದಕ್ಕಿಲ್ಲ ಪ್ರಭೋ... ಇದೋ ಸರ್ವಸ್ವವನ್ನೂ ತಮ್ಮ ಅಡಿದಾವರೆಗಳಿಗೆ ಒಪ್ಪಿಸಿದ್ದೇನೆ.

ದ್ರೋಣಾಚಾರ್ಯ: ಏಕಲವ್ಯ... ನಿನ್ನ ಶ್ರದ್ಧೆಗೆ ಸಾಧನೆಗೆ ತಲೆದೂಗಿದ್ದೇನೆ. ನಿನ್ನ ಬದುಕು ವಿದ್ಯಾರ್ಥಿಗಳಿಗೆಲ್ಲ ಮಾದರಿಯಾಗಲಿ.

## ಉತ್ತರಿಸಿರಿ.

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಏಕಲವ್ಯನು ದ್ರೋಣಾಚಾರ್ಯರ ಬಳಿಗೆ ಹೋಗಲು ಕಾರಣವೇನು?
2. ದ್ರೋಣಾಚಾರ್ಯರನ್ನು ಕಂಡ ಏಕಲವ್ಯನು ಅವರಲ್ಲಿ ಹೇಳಿದ ಮಾತೇನು?
3. ದ್ರೋಣಾಚಾರ್ಯರನ್ನು ಭೇಟಿಯಾಗಿ ಹಿಂದಿರುಗಿದ ಏಕಲವ್ಯನು ತನ್ನ ಬಯಕೆಯನ್ನು ಈಡೇರಿಸಿಕೊಳ್ಳಲು ಏನು ಮಾಡಿದನು?
4. ಅರ್ಜುನನು ದ್ರೋಣಾಚಾರ್ಯರಲ್ಲಿ ತನ್ನ ದುಃಖವನ್ನು ಯಾವ ರೀತಿ ತೋಡಿಕೊಳ್ಳುತ್ತಾನೆ?

## ಪದವಿಂಗಡಣೆ ಮಾಡಿರಿ

ಕೆಳಗೆ ಕೊಟ್ಟಿರುವ ಪದಗಳನ್ನು ವಿಂಗಡಿಸಿ ಬರೆಯಿರಿ.

ಉದಾ : ಮಹಿಮನನು + ಅರಸುತ + ಇಲ್ಲಿ = ಮಹಿಮನನರಸುತಿಲ್ಲಿ

ಪೋಗೆನಲೆಂದನೇಕಲವ್ಯ

ವಿದ್ಯಾರ್ಜನೆಗಿನ್ನಾರಿಹರು

ಶ್ರೇಷ್ಠನಪ್ರತಿಮನೆಂದು

ಕಳುಹಿದನೆಲ್ಲರಂ

ಬೇಟೆಗಣಿಯಾದರು

ಬೊಗಳುತ್ತೈದಲೇಳು

ಬಿಗಿದುದಂಬನೇನನೆಂಬೆನು

## ಪಾತ್ರಚಿತ್ರಣ ಮಾಡಿರಿ

ಏಕಲವ್ಯನ ಸಾಧನೆ ಪಾಠವನ್ನು ಓದಿದಿರಲ್ಲವೇ? ಆ ಭಾಗದಲ್ಲಿ ನಿಮಗೆ ಇಷ್ಟವಾದ ಪಾತ್ರದ ಪಾತ್ರಚಿತ್ರಣ ಮಾಡಿರಿ.

## ಕಥೆ ಬರೆಯಿರಿ

ಏಕಲವ್ಯನ ಸಾಧನೆ ಯಕ್ಷಗಾನ ಪ್ರಸಂಗದಲ್ಲಿನ ಕಥೆಯನ್ನು ಬರೆಯಿರಿ.

## ತಾಳಮದ್ದಳೆ ಮಾಡಿರಿ

ಏಕಲವ್ಯನ ಸಾಧನೆ ಯಕ್ಷಗಾನ ಪ್ರಸಂಗವನ್ನು ಓದಿದಿರಲ್ಲವೇ? ಅಗತ್ಯವಾದ ವ್ಯವಸ್ಥೆಗಳನ್ನು ಮಾಡಿಕೊಂಡು ತರಗತಿಯಲ್ಲಿ ಅದನ್ನು ತಾಳಮದ್ದಳೆ ರೂಪದಲ್ಲಿ ಪ್ರಸ್ತುತಪಡಿಸಿರಿ.

## ಕರಪತ್ರ ತಯಾರಿಸಿರಿ.

ನಿಮ್ಮ ಊರಿನಲ್ಲಿ ಏಕಲವ್ಯನ ಸಾಧನೆ ಯಕ್ಷಗಾನ ತಾಳಮದ್ದಳೆ ನಡೆಯಲಿದೆಯೆಂದು ಭಾವಿಸಿರಿ. ಅದಕ್ಕೆ ಒಂದು ಕರಪತ್ರ ತಯಾರಿಸಿರಿ.

**ಘಟಕ - 6**

# ಪರಸ್ಪರಾವಲಂಬನ

## ಕಲಿಕಾ ಸಾಧನೆಗಳು

- ಕಥೆ, ಕವನ ಮೊದಲಾದ ಸಾಹಿತ್ಯ ಕೃತಿಗಳಲ್ಲಿರುವ ಸೌಂದರ್ಯಾಂಶಗಳನ್ನು ತಿಳಿದುಕೊಂಡು ಸ್ವಂತ ದೃಷ್ಟಿಕೋನದೊಂದಿಗೆ ಮೌಖಿಕವಾಗಿ ಮತ್ತು ಲಿಖಿತವಾಗಿ ಮಂಡಿಸುವುದು.
- ವಿಭಿನ್ನವಾದ ವಿಷಯಗಳಿಗೆ ಸಂಬಂಧಿಸಿದ ಚರ್ಚೆಗಳು, ಸಂವಾದಗಳು ಇತ್ಯಾದಿಗಳಲ್ಲಿ ಭಾಗವಹಿಸಿ ಆಶಯವನ್ನು ನಿರರ್ಗಳವಾಗಿ ಮಂಡಿಸುವುದು.
- ಗದ್ಯ ಮತ್ತು ಪದ್ಯಗಳ ಅರ್ಥವನ್ನು ತಿಳಿದುಕೊಂಡು ನಿರರ್ಗಳವಾಗಿ ಓದುವುದು ಮತ್ತು ಹಾಡುವುದು.
- ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಆಶಯಗಳನ್ನು ಶಿಷ್ಟಭಾಷೆಯಲ್ಲಿ ಬರೆದು ಮಂಡಿಸುವುದು.
- ಸೂಕ್ತವಾದ ಪದ, ಪ್ರಯೋಗ, ಶೈಲಿ ಇತ್ಯಾದಿಗಳನ್ನು ಬಳಸಿಕೊಂಡು ಕಥೆ, ಕವಿತೆ, ನಾಟಕ ಇತ್ಯಾದಿ ವಿವಿಧ ಭಾಷಾವ್ಯವಹಾರ ಪ್ರಕಾರಗಳನ್ನು ರಚಿಸುವುದು ಮತ್ತು ಪರಿಷ್ಕರಿಸಿ ಪ್ರಕಟಿಸುವುದು.
- ಕಲಾ ಪ್ರಾಕಾರಗಳನ್ನು ಆಸ್ವಾದಿಸಿ ಅವುಗಳಿಗೆ ಸಂಬಂಧಿಸಿದ ಟಿಪ್ಪಣಿ, ಪ್ರಬಂಧ ಇತ್ಯಾದಿಗಳನ್ನು ತಯಾರಿಸುವುದು.
- ಗದ್ಯ ಪದ್ಯ ಮೊದಲಾದವುಗಳಲ್ಲಿ ಬಳಕೆಯಾಗಿರುವ ಪದ, ಪ್ರಯೋಗ, ಶೈಲಿ ಇತ್ಯಾದಿಗಳ ಅರ್ಥವನ್ನು ತಿಳಿದುಕೊಂಡು ಹೊಸ ಸಂದರ್ಭಗಳಲ್ಲಿ ಪ್ರಯೋಗಿಸುವುದು.
- ಸೃಜನಾತ್ಮಕ ರಚನೆಗಳಲ್ಲಿರುವ ವಸ್ತು, ಶೈಲಿ ಹಾಗೂ ಆಶಯಗಳನ್ನು ಅರ್ಥೈಸಿಕೊಂಡು ಬೇರೊಂದು ಪ್ರಕಾರಕ್ಕೆ ಬದಲಾಯಿಸುವುದು.

ತಾನು ಎಲ್ಲರಿಗಾಗಿ - ಎಲ್ಲರೂ ತನಗಾಗಿ
ಎಲ್ಲರೊಳಿತಿನ ಕೂಡೆ ನಮ್ಮ ಒಳಿತು
ನಾನು ನೀ - ನೀನು ನಾ ಎಂಬೆರಕ ಭಾವದಲಿ
ಚಿಂತನೆಯ ಮಾಡಿದರೆ ಸುತ್ತ ಬೆಳಕು!

**- ಅಂಬಾತನಯ ಮುದ್ರಾಡಿ**

ಮೇಲೆ ನೀಡಲಾದ ಮುಕ್ತಕವು ನೀಡುವ ಸಂದೇಶವನ್ನು ನಿಮ್ಮ ಮಾತುಗಳಲ್ಲಿ ಬರೆದು ತರಗತಿಯಲ್ಲಿ ಮಂಡಿಸಿರಿ

1

# ದೇವರು ಹಚ್ಚಿದ ದೀಪ



ಮಾನವನೆದೆಯಲಿ ಆರದೆ ಉರಿಯಲಿ
ದೇವರು ಹಚ್ಚಿದ ದೀಪ;
ರೇಗುವ ದನಿಗೂ ರಾಗವು ಒಲಿಯಲಿ
ಮೂಡಲಿ ಮಧುರಾಲಾಪ

ಕೊಲ್ಲಲು ಎತ್ತಿದ ಕೈಗೂ ಗೊತ್ತಿದೆ
ಕೆನ್ನೆಯ ಸವರುವ ಪ್ರೀತಿ;
ಇರಿಯುವ ಮುಳ್ಳಿನ ನಡುವೆಯೆ ನಗುವುದು
ಗುಲಾಬಿ ಹೂವಿನ ರೀತಿ

ಉರಿಯನು ಕಾರುವ ಆಗಸ ತಾರದೆ
ತಂಪನು ತೀಡುವ ಮಳೆಯ?
ಲಾವಾರಸವನು ಕಾರುವ ಧರೆಯೆ
ನೀಡದೆ ಅನ್ನದ ಬೆಳೆಯ?

ಹಮ್ಮುಬಿಮ್ಮುಗಳ ಮರಳುಗಾಡಿನಲಿ
ಎಲ್ಲೋ ಥಣ್ಣನೆ ಚಿಲುಮೆ;
ತಾಪವ ಹರಿಸಿ ಕಾಪಾಡುವುದು
ಒಳಗೇ ಸಣ್ಣಗೆ ಒಲುಮೆ

– ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ



## ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಕನ್ನಡದ ಖ್ಯಾತ ಕವಿ, ವಿಮರ್ಶಕ ಹಾಗೂ ಅನುವಾದಕ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಅಕ್ಟೋಬರ್ ೨೯, ೧೯೩೬ರಂದು ಶಿವಮೊಗ್ಗದಲ್ಲಿ ಜನಿಸಿದರು. ಇವರ ತಂದೆ ನೈಲಾಡಿ ಶಿವರಾಮ ಭಟ್ಟ. ತಾಯಿ ಮೂಕಾಂಬಿಕೆ. ಇವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿಯೂ ಕನ್ನಡ ಅಧ್ಯಯನ ಕೇಂದ್ರದ ಡೈರೆಕ್ಟರರಾಗಿಯೂ ಆರ್ಟ್ಸ್ ಫ್ಯಾಕಲ್ಟಿಯ ಡೀನ್ ಆಗಿಯೂ ಸೇವೆ ಸಲ್ಲಿಸಿದ್ದಾರೆ.

ವೃತ್ತ, ಸುಳಿ, ಚಿತ್ರಕೂಟ, ಹೊಳೆಸಾಲಿನ ಮರ, ದೀಪಿಕಾ, ಭಾವಸಂಗಮ ಮುಂತಾದವು ಇವರ ಪ್ರಸಿದ್ಧ ಕವನ ಸಂಕಲನಗಳು. ಇವರು ಖ್ಯಾತ ಆಂಗ್ಲ ಕವಿ ಷೇಕ್ಸ್‌ಪಿಯರ್‌ನ ಐವತ್ತು ಸಾನೆಟ್ಟ್‌ಗಳನ್ನು ಕನ್ನಡಕ್ಕೆ ಅನುವಾದಿಸಿ ಸುನೀತ ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ಅದೇ ರೀತಿ ಆಂಗ್ಲ ಕವಿ ಯೇಟ್ಸ್‌ನ ಐವತ್ತು ಕವನಗಳನ್ನು ಅನುವಾದಿಸಿ ಚಿನ್ನದ ಹಕ್ಕಿ ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. 'ನೀಲಾಂಜನ' ಎಂಬುದು ಅವರ ಅಭಿನಂದನ ಗ್ರಂಥ. ಕಿಶೋರಿ ಎಂಬ ಮಕ್ಕಳ ಕೃತಿಗೆ ಎನ್.ಸಿ.ಆರ್.ಟಿ. ಪ್ರಶಸ್ತಿ ಲಭಿಸಿದೆ. ಹೊರಳು ದಾರಿಯಲ್ಲಿ, ಕಾವ್ಯನಂದನ ಹಾಗೂ ಚಿನ್ನದ ಹಕ್ಕಿ ಎಂಬ ಮೂರು ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇವರು ಸಂಪಾದಿಸಿರುವ ಸಂತಶಿಶುನಾಳ ಶರೀಫ ಸಾಹೇಬರ ಪದ್ಯಗಳು ಹಾಗೂ ಮಕ್ಕಳ ಪದ್ಯಗಳಿರುವ ಧ್ವನಿ ಸುರುಳಿಗಳು ಜನಪ್ರಿಯವಾಗಿವೆ. ಕನ್ನಡ ಭಾವಗೀತೆಗಳ ಧ್ವನಿಸುರುಳಿಗಳ ಜಗತ್ತಿನಲ್ಲಿ ಲಕ್ಷ್ಮೀನಾರಾಯಣ ಭಟ್ಟರ ಹೆಸರು ಪ್ರಸಿದ್ಧವಾದುದು.

'ದೇವರು ಹಚ್ಚಿದ ದೀಪ' ಕವನವನ್ನು ಅವರ ಭಾವಗೀತೆಗಳ ಸಮಗ್ರ ಸಂಕಲನವಾದ ಗೀತಭಾರತಿಯಿಂದ ಆಯ್ದುಕೊಳ್ಳಲಾಗಿದೆ.

### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ದೇವರು ಹಚ್ಚಿದ ದೀಪದಿಂದ ಮಾನವನೆದೆಯಲ್ಲಿ ಏನು ಮೂಡಬೇಕೆಂದು ಕವಿ ಬಯಸುತ್ತಾರೆ?
2. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಳ್ಳೆಯ ಹಾಗೂ ಕೆಟ್ಟ ಸ್ವಭಾವಗಳಿವೆ ಎಂಬುದನ್ನು ಕವನದ ಯಾವ ಸಾಲುಗಳಲ್ಲಿ ಹೇಳಲಾಗಿದೆ?
3. ಕವಿ ಪ್ರಕೃತಿಯಲ್ಲಿ ಕಂಡುಕೊಂಡಿರುವ ವಿಭಿನ್ನ ಗುಣಗಳು ಯಾವುವು?
4. ಪ್ರೀತಿಯನ್ನು ಕವಿ ಯಾವುದಕ್ಕೆ ಹೋಲಿಸುತ್ತಾರೆ?

### ಕಾರಣ ಕೊಡಿರಿ

- 'ದೇವರು ಹಚ್ಚಿದ ದೀಪ' ಕವನದಲ್ಲಿ ನಿಮಗೆ ಇಷ್ಟವಾದ ಸಾಲುಗಳನ್ನು ಗುರುತಿಸಿ ಇಷ್ಟವಾದುದಕ್ಕೆ ಕಾರಣವನ್ನು ಬರೆಯಿರಿ.

### ಆಶಯ ಬರೆಯಿರಿ.

- 'ದೇವರು ಹಚ್ಚಿದ ದೀಪ' ಕವನದ ಆಶಯವನ್ನು ಬರೆಯಿರಿ.

### ಸ್ವಾರಸ್ಯ ಬರೆಯಿರಿ.

- ಕೆಳಗೆ ಕೊಡಲಾದ ಕವನದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಕೊಲ್ಲಲು ಎತ್ತಿದ ಕೈಗೂ ಗೊತ್ತಿದೆ<br>
ಕೆನ್ನೆಯ ಸವರುವ ಪ್ರೀತಿ;<br>
ಇರಿಯುವ ಮುಳ್ಳಿನ ನಡುವೆಯೆ ನಗುವುದು<br>
ಗುಲಾಬಿ ಹೂವಿನ ರೀತಿ!

### ಹೋಲಿಸಿರಿ

- ಕೆಳಗೆ ಕೊಡಲಾದ ಕವನದ ಆಶಯವನ್ನು 'ದೇವರು ಹಚ್ಚಿದ ದೀಪ' ಕವನದ ಆಶಯದೊಂದಿಗೆ ಹೋಲಿಸಿ ಟಿಪ್ಪಣಿ ಬರೆಯಿರಿ.

ಸುರಿಯಲೀ... ತಂಪೆರೆಯಲೀ<br>
ಜೀವನ ಪ್ರೀತಿಯ ಮಳೇ ॥<br>
ಹರಿಯಲೀ ಭೋರ್ಗರೆಯಲೀ<br>
ಬತ್ತಿದೆದೆಗಳಲಿ ಹೊಳೆ ॥<br>
ಕೊಚ್ಚಿಹೋಗಲಿ ಸ್ವಾರ್ಥ ದುರಾಸೆ<br>
ಸ್ವಚ್ಛವಾಗಲಿ ಇಳೆ ॥<br>
ಚಿಮ್ಮಲಿ ಹಚ್ಚನೆ ಹಸಿರು<br>
ನಿರ್ಮಲವಾಗಲಿ ಉಸಿರು<br>
ಮತ್ತೆ ಆಗಲೀ ವಸುಂಧರೆ<br>
ಸಕಲ ಜೀವಿಗಳಿಗಾಸರೇ ॥<br>
ತೊನೆಯಲಿ ತೆನೆ ಹೊಂದೇರು<br>
ಅಡಗಲಿ ಹಸಿವಿನ ಚೀರು<br>
ಅರಳಲಿ ಎಲ್ಲಡೆ ಹೂನಗೆ<br>
ಹಾಯೆನಿಸಲಿ ಭೂತಾಯಿಗೆ.

2

# ವಿಶೇಷ ಬಹುಮಾನ

"ಬೇಗ ಹೋಗಿ ಐದನೆಯ ತರಗತಿಯಿಂದ ತಪನ್‌ನನ್ನು ಕರೆದುಕೊಂಡು ಬಾ" ಮುಖ್ಯೋಪಾಧ್ಯಾಯರು ಚೌಕೀದಾರನಿಗೆ ಅಪ್ಪಣೆ ಮಾಡಿದರು.

ತಪನ್ ಪದುಮಣಿ ಗ್ರಾಮದ ಗುಮಾಸ್ತೆ ರತನ್‌ನ ಎರಡನೆಯ ಮಗ. ಸ್ವಲ್ಪ ತೆಳ್ಳಗೇ ಇದ್ದರೂ ಅವನು ಬಲಶಾಲಿ, ಸ್ವಲ್ಪ ಕಪ್ಪು ಬಣ್ಣ, ಹೊಳೆಯುವ ಕಣ್ಣುಗಳು, ಓದಿನಲ್ಲೇನೋ ಬುದ್ಧಿವಂತನೆ. ಆದರೆ ಮನೆಯಲ್ಲೂ ಹೊರಗಡೆಯಲ್ಲೂ ಅವನ ತುಂಟತನಕ್ಕೆ ಕೊನೆಯೇ ಇಲ್ಲ. ಯಾವಾಗಲೂ ಏನಾದರೂ ಗಲಾಟೆಗೆ ಸಿಕ್ಕಿರುವವನೇ. ಆದರೂ ಅವನೇ ಜಗಳವನ್ನು ಪ್ರಾರಂಭ ಮಾಡಿದ್ದು ಎಂದೂ ಇಲ್ಲ ಎನ್ನುವುದನ್ನು ಒಪ್ಪಿಕೊಳ್ಳಬೇಕು. ಆದರೆ ಯಾರಾದರೂ ರೇಗಿಸಿದರೆ ಅವರು ಕೊಟ್ಟದ್ದನ್ನು ತಿರುಗಿಸಿ ಕೊಡದೆ ಬಿಡುವವನಲ್ಲ. ತನ್ನ ವಯಸ್ಸಿನ ಹುಡುಗರ ಗುಂಪಿಗೆ ಅವನೇ ನಾಯಕ. ಅವರ ಪರವಾಗಿ ಕೈಎತ್ತಲು ಸದಾ ಅವನು ಸಿದ್ಧ. ಅವನ ಜೊತೆಯವರಿಗೆಲ್ಲ ಅವನಲ್ಲಿ ಪ್ರೀತಿ, ಗೌರವ.

ಅವನು ಜ್ಞಾನಪೀಠ ಹೈಸ್ಕೂಲಿಗೆ ಬಂದು ಇನ್ನೂ ಒಂದೇ ತಿಂಗಳಾಗಿತ್ತು. ಆಗಲೇ ಅವನ ಮೇಲೆ ದೂರಿತ್ತು. ಪದುಮಣಿ ಹಳ್ಳಿಯ ವ್ಯಾಪಾರಿ ಹರೇನ್, "ತಪನ್ ಮತ್ತು ಇನ್ನು ಕೆಲವರು ಹುಡುಗರು ಪ್ರಚೋದನೆಯೇ ಇಲ್ಲದೆ ಹಿಂದಿನ ದಿನ ಸಂಜೆ ತನ್ನ ಅಂಗಡಿಯ ಮೇಲೆ ಕಲ್ಲುಗಳನ್ನು ಎಸೆದರು. ತಪನ್ ಈ ಗುಂಪಿನ ಮುಖಂಡನಾಗಿದ್ದ" ಎಂದು ದೂರುಕೊಟ್ಟಿದ್ದ.

ತಪನ್ ಚೌಕೀದಾರನ ಜೊತೆಗೆ ಬಂದ. ಹೆದರಿಕೆಯಿಂದ ಮುಖ್ಯೋಪಾಧ್ಯಾಯರ ಕಡೆ ಕಣ್ಣುಹೊರಳಿಸಿ ತಲೆಬಗ್ಗಿಸಿ ನಿಂತ. ತಮ್ಮ ಬೆತ್ತವನ್ನು ಆಡಿಸುತ್ತ ಮುಖ್ಯೋಪಾಧ್ಯಾಯರು ಕೇಳಿದರು, "ನೀನೇ ತಪನ್, ಅಲ್ಲವೇ?"

"ಹೌದು ಸರ್" ತಪನ್ ಮರ್ಯಾದೆಯಿಂದ ಉತ್ತರಕೊಟ್ಟ.

ಅಂಗಡಿಯವನ ಕಡೆ ಬೆರಳು ತೋರಿಸುತ್ತಾ ಮುಖ್ಯೋಪಾಧ್ಯಾಯರು, "ನಿನಗೆ ಇವರು ಗೊತ್ತೇ?" ಎಂದು ಕೇಳಿದರು.

"ಗೊತ್ತು ಸರ್. ಅವರು ನಮ್ಮ ಹಳ್ಳಿಯಲ್ಲಿ ಇದ್ದಾರೆ"

“ಸರಿ. ನೀನೂ ನಿನ್ನ ಸ್ನೇಹಿತರೂ ನಿನ್ನೆ ಸಂಜೆ ಅವರ ಅಂಗಡಿಯ ಮೇಲೆ ಕಲ್ಲುಹೊಡೆದಿರಿ ಎನ್ನುವುದು ನಿಜವೇ?”

“ನಿಜ ಸರ್. ರತನ್ ಮತ್ತು ಇತರರ ಜೊತೆಗೆ ನಾನು ಕಲ್ಲುಹೊಡೆದದ್ದು ನಿಜ”

“ಯಾಕೆ? ಯಾಕೆ ಹಾಗೆ ಮಾಡಿದೆ? ಉತ್ತರ ಕೊಡು” ಮುಖ್ಯೋಪಾಧ್ಯಾಯರು ಗುಡುಗಿದರು.

“ಸರ್, ಈ ಮನುಷ್ಯ ಮೋಸ ಮಾಡುತ್ತಾರೆ. ಹೆಚ್ಚಿಗೆ ಬೆಲೆ ತೆಗೆದುಕೊಳ್ಳುತ್ತಾರೆ. ಸಾಮಾನು ಕಡಿಮೆ ಕೊಡುತ್ತಾರೆ. ಅಲ್ಲದೆ, ಅವರು ಹೊಸ ರೀತಿಯ ಕಾಗದದ ಚೀಲವೊಂದನ್ನು ಉಪಯೋಗಿಸುವುದಕ್ಕೆ ಪ್ರಾರಂಭಿಸಿದ್ದಾರೆ. ಅದಕ್ಕೆ ಕೆಳಭಾಗದಲ್ಲಿ ಮೆತ್ತಗಿನ ತಟ್ಟೆ ಇದೆ. ನಿನ್ನೆ ನಾವು ಅವರ ಅಂಗಡಿಯಲ್ಲಿ ಒಂದು ಕಿಲೊ ಬೇಳೆ ಕೊಂಡುಕೊಂಡೆವು. ಮನೆಗೆ ಹೋಗಿ ತೂಕ ಮಾಡಿದರೆ ಎಂಟುನೂರೇ ಗ್ರಾಮ್ ಇತ್ತು. ಚೀಲದೊಳಗಿನ ಮೆತ್ತಗಿನ ತಟ್ಟೆ ಐವತ್ತು ಗ್ರಾಮ್ ತೂಕ. ಒಂದು ನೂರ ಐವತ್ತು ಗ್ರಾಮ್ ಕಡಿಮೆ ತೂಕ ತೂಗಿದ್ದರು. ಇದು ಹಳ್ಳಿಯಲ್ಲಿ ಎಲ್ಲರಿಗೂ ಗೊತ್ತು. ನಾನು ನಿನ್ನೆ ಅವರ ಅಂಗಡಿಗೆ ಹೋಗಿ ಕೇಳಿದರೆ ಬಯ್ದು ಅಂಗಡಿಯಿಂದ ಓಡಿಸಿಬಿಟ್ಟರು. ಅದಕ್ಕೋಸ್ಕರವೇ ನಾನೂ ಇತರ ಹುಡುಗರೂ ಅವರ ಅಂಗಡಿಗೆ ಕಲ್ಲು ಎಸೆದೆವು”

ಮುಖ್ಯೋಪಾಧ್ಯಾಯರು ಅಂಗಡಿಯವನ ಕಡೆ ನೋಡಿದರು. ಅವನ ಮುಖ ಕೆಂಪಗಾಗಿಹೋಗಿತ್ತು.

ಮುಖ್ಯೋಪಾಧ್ಯಾಯರು ಸ್ವಲ್ಪ ಹೊತ್ತು ಯೋಚನೆ ಮಾಡಿದರು. ಅನಂತರ ತಪನ್ ಕಡೆ ತಿರುಗಿ “ಆದರೂ, ನೀನು ಮಾಡಿದ್ದು ಸರಿಯಲ್ಲ. ಇತರರ ಆಸ್ತಿಗೆ ನಷ್ಟ ಮಾಡೋದು ತಪ್ಪು. ವ್ಯಾಪಾರಿ ಮೋಸ ಮಾಡಿದರೆ ಅದನ್ನು ಸರ್ಕಾರ ಅಥವಾ ಗ್ರಾಮ ಪಂಚಾಯತಿನವರು ವಿಚಾರಿಸಿಕೊಳ್ಳಬೇಕು. ಅದಕ್ಕೂ ನಿನಗೂ ಸಂಬಂಧವಿಲ್ಲ. ಕೈಹಿಡಿ!” ಎಂದರು. ತಪನ್‌ಗೆ ಬೆತ್ತದಿಂದ ಐದು ಏಟುಗಳು ಬಿದ್ದವು. ಅವನು ತರಗತಿಗೆ ಹಿಂತಿರುಗಿದಾಗ ಇತರ ಹುಡುಗರು ಕಣ್ಣಂಚಿನಿಂದ ಅವನನ್ನು ನೋಡಿ ಮುಸುಮುಸು ನಕ್ಕರು.

ಕೆಲವು ದಿನಗಳ ನಂತರ ಇನ್ನೊಂದು ಘಟನೆ ನಡೆಯಿತು. ಆ ಪ್ರದೇಶದಲ್ಲೆಲ್ಲ ಗಾಬರಿ ಹುಟ್ಟಿಸುತ್ತಿದ್ದ ಒಂದು ಎತ್ತಿಗೆ ಸಂಬಂಧಿಸಿದ್ದು ಅದು. ಅನೇಕರಿಗೆ ರಕ್ತ ಬರುವ ಹಾಗೆ ಅದು ತಿವಿದಿತ್ತು. ಯಾರಾದರೂ ಅದರ ಹತ್ತಿರ ಹೋದರೆ ಸಾಕು ಮೈಮೇಲೆ ಹಾಯುತ್ತಿತ್ತು. ಅದನ್ನು ಕಂಡರೆ ಎಲ್ಲರಿಗೂ ಹೆದರಿಕೆ.




ಈ ಪ್ರಾಣಿಯು ಅಹಂಕಾರ ತಪನ್‌ನ ಕೆಚ್ಚನ್ನು ಕೆಣಕಿತು. "ತಾಳು ತಾಳು, ಗೋಳಾಡಿಸೋ ದುಷ್ಟ! ನಿನ್ನನ್ನು ಪಳಗಿಸುತ್ತೇನೆ" ಎಂದು ಮೆಲುದನಿಯಲ್ಲಿ ಹೇಳಿಕೊಂಡ. ಶಾಲೆಯಲ್ಲಿ ಮಧ್ಯೆ ಬಿಡುವು ಕೊಟ್ಟಾಗ ಒಂದು ದೊಣ್ಣೆ ಮತ್ತು ಒಂದು ಹಗ್ಗವನ್ನು ತೆಗೆದುಕೊಂಡು ನಿಧಾನವಾಗಿ ಅದರ ಹತ್ತಿರ ಹೋದ. ಸರಿಯಾದ ಅವಕಾಶ ನೋಡಿಕೊಂಡು ಅದರ ಮೇಲೆ ಹಾರಿದ. ಕುದುರೆಗೆ ಲಗಾಮು ಹಾಕುವ ಹಾಗೆ ಅದರ ಬಾಯಿಗೆ ಹಗ್ಗ ಸೇರಿಸಿ ಬಿಟ್ಟ. ಎತ್ತು ಚಕಿತಗೊಂಡಿತು. ಅದರ ಬೆನ್ನಮೇಲೆ ಭಾರವಿದ್ದದ್ದು ಗೊತ್ತಾದ ಕ್ಷಣವೇ ನೆಲವನ್ನು ಒದ್ದು ಬಗ್ಗಲಾರಂಭಮಾಡಿತು. ತನ್ನನ್ನು ಗೋಳಾಡಿಸುವ ಮನುಷ್ಯನನ್ನು ಕೆಳಕ್ಕೆ ಬೀಳಿಸಬಹುದೆಂಬ ಆಸೆಯಿಂದ ನಾಗಾಲೋಟ ಪ್ರಾರಂಭಿಸಿತು. ಇಷ್ಟು ಹೊತ್ತಿಗೆ ಶಾಲೆಯ ಬಿಡುವು ಮುಗಿದು ಹೋಯಿತು. ತರಗತಿ ಮತ್ತೆ ಪ್ರಾರಂಭವಾಯಿತು. ಆದರೆ ತಪನ್ ಎತ್ತನ್ನು ಪಳಗಿಸುವುದರಲ್ಲೆ ತನ್ಮಯನಾಗಿದ್ದ. ಹಗ್ಗವನ್ನು ಬಿಗಿಯಾಗಿ ಹಿಡಿದುಕೊಂಡು ಮೈಯನ್ನು ಎತ್ತಿಹಾಕುತ್ತ, ಬಾಗುತ್ತಿದ್ದ ಎತ್ತಿನ ಬೆನ್ನಿನ ಮೇಲೆ ಭದ್ರವಾಗಿ ಕುಳಿತೇ ಇದ್ದ. ಎತ್ತಿನ ಬೆನ್ನನ್ನು ಸವರಿದ. ಇದರಿಂದ ಎತ್ತಿಗೆ ಇನ್ನೂ ರೇಗಿತು. ಅದು ಶಾಲೆಯ ಕಂಪೌಂಡಿನೊಳಕ್ಕೆ ರಭಸದಿಂದ ನುಗ್ಗಿತು. ಅಲ್ಲಿಂದ ಏಳನೆಯ ತರಗತಿಯೊಳಕ್ಕೆ ನುಗ್ಗಿತು. ಉಪಾಧ್ಯಾಯರೂ ವಿದ್ಯಾರ್ಥಿಗಳೂ ಕಲ್ಲಿನಂತಾಗಿ ಬಿಟ್ಟರು. ಅನಂತರ ಒಬ್ಬರನ್ನೊಬ್ಬರು ನೂಕುತ್ತ ತರಗತಿಯಿಂದ ಹೊರಕ್ಕೆ ಹೋಗಲು ದಿಕ್ಕುಪಾಲಾದರು. ನೂಕುನುಗ್ಗಲಿನಲ್ಲಿ ಅನೇಕರು ಮುಗ್ಗರಿಸಿ ಬಿದ್ದುಬಿಟ್ಟರು. ಉಪಾಧ್ಯಾಯ ರಜನಿ ಸಹಾರಿ ಹೊರಕ್ಕೆ ಓಡಿ ಗಾಯವಾಗದಂತೆ ತಪ್ಪಿಸಿಕೊಂಡರು. ಹುಚ್ಚಾಪಟ್ಟೆ ಕುಣಿಯುತ್ತಿದ್ದ ಪ್ರಾಣಿಯ ಕೊಂಬುಗಳಿಂದ ಹಲವು ಕಿಟಕಿಗಳ ಗಾಜುಗಳು ಚೂರಾಗಿಬಿಟ್ಟವು. ಕಟ್ಟಕಡೆಗೆ ದಿಕ್ಕುಗಾಣದ ಎತ್ತು ಅರಚುತ್ತ ಶಾಲೆಯ ಮೈದಾನಕ್ಕೆ ಓಡಿ ಒಂದು ಪಕ್ಕಕ್ಕೆ ಬಿದ್ದುಕೊಂಡಿತು. ಕೆಲವು ಕ್ಷಣಗಳ ಅನಂತರ ಅದು ಎದ್ದು ಜೀವ ಉಳಿಸಿಕೊಳ್ಳುವುದಕ್ಕೋಸ್ಕರ ನಾಗಾಲೋಟ ಓಡಿತು.

ತಪನ್ ಮೇಲೆ ಮತ್ತೊಂದು ದೂರು ದಾಖಲಾಯಿತು. ಮುಖ್ಯೋಪಾಧ್ಯಾಯರು ಮತ್ತೆ ತಪನ್‌ನನ್ನು ಕರೆಸಿದರು.

"ನೀನೊಬ್ಬ ಕೆಟ್ಟ ಹುಡುಗ! ಎತ್ತನ್ನ ತರಗತಿಯೊಳಕ್ಕೆ ಯಾಕೆ ಕರೆದುಕೊಂಡು ಬಂದೆ?" ಎಂದು ಗದರಿಸಿದರು.

ತಲೆಯನ್ನು ತಗ್ಗಿಸಿಕೊಂಡು ತಪನ್ "ಸರ್, ನಾನು ಎತ್ತನ್ನು ತರಗತಿಯೊಳಕ್ಕೆ ಕರೆದುಕೊಂಡು ಬರಲಿಲ್ಲ. ಅದನ್ನು ಪಳಗಿಸೋದಕ್ಕೋಸ್ಕರ ನಾನು ಅದರ ಬೆನ್ನಮೇಲೆ ಸವಾರಿ ಮಾಡುತ್ತಿದ್ದೆ. ಅದು ಇದ್ದಕ್ಕಿದ್ದ ಹಾಗೆ ಕೊಠಡಿಯೊಳಕ್ಕೆ ನುಗ್ಗಿಬಿಟ್ಟಿತು" ಎಂದು ಉತ್ತರ ಕೊಟ್ಟ.



"ಶಾಲೆ ನಡೆಯುವ ಹೊತ್ತಿನಲ್ಲಿ ಎತ್ತಿನ ಸವಾರಿ ಮಾಡೋದಕ್ಕೆ ನಿನಗೆ ಯಾರು ಹೇಳಿದರು? ಹಿಡಿ ಕೈಯನ್ನ"

ಮುಖ್ಯೋಪಾಧ್ಯಾಯರ ಬೆತ್ತದ ಹದಿನೈದು ಏಟುಗಳನ್ನು ತಪನ್ ತಿನ್ನಬೇಕಾಯಿತು. ಮತ್ತೆ ಅವನ ತರಗತಿಯ ಹುಡುಗರೆಲ್ಲ ಮುಸುಮುಸು ನಕ್ಕರು. ಅವನನ್ನ ಗೇಲಿ ಮಾಡಿದರು. ಶಾಲೆಯ ಕೆಟ್ಟ ಹುಡುಗ ಎಂದು ಅವನಿಗೆ ಹೆಸರಾಯಿತು.

ಒಂದು ದಿನ ಸಂಜೆ ಮುಖ್ಯೋಪಾಧ್ಯಾಯರು ಶಾಲೆಯಿಂದ ಮನೆಗೆ ಬಂದು ಟೀ ಕುಡಿದು ಅಡ್ಡಾಡಲು ಹೊರಟರು. ಇದು ಅವರ ನಿತ್ಯದ ರೂಢಿ. ಅವರು ಹಿಂದಕ್ಕೆ ಬರುತ್ತಿದ್ದಾಗ ಕತ್ತಲಾಗುತ್ತಿತ್ತು. ಆಗ ಶಾಲೆಯ ಕೆಟ್ಟ ಹುಡುಗ ಅವರ ಕಣ್ಣಿಗೆ ಬಿದ್ದ. ತಪನ್ ಒಬ್ಬ ಮುದುಕ ಭಿಕ್ಷುಕಿಯ ಕೈ ಹಿಡಿದುಕೊಂಡು ನಡೆಸುತ್ತಿದ್ದ. ಅವನ ತಲೆಯ ಮೇಲೆ ಅವಳ ಭಿಕ್ಷಾಟನೆ ಬುಟ್ಟಿ ಇತ್ತು. ಪಕ್ಕದಲ್ಲೇ ಅವನ ತರಗತಿಯ ಇಬ್ಬರು ಹುಡುಗರು ಅವನನ್ನು ಲೇವಡಿ ಮಾಡುತ್ತಾ ಹೆಜ್ಜೆ ಹಾಕುತ್ತಿದ್ದರು. ಮುಂದೆ ನರೇನ್, ಹಿಂದೆ ಮಹೇಶ್. ಮುದುಕಿಗೆ ಜ್ವರ ಕಾಯುತ್ತಿತ್ತು. ಅವಳು ಬುಟ್ಟಿಯನ್ನು ಹೊತ್ತುಕೊಂಡು ಓಡಾಡುವುದಿರಲಿ, ನಡೆಯುವುದೇ ಅವಳಿಗೆ ಕಷ್ಟವಾಗಿತ್ತು. ಅವಳ ಅವಸ್ಥೆಯನ್ನು ನೋಡಿ ತಪನ್ ಅವಳ ಬುಟ್ಟಿಯನ್ನು ತಲೆಯ ಮೇಲಿಟ್ಟುಕೊಂಡು ಅವಳ ಕೈ ಹಿಡಿದುಕೊಂಡು "ಅಜ್ಜಿ, ನನ್ನ ಕೈ ಹಿಡಿದುಕೋ. ನಾನು ನಿನ್ನನ್ನು ಮನೆಗೆ ಸೇರಿಸುತ್ತೇನೆ" ಎಂದಿದ್ದ.

ನರೇನ್ ಮತ್ತು ಮಹೇಶ್ ಮುಖ್ಯೋಪಾಧ್ಯಾಯರನ್ನು ಕಂಡು ನಮಸ್ಕಾರ ಮಾಡಿದರು. ಮುಖ್ಯೋಪಾಧ್ಯಾಯರೇ ತಪನ್‌ನ ಒಂದು ಕೆಟ್ಟ ಕೆಲಸವನ್ನು ಕಣ್ಣಾರೆ ನೋಡುತ್ತಿದ್ದಾರೆ ಎಂದು ಖುಷಿಯಾಗಿ ತಿರಸ್ಕಾರದಿಂದ ತಪನ್ ಕಡೆ ನೋಡಿದರು.

ಮುಖ್ಯೋಪಾಧ್ಯಾಯರು ಪ್ರಶ್ನಿಸಿದಾಗ ಮುದುಕಿಯು ತಪನ್ ಅವಳಿಗೆ ಸಹಾಯ ಮಾಡಲು ತಾನೇ ಮುಂದಕ್ಕೆ ಬಂದುದನ್ನು ಹೇಳಿದಳು. ಅವಳ ಧ್ವನಿ ನಡುಗುತ್ತಿತ್ತು. ತಪನ್ ಕಡೆ ತೋರಿಸಿ ಅವಳು, "ಈ ಪ್ರೀತಿಯ ಹುಡುಗ ಅಲ್ಲಿ ಇಲ್ಲದೆ ಹೋಗಿದ್ದರೆ ನಾನಿನ್ನೂ ರಸ್ತೆಯಲ್ಲಿ ಬಿದ್ದಿರುತ್ತಿದ್ದೆ. ದೇವರು ಅವನಿಗೆ ಎಲ್ಲ ರೀತಿಯ ಒಳ್ಳೆಯದನ್ನು ಮಾಡಲಿ. ಈ ಇಬ್ಬರು ಹುಡುಗರೂ ನನಗೆ ಎಷ್ಟು ಕಾಯಿಲೆ ಆಗಿದೆ ಅನ್ನುವುದನ್ನು ನೋಡಿದರು. ಆದರೆ ನನಗೆ ಸಹಾಯ ಮಾಡುವುದಿರಲಿ, ಈ ಮುದ್ದು ಹುಡುಗನನ್ನು ಗೇಲಿ ಮಾಡುತ್ತಿದ್ದಾರೆ. ಅಂತಃಕರಣವೇ ಇಲ್ಲ ಅವರಿಗೆ" ಎಂದಳು. ಮುದುಕಿಗೆ ಉಸಿರಾಡುವುದೇ ಕಷ್ಟವಾಯಿತು. ಮುಖ್ಯೋಪಾಧ್ಯಾಯರು ನರೇನನ್ನೂ ಮಹೇಶನನ್ನೂ ಗದರಿಸಿ ಕಳುಹಿಸಿದರು. ಮುದುಕಿಯನ್ನು ಅವಳ ಮನೆಗೆ ಕರೆದುಕೊಂಡು ಹೋಗುವ ಹಾಗೆ ತಪನ್‌ಗೆ ಹೇಳಿದರು.

ಎರಡು ವಾರಗಳ ನಂತರ ಒಂದು ದಿನ ಮುಖ್ಯೋಪಾಧ್ಯಾಯರು ಸುತ್ತಾಟ ಮುಗಿಸಿಕೊಂಡು ಮನೆಗೆ ಹಿಂದಿರುಗುತ್ತಿದರು. ರಸ್ತೆಯಲ್ಲಿ ಆ ಎತ್ತೇ ಕಾಲು ಮುರಿದುಕೊಂಡು ಮಲಗಿತ್ತು. ಪಕ್ಕದಲ್ಲಿ ತಪನ್ ಮೊಣಕಾಲೂರಿ ಕುಳಿತುಕೊಂಡು ಗಾಯವಾದ ಅದರ ಕಾಲಿಗೆ ಔಷಧ ಉಜ್ಜುತ್ತ ಬ್ಯಾಂಡೇಜ್ ಕಟ್ಟುತ್ತಿದ್ದ. ಅವನ ಕಣ್ಣುಗಳಲ್ಲಿ ನೀರಿತ್ತು. ಮುಖ್ಯೋಪಾಧ್ಯಾಯರು ಅವನ ಹತ್ತಿರವೇ ಬಂದು ನಿಂತಾಗ ಅವನು ಬೆಚ್ಚಿಬಿದ್ದ. ಕೈಜೋಡಿಸಿ ಮುಖ್ಯೋಪಾಧ್ಯಾಯರಿಗೆ ನಮಸ್ಕರಿಸಿದ. "ಇಲ್ಲೇನು ಮಾಡುತ್ತಿರುವಿ, ತಪನ್?" ಮುಖ್ಯೋಪಾಧ್ಯಾಯರು ಕೇಳಿದರು.

"ಸರ್, ಯಾರೋ ಕೆಟ್ಟ ಹುಡುಗರು ಎತ್ತಿನ ಕಾಲನ್ನು ಮುರಿದುಬಿಟ್ಟಿದ್ದಾರೆ. ಅದು ತುಂಬ ನೋವನ್ನು ಅನುಭವಿಸುತ್ತಿದೆ. ಸರ್, ಮೂಕಪ್ರಾಣಿಗಳನ್ನು ನೋಯಿಸೋದು ತಪ್ಪಲ್ಲವೇ?" ವಿಷಾದದಿಂದ ತಪನ್ ಪ್ರಶ್ನಿಸಿದ.

"ಇದು ಕೆಟ್ಟ ಪ್ರಾಣಿ. ಪಳಗಿಸಬೇಕು ಅಂತ ಹೇಳಿ ನೀನು ಆವತ್ತು ಇದೇ ಎತ್ತನ್ನ ಸವಾರಿ ಮಾಡಿದೆ ಅಲ್ಲವೇ? ನಿನ್ನ ಕಣ್ಣಿನಲ್ಲಿ ಅದೇ ಇವತ್ತು ಇಷ್ಟೊಂದು ಒಳ್ಳೆಯದಾದದ್ದು ಹೇಗೆ?"

"ಸರ್, ಇದು ಬಹಳ ಕೆಟ್ಟ ಪ್ರಾಣಿಯೇ ಆಗಿತ್ತು. ಆದರೆ ನಾನು ಅದನ್ನು ಸವಾರಿ ಮಾಡಿದ ದಿನದಿಂದ ತಿದ್ದಿಕೊಂಡಿದೆ. ಜನರಿಗೆ ಹಾಯುವುದಿಲ್ಲ. ಅಷ್ಟೇ ಅಲ್ಲ, ಅವರಿಗೆ ದಾರಿ ಬಿಡುತ್ತೆ. ಆದ್ದರಿಂದ ಅವರು ಅದಕ್ಕೆ ಕೆಡುಕು ಮಾಡಬಾರದಾಗಿತ್ತು. ಅದು ಯಾತನೆಪಡ್ತಾ ಇದೆ. ನಾನು ಕೆಲವು ಔಷಧದ ಎಲೆಗಳನ್ನು ಅರೆದು ಇದರ ಕಾಲಿಗೆ ಕಟ್ಟಿದ್ದೇನೆ. ಗಾಯಗಳಿಗೆ ಇದು ಬಹಳ ಒಳ್ಳೆಯದು ಅಂತ ನಮ್ಮ ತಂದೆ ಹೇಳುವುದನ್ನು ಕೇಳಿದ್ದೇನೆ ಸರ್" ತಪನ್ ಹೇಳಿದ. ಎತ್ತಿಗಾಗಿ ಅವನ ಹೃದಯದಲ್ಲಿ ಅನುಕಂಪ ತುಂಬಿತ್ತು. ಕಣ್ಣಿನ ತುಂಬ ನೀರು.

ಮುಖ್ಯೋಪಾಧ್ಯಾಯರು ಯೋಚನೆಯಲ್ಲಿ ಮುಳುಗಿದರು. ಅನಂತರ ತಪನ್ ಮುಖನೋಡಿ ಪ್ರೀತಿಯಿಂದ ಅವನ ಬೆನ್ನನ್ನು ತಟ್ಟಿದರು. ಒಂದು ಮಾತನ್ನೂ ಆಡದೆ ಮನೆಯ ಕಡೆ ಹೊರಟರು. ಅವರ ಕಣ್ಣುಗಳು ಒದ್ದೆಯಾಗಿದ್ದವು.

ಜ್ಞಾನಪೀಠ ಪ್ರೌಢಶಾಲೆಯಲ್ಲಿ ಬಹುಮಾನ ವಿತರಣೆಯ ದಿನ. ಗೌಹಾತಿಯ ಒಂದು ಕಾಲೇಜಿನ ಪ್ರಿನ್ಸಿಪಾಲರನ್ನು ಸಮಾರಂಭದ ಅಧ್ಯಕ್ಷತೆ ವಹಿಸಲು ಆಹ್ವಾನಿಸಿದ್ದರು. ಈ ಬಾರಿ ಪ್ರಿನ್ಸಿಪಾಲ್ ರಾಬಿನ್ ಬರುವಾ ಅವರು ಅತ್ಯುತ್ತಮ ಸ್ವಭಾವದ ಹುಡುಗನಿಗೆ ವಿಶೇಷ ಬಹುಮಾನವೊಂದನ್ನು ಕೊಡಲು ನಿರ್ಧರಿಸಿದ್ದರು. ಮಹಾತ್ಮಾ ಗಾಂಧಿ, ಜವಾರಹಲಾಲ್ ನೆಹರು ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿ ಈ ಮೂವರ ಜೀವನಚರಿತ್ರೆಗಳನ್ನು ಬಹುಮಾನವಾಗಿ ಕೊಡಲಿದ್ದರು.

ತರಗತಿಗಳ ಕೊಠಡಿಗಳಲ್ಲಿ ವಿದ್ಯಾರ್ಥಿಗಳು ವಿಶೇಷ ಬಹುಮಾನದ ವಿಷಯವನ್ನು ಚರ್ಚಿಸುತ್ತಿದ್ದರು. ಐದನೆಯ ತರಗತಿಯ ನಿತಿನ್ ಅಪಹಾಸ್ಯದಿಂದ ನಕ್ಕು, ತನ್ನ ಪಕ್ಕದಲ್ಲಿದ್ದ ಭಾಬೇಶನಿಗೆ “ನಿನಗೆ ಗೊತ್ತ ಭಾಬೇಶ್, ಅತ್ಯುತ್ತಮ ಸ್ವಭಾವದ ಬಹುಮಾನವನ್ನು ತಪನ್‌ಗೆ ಕೊಡ್ತಾರೆ” ಎಂದು ಗಟ್ಟಿಯಾಗಿ ಹೇಳಿದ. ಹುಡುಗರು ಬಿದ್ದುಬಿದ್ದು ನಕ್ಕರು. ಅಪಮಾನದಿಂದ, ನಾಚಿಕೆಯಿಂದ ತಪನ್‌ನ ಮುಖ ಕೆಂಪಾಯಿತು. ‘ಭೂಮಿ ನನ್ನನ್ನು ನುಂಗಿಬಿಡಬಾರದೆ’ ಎಂದು ಅವನಿಗೆ ಅನ್ನಿಸಿತು.

ಸಮಾರಂಭ ಪ್ರಾರಂಭವಾಯಿತು. ಅಧ್ಯಕ್ಷರನ್ನು ಸ್ವಾಗತಿಸಿದ ನಂತರ ಕಾರ್ಯದರ್ಶಿಯು ವರದಿಯನ್ನು ಓದಿದರು. ಇದರ ನಂತರ ಹುಡುಗರಿಂದ ಹಾಡುಗಳು, ನೃತ್ಯಗಳು ಮತ್ತು ಕಂಠಪಾಠಗಳ ಕಾರ್ಯಕ್ರಮ. ಆಮೇಲೆ ಅಧ್ಯಕ್ಷರು ಭಾಷಣ ಮಾಡಿದರು. ಇನ್ನು ಕೆಲವರು ಶುಭಕೋರಿದರು. ಅನಂತರ ಬಹುಮಾನ ವಿತರಣೆ. ಬಹುಮಾನ ಬಂದವರ ಮುಖ ಸಂತೋಷ, ಹೆಮ್ಮೆಗಳಿಂದ ಬೆಳಗಿತು. ಆಮೇಲೆ ವಿಶೇಷ ಬಹುಮಾನ ಘೋಷಣೆ. ಎಲ್ಲರೂ ಕುತೂಹಲದಿಂದ ಕಾಯುತ್ತಿದ್ದರು. ಸಭೆಯನ್ನು ಉದ್ದೇಶಿಸಿ ಮುಖ್ಯೋಪಾಧ್ಯಾಯರು, “ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಮಹಿಳೆಯರೇ, ಮಹನೀಯರೇ, ಅತ್ಯುತ್ತಮ ಸ್ವಭಾವದ ಬಹುಮಾನವನ್ನು ಐದನೇ ತರಗತಿಯ ಶ್ರೀಮಾನ್ ತಪನ್ ಹಜಾರಿಕಾಗೆ ಕೊಡಲು ನಿರ್ಧರಿಸಿದೆ” ಎಂದು ಘೋಷಿಸಿದರು.

ತಪನ್‌ನ ಕಣ್ಣುಗಳು ಆನಂದಬಾಷ್ಪಗಳಿಂದ ಹೊಳೆಯುತ್ತಿದ್ದವು.

**– ಅನಂತ ದೇವ್ ಶರ್ಮಾ**

**ಕನ್ನಡಕ್ಕೆ : ಎಲ್.ಎಸ್. ಶೇಷಗಿರಿ ರಾವ್**

## ಎಲ್.ಎಸ್. ಶೇಷಗಿರಿ ರಾವ್



ಕನ್ನಡದ ಸುಪ್ರಸಿದ್ಧ ಕಥೆಗಾರ, ವಿಮರ್ಶಕ, ಅನುವಾದಕ ಹಾಗೂ ಸಂಪಾದಕ ಎಲ್. ಎಸ್. ಶೇಷಗಿರಿರಾವ್ ಇವರು ಫೆಬ್ರವರಿ ೧೬, ೧೯೨೫ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಲಕ್ಷ್ಮೇಶ್ವರ ಸ್ವಾಮಿರಾವ್ ಶೇಷಗಿರಿರಾವ್. ಇವರ ತಂದೆ ಸ್ವಾಮಿರಾವ್, ತಾಯಿ ಕಮಲಾಬಾಯಿ.

ಶೇಷಗಿರಿರಾವ್ ಅವರು ವಿವಿಧ ಸರಕಾರಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ೧೯೬೮ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಕರಾದರು. ೧೯೮೫ರಲ್ಲಿ ನಿವೃತ್ತರಾದರು.

ಇವರು ಕನ್ನಡ ಹಾಗೂ ಆಂಗ್ಲಭಾಷೆಯಲ್ಲಿ ಅಸಾಮಾನ್ಯ ಪಾಂಡಿತ್ಯ ಸಂಪಾದಿಸಿದವರು. ವಿಮರ್ಶೆ ಮತ್ತು ಗ್ರಂಥಸಂಪಾದನ ರಂಗದಲ್ಲಿ ಇವರದು ಅತಿ ದೊಡ್ಡ ಹೆಸರು. ಇದು ಜೀವನ, ಜನರ ಜಾತ್ರೆಯಲ್ಲಿ, ಮುಟ್ಟದ ಗುರಿ ಮತ್ತು ಇತರ ಕತೆಗಳು, ಮುಯ್ಯಿ ಇವು ಇವರ ಪ್ರಮುಖ ಕಥಾಸಂಕಲನಗಳು. 'ಸೌಜನ್ಯ' ಎಂಬುದು ಇವರ ಅಭಿನಂದನ ಗ್ರಂಥ. ಇವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದವು ಲಭಿಸಿವೆ.

ವಿಶೇಷ ಬಹುಮಾನ ಕಥೆಯನ್ನು ಇವರ ಹದಿಮೂರು ಶ್ರೇಷ್ಠಕಥೆಗಳು ಎಂಬ ಅನುವಾದಿತ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

### ಪ್ರಶ್ನೆ ತಯಾರಿಸಿರಿ

ವಿಶೇಷ ಬಹುಮಾನ ಕಥೆಯ ಪ್ರಧಾನ ಆಶಯಗಳು ಉತ್ತರವಾಗಿ ಬರುವಂತೆ ಸಾಧ್ಯವಿರುವಷ್ಟು ಪ್ರಶ್ನೆಗಳನ್ನು ತಯಾರಿಸಿರಿ.

### ಅಭಿಪ್ರಾಯ ಬರೆಯಿರಿ.

ತಪನ್ ತನ್ನ ಸಹಪಾಠಿಗಳ ಜೊತೆ ಸೇರಿ ಪದುಮಣಿ ಹಳ್ಳಿಯ ವ್ಯಾಪಾರಿಯಾಗಿದ್ದ ಹರೇನ್‌ನ ಅಂಗಡಿಗೆ ಕಲ್ಲು ಎಸೆದುದು ಸರಿಯೇ? ನಿಮ್ಮ ಅಭಿಪ್ರಾಯವನ್ನು ಬರೆದು ಮಂಡಿಸಿರಿ.

### ವಿವರಿಸಿರಿ

ತಪನ್ ತುಂಟ ಗೂಳಿಯನ್ನು ಪಳಗಿಸಿದ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ ಬರೆಯಿರಿ.

### ಗುರುತಿಸಿ ಬರೆಯಿರಿ.

ಜ್ಞಾನಪೀಠ ಶಾಲೆಯ ಅತ್ಯುತ್ತಮ ಸ್ವಭಾವದ ವಿದ್ಯಾರ್ಥಿಗೆ ನೀಡುವ ವಿಶೇಷ ಬಹುಮಾನಕ್ಕಾಗಿ ಮುಖ್ಯೋಪಾಧ್ಯಾಯರು ತಪನ್‌ನನ್ನುಆಯ್ಕೆ ಮಾಡಿದರು. ಅದಕ್ಕೆ ಕಾರಣವಾಗಿರಬಹುದಾದ ಅಂಶಗಳನ್ನು ಪಾಠಭಾಗದಿಂದ ಗುರುತಿಸಿ ಬರೆಯಿರಿ

### ಕಾರ್ಯಕ್ರಮದ ಪಟ್ಟಿ ತಯಾರಿಸಿರಿ.

ನೀವು ಜ್ಞಾನಪೀಠ ಶಾಲೆಯ ವಿದ್ಯಾರ್ಥಿ ಎಂದು ಭಾವಿಸಿರಿ. ಆ ಶಾಲೆಯಲ್ಲಿ ಆಯೋಜಿಸಲಾಗಿರುವ ವಿಶೇಷ ಬಹುಮಾನ ವಿತರಣಾ ಸಮಾರಂಭದ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿರಿ.

### ಸಂಭಾಷಣೆ ಬರೆಯಿರಿ.

ವಿಶೇಷ ಬಹುಮಾನ ಕಥೆಯಲ್ಲಿ ನಿಮಗೆ ಮೆಚ್ಚುಗೆಯಾದ ಭಾಗವನ್ನು ಆಯ್ದುಕೊಂಡು ಸೂಕ್ತವಾದ ಸಂಭಾಷಣೆಯನ್ನು ಬರೆಯಿರಿ.

### ಪ್ರಬಂಧ ಬರೆಯಿರಿ.

ಓರ್ವ ಉತ್ತಮ ವಿದ್ಯಾರ್ಥಿಯಾಗುವುದಕ್ಕಾಗಿ ನೀವು ನಿಮ್ಮಲ್ಲಿ ಬೆಳೆಸಿಕೊಳ್ಳಬೇಕಾದ ಗುಣಗಳನ್ನು ಪರಿಗಣಿಸಿಕೊಂಡು ಆದರ್ಶ ವಿದ್ಯಾರ್ಥಿ ಎಂಬ ವಿಷಯದ ಕುರಿತು ಪ್ರಬಂಧವನ್ನು ಬರೆಯಿರಿ.

KT-257-9/Kannada-8 AT

3

# ಅಕ್ಕ



ಬಾಳಪಯಣದಲಂದು
ಬಗೆಗಾಣದೆಯೆ ಬಿದ್ದು
ಗರಿಮುರಿದ ಮರಿಹಕ್ಕಿ
ಹಾರಲಾರದೆ ನರಳುತ್ತಿರುವಂತೆ ನಾನು
ಕಂಬನಿಯ ಸುರಿಸುತಿರೆ
ಕರುಣೆ ಮೈವೆತ್ತವೊಲು
ಬಳಿಬಂದು 'ಬಾ ತಮ್ಮ'
ಎಂದೆನ್ನ ಮೈದಡವಿ ಎಬ್ಬಿಸಿದೆ ನೀನು!
'ಅಕ್ಕ'ನೆಂದಪ್ಪಿಕೊಳೆ
ಒಲವಿನಲಿ ಮುಂಡಾಡಿ
ಮನೆಕಡೆಗೆ ಕರೆದೊಯ್ದು
ಅಕ್ಕರೆಯ ಸಕ್ಕರೆಯನುಣಿಸಿದವಳು
ತಬ್ಬಲಿಗೆ ತಾಯಿಯೊಲು
ಸೆರಗಿನಾಸರೆಯಿತ್ತು
ದಿನದಿನವು ಮೈ-ಮನಕೆ
ಒಲವೆರೆದು ಮುದದಲ್ಲಿ ಬೆಳೆಸಿದವಳು
ಹಿಂದುಳಿದ ದಾರಿಯನೆ
ಮತ್ತೊಮ್ಮೆ ತುಳಿಯದೊಲು
ಎಚ್ಚರಿಕೆಯೀಯುತ್ತ
ಬೆದರಿಸುವ ಧಾಟಿಯಲಿ ಶಿಕ್ಷಕಿಯೊಲು
ಹೊಸಬಾಳಿನಾ ಕಡೆಗೆ
ಕೈ ಮಾಡಿ ತೋರಿಸುತ
ಮುನ್ನಡೆಯ ಪಾಠವನು ಕಲಿಸಿದವಳು !

ಮಮತೆ-ಸಮತೆ ಸವಿಯ
ಕಥೆ-ಹಾಡುಗಳ ಹೇಳಿ
ಮನಸಿನಭಿರುಚಿಗೊಂದು
ಹೊಸರುಚಿಯ ತೋರಿಸಿದೆಯಕ್ಕ ನೀನು!
ಜಾತಿ-ಮತ ಭೇದವನು
ಮರೆತು, ನೆರೆಮನುಜರನು
ಪ್ರೀತಿಸುವುದೇ ಧರ್ಮ
ವೆಂಬ ನೀತಿಯನಂದೆ ಕಲಿತೆ ನಾನು!

ನಿನ್ನಡಿಯ ಶಾಲೆಯಲಿ
ನೂರೊಂದು ಪಾಠಗಳ
ಕಲಿತಿಂತು ಬೆಳೆದಿರುವೆ
ಅಡಿಗಡಿಗೆ ನಿನ್ನನ್ನೂ ನೆನೆಯುತಿರುವೆ!
ನಸುದಾರಿ ತಪ್ಪಿದರೆ
ಬಿಸಿಯುಸಿರು ಬಿಡುತಲಿರೆ
ನೀ ಬಂದು 'ಬಾ ತಮ್ಮ'
ಎಂದು ಕರೆದಂತೆನಿಸಿ ಕಣ್ದೆರೆಯುವೆ!

**- ಬಿ.ಎ. ಸನದಿ.**

## ಬಿ.ಎ. ಸನದಿ.

ಬಿ.ಎ. ಸನದಿಯವರ ಪೂರ್ಣ ಹೆಸರು ಬಾಬಾಸಾಹೇಬ ಅಹಮದ ಸನದಿ. ಇವರ ತಂದೆ ಅಹಮದ ಸಾಹೇಬ. ತಾಯಿ ಆಯಿಶಾಬಿ. ಕ್ರಿ.ಶ. ೧೯೨೨ರಲ್ಲಿ ಬೆಳಗಾವಿ ಜಿಲ್ಲೆಯ ಸಿಂದೊಳ್ಳಿಯಲ್ಲಿ ಇವರ ಜನನ. ಮುಂಬೈ ಆಕಾಶವಾಣಿಯಲ್ಲಿ ವಿಸ್ತರಣಾಧಿಕಾರಿಯಾಗಿ ಕಾರ್ಯನಿರ್ವಹಿಸಿ ನಿವೃತ್ತರಾದರು. ತಾಜಮಹಲು, ಪ್ರತಿಬಿಂಬ, ಧ್ರುವಬಿಂದು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಸೂರ್ಯಪಾನ ಇವರ ಸಮಗ್ರ ಕಾವ್ಯ ಸಂಪುಟ. ಇವರು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ರಾಷ್ಟ್ರೀಯ ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದಾರೆ. ೬೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಇವರಿಗೆ ಹೊರನಾಡ ಶ್ರೇಷ್ಠ ಕನ್ನಡಿಗ ಪ್ರಶಸ್ತಿಯೂ ದೊರೆತಿದೆ.



## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಅಕ್ಕ ಬಳಿಬಂದು 'ಬಾ ತಮ್ಮ' ಎಂದು ಮೈದಡವಿ ಎಬ್ಬಿಸಿದ ಸಂದರ್ಭ ಯಾವುದು?
2. ಅಕ್ಕ ತಮ್ಮನಿಗೆ ಕಲಿಸಿದ ನೀತಿಪಾಠಗಳೇನು?
3. ಕವಿ ಅಕ್ಕನಲ್ಲಿ ಕಂಡುಕೊಂಡ ಹಿರಿಮೆಗಳೇನು?

## ಸಾಲುಗಳನ್ನು ಗುರುತಿಸಿರಿ.

ಕೆಳಗೆ ಕೊಡಲಾದ ಆಶಯಗಳಿಗೆ ಸಮಾನವಾದ ಆಶಯವಿರುವ ಸಾಲುಗಳನ್ನು 'ಅಕ್ಕ' ಕವನದಿಂದ ಆಯ್ದು ಬರೆಯಿರಿ.

- ನಾನು ರೆಕ್ಕೆ ಮುರಿದು ಹಾರಲಾಗದೆ ಪುಟ್ಟ ಹಕ್ಕಿಯಂತೆ ಒದ್ದಾಡುತ್ತಿದ್ದೆ.
- 'ಅಕ್ಕ' ಎಂದು ತಬ್ಬಿಕೊಂಡಾಗ ಪ್ರೀತಿಯಿಂದ ಮುದ್ದಿಸಿ ಮನೆಗೆ ಕರೆದುಕೊಂಡು ಹೋಗಿ ಪ್ರೀತಿಯೆಂಬ ಸಕ್ಕರೆಯನ್ನು ನೀಡಿದವಳು.
- ಅನಾಥನಾದ ನನ್ನನ್ನು ತಾಯಿಯಂತೆ ರಕ್ಷಣೆಯನ್ನಿತ್ತು ಬೆಳೆಸಿದವಳು.
- ಒಮ್ಮೆ ಮಾಡಿದ ತಪ್ಪನ್ನು ಮತ್ತೊಮ್ಮೆ ಮಾಡದಂತೆ ಎಚ್ಚರಿಸಿ ಬಾಳಿಗೆ ಹೊಸದಾರಿಯನ್ನು ತೋರಿಸಿದವಳು.
- ನಿನ್ನ ಮಡಿಲೆಂಬ ಶಾಲೆಯಲ್ಲಿ ಹಲವು ಪಾಠಗಳನ್ನು ಕಲಿತು ಬೆಳೆದಿದ್ದೇನೆ.
- ಸ್ವತಃ ನೀನೇ ಬಂದು 'ಬಾ ತಮ್ಮ' ಎಂದು ಕರೆಯುವಂತೆ ಭಾಸವಾಗಿ ಕಣ್ಣನ್ನು ತೆರೆಯುತ್ತೇನೆ.

## ಕವನ ರಚಿಸಿರಿ.

ನಿಮ್ಮ ಕುಟುಂಬದಲ್ಲಿ ನಿಮಗೆ ಅತ್ಯಂತ ಪ್ರೀತಪಾತ್ರರು ಯಾರು? ನೀವು ಅವರನ್ನು ಮೆಚ್ಚಿಕೊಳ್ಳಲು ಹಲವು ಕಾರಣಗಳಿರಬಹುದು. ಆ ಕಾರಣಗಳನ್ನು ಗಮನಿಸಿಕೊಂಡು ನಿಮ್ಮ ಪ್ರೀತಿಪಾತ್ರರ ಹಿರಿಮೆಯನ್ನು ಸಾರುವ ಕವನವೊಂದನ್ನು ರಚಿಸಿರಿ. ಕವನಕ್ಕೆ ಸೂಕ್ತವಾದ ಶೀರ್ಷಿಕೆಯನ್ನು ಕೊಡಿರಿ.

# ಅರ್ಥಕೋಶ

**ಅ**

ಅಂಚು - ಬದಿ
ಅಂಬು - ಬಾಣ, ನೀರು
ಅಂದಾಜು - ಊಹೆ, ಊಹಿಸಿದ ಪರಿಣಾಮ, ಒಂದು ವಸ್ತುವಿಗಿರುವ ಬೆಲೆ
ಅಂತಃಕರಣ - ದಯೆ, ಕನಿಕರ, ಮನಸ್ಸು
ಅಕೃತ್ರಿಮ - ಕೃತಕವಲ್ಲದ, ನೈಜ
ಅಕ್ಕರೆ - ಪ್ರೀತಿ
ಅಖಿಳ - ಸಮಸ್ತ, ಎಲ್ಲ
ಅಚಲ - ಬೆಟ್ಟ, ಚಲಿಸದ, ಶಾಶ್ವತವಾದ
ಅರ್ಚನೆ - ಪೂಜೆ
ಅಚ್ಚರಿ - ಆಶ್ಚರ್ಯ, ಬೆರಗು
ಅಡಕ - ಒಳಸೇರಿದ
ಅಡವಿ - ಕಾಡು, ವನ
ಅಡಿದಾವರೆ - ಕಮಲದಂತಹ ಪಾದ
ಅಣಿಯಾಗು - ತಯಾರಾಗು
ಅದಮ್ಯ - ತಡೆದುಕೊಳ್ಳಲು ಸಾಧ್ಯವಾಗದ
ಅನಲ - ಬೆಂಕಿ
ಅನ್ವರ್ಥಕ - ಅರ್ಥಕ್ಕೆ ಅನುಸಾರವಾದ
ಅನಾರೋಗ್ಯ - ಆರೋಗ್ಯಇಲ್ಲದಿರುವುದು
ಅನಿವಾರ್ಯ - ಅವಶ್ಯಕ, ತಪ್ಪಿಸಲಾಗದ
ಅನುಜ - ತಮ್ಮ
ಅನುಮತಿ - ಒಪ್ಪಿಗೆ, ಸಮ್ಮತಿ
ಅನುಮಾನ - ಸಂಶಯ, ಊಹೆ
ಅನ್ವೇಷಣೆ - ಹುಡುಕುವಿಕೆ, ಶೋಧ
ಅಪ್ರತಿಮ - ಎಣೆಯಿಲ್ಲದ
ಅಬ್ಬರ - ಆರ್ಭಟ, ಪರಾಕ್ರಮ, ಅಧಿಕಾರದ ದರ್ಪ
ಅಮಾನವೀಯ - ಮನವೀಯತೆ ಇಲ್ಲದ, ಮಾನವನಿಗೆ ಸಲ್ಲದ
ಅಮಾಯಕ - ಮುಗ್ಧ ಸ್ವಭಾವದ, ನಿಷ್ಕಳಂಕ
ಅಮೃತೋಪಮ - ಅಮೃತಕ್ಕೆ, ಸಮಾನವಾದ
ಅರಸು - ಹುಡುಕು, ರಾಜ
ಅರಳು - ಹೂ, ಬಿರಿಯು
ಅರಿಕೆ - ಬಿನ್ನಹ
ಅರಿವು - ತಿಳುವಳಿಕೆ
ಅವಧರಿಸು - ಗಮನವಿಟ್ಟು ಕೇಳು
ಅವನಿ - ಭೂಮಿ
ಅವಿವೇಕಿ - ವಿವೇಕವಿಲ್ಲದವನು, ಮೂರ್ಖ
ಅಶ್ವಾರೂಢ - ಕುದುರೆಯೇರಿದ
ಅಸದೃಶ - ಅಸಮಾನ, ಅದ್ವಿತೀಯ
ಅಳಲು - ದುಃಖ, ಬೇಸರ

**ಆ**

ಆಜಾನುಬಾಹು - ನೀಳವಾದ ತೋಳುಗಳುಳ್ಳವನು, ಜಾನುವನ್ನು (ಮಂಡಿ)

| | |
|---|---|
| | ಮುಟ್ಟುವಷ್ಟು ಉದ್ದವಾದ ತೋಳುಗಳುಳ್ಳವನು |
| ಆತಂಕ | - ಭೀತಿ, ಕಳವಳ |
| ಆತ್ಮೀಕ | - ಒಳಗೊಂಡ |
| ಆತ್ಮಗೌರವ | - ಸ್ವಾಭಿಮಾನ |
| ಆತ್ಮವಿಶ್ವಾಸ | - ತನ್ನಲ್ಲಿ ತನಗೆ ಇರುವ ನಂಬಿಕೆ |
| ಆರ್ದ್ರ | - ಒದ್ದೆಯಾದ |
| ಆಪದ್ಧನ | - ಆಪತ್ತಿನ ಕಾಲಕ್ಕೆ ಒದಗಲೆಂದು ಕೂಡಿಟ್ಟ ಹಣ |
| ಆಭಾರಿ | - ಕೃತಜ್ಞ, ಋಣಿ |
| ಆಮಿಷ | - ಲಂಚ, ಪ್ರಲೋಭನೆ |
| ಆರಂಬಗಾರರು | - ರೈತರು, ಕೃಷಿಕರು |
| ಆರದೆ | - ಬರಿದಾಗದೆ, ಒಣಗದೆ |
| ಆಶಾಭಂಗ | - ನಿರೀಕ್ಷೆ ಭಗ್ನವಾಗುವುದು, ನಿರೀಕ್ಷೆ ನೆರವೇರದಿರುವುದು |
| ಆಸುರೀಪ್ರವೃತ್ತಿ | - ರಾಕ್ಷಸ ಸ್ವಭಾವ |
| ಆಹ್ಲಾದಕರ | - ಸಂತೋಷವನ್ನು ಉಂಟುಮಾಡುವ |

**ಇ**

| | |
|---|---|
| ಇಂಗಾಲ | - ಇದ್ದಲು, ಕರಿಹೊಗೆ |
| ಇಂಚರ | - ಇಂಪಾದಸ್ವರ |
| ಇಕ್ಕೆಲ | - ಎರಡು ಬದಿ |
| ಇಳೆವೆಣ್ಣು | - ಭೂಮಿಯೆಂಬ ಹೆಣ್ಣು |

**ಉ**

| | |
|---|---|
| ಉಕ್ಕು | - ಹೊಮ್ಮಿಬರು, ಉತ್ಸಾಹ |
| ಉತ್ತರೀಯ | - ಮೈಗೆ ಹೊದೆಯುವ ಬಟ್ಟೆ |
| ಉದ್ಗಾರ | - (ಭಾವಾವೇಶದಿಂದ ಕೂಡಿದ) ಮಾತು |
| ಉಪಕೃತಿ | - ನೆರವು |
| ಉಬ್ಬು | - ಸಂತೋಷಿಸು, ಹಿಗ್ಗು, ಗರ್ವಿಸು |
| ಉಭಯಸಂಕಟ | - ಇಕ್ಕಟ್ಟಿನ ಸ್ಥಿತಿ, ಪ್ರಾಣಸಂಕಟ |
| ಉಮ್ಮಳಿಸು | - ದುಃಖಿಸು |
| ಉಲ್ಲಾಸ | - ಸಂತೋಷ, ಉತ್ಸಾಹ |
| ಉಷೆ | - ಪ್ರಾತಃಕಾಲ |

**ಊ**

| | |
|---|---|
| ಊಹಾಪೋಹ | - ಕೇವಲ ಊಹೆ, ತರ್ಕ ಮತ್ತು ವಿತರ್ಕ |
| ಊಹೆ | - ಅನುಮಾನಿಸು, ಅಂದಾಜು |

**ಋ**

| | |
|---|---|
| ಋಣಮುಕ್ತಗೊಳಿಸು | - ಸಾಲದಿಂದ ಬಿಡುಗಡೆಗೊಳಿಸು |

**ಎ**

| | |
|---|---|
| ಎಡತಾಕು | - ಅಲೆದಾಡಿಸು, ಪದೇ ಪದೇ ಬರುವಂತೆ ಮಾಡು |
| ಎಡೆಮಾಡು | - ಅವಕಾಶಕೊಡು |
| ಎಣ್ಣು | - ಯೋಚಿಸು |
| ಎರಕ | - ಪ್ರೀತಿ, ಕಾಯಿಸಿದ ಲೋಹಾದಿಗಳ ದ್ರವವನ್ನು ಅಚ್ಚಿಗೆ ಎರೆಯುವಿಕೆ, ಹಾಗೆ ಎರೆದ ಅಚ್ಚು |
| ಎರಗು | - ನಮಸ್ಕರಿಸು, ತಲೆಬಾಗು |

**ಏ**

| | |
|---|---|
| ಏತರಿಂದ | - ಯಾವ ಕಾರಣದಿಂದ |

ಏದು - ಮೇಲುಸಿರುಬಿಡು

**ಐ**

ಐದಲು - ಬರಲು

**ಒ**

ಒತ್ತಟ್ಟು - ಬದಿ

ಒಲವು - ಪ್ರೀತಿ

ಒಳಸಂಚು - ಪಿತೂರಿ

**ಔ**

ಔಡಲ - ಹರಳುಗಿಡ, ಏರಗಿಡ

**ಕ**

ಕಂಟಕ - ಮುಳ್ಳು, ತೊಂದರೆ

ಕಂಟಿ - ಪೊದೆ, ಮುಳ್ಳಿನಿಂದ ಕೂಡಿದ

ಕಗ್ಗ - ಹರಟೆ, ಒಣಮಾತು

ಕಟುವಾಗಿ - ನಿಷ್ಠುರವಾಗಿ

ಕಡಿಯುವ - ಕೊರೆಯುವ

ಕಣಜ - ಧಾನ್ಯಗಳನ್ನು ಸಂಗ್ರಹಿಸಿಡುವ ಪ್ರತ್ಯೇಕವಾದ ಸ್ಥಳ

ಕಣ್ಣುಹಾಯಿಸು - ದೃಷ್ಟಿಹರಿಸು

ಕದಪು - ಕೆನ್ನೆ

ಕಮಟುವಾಸನೆ - ಸೀದು ಉಂಟಾಗುವ ಕೆಟ್ಟವಾಸನೆ

ಕರಗತ - ಕೈವಶ ಮಾಡಿಕೊಳ್ಳು, ಜೀರ್ಣಿಸಿಕೊಳ್ಳು

ಕರಗಸ - ಮರಕೊಯ್ಯುವ ಉಪಕರಣ, ಗರಗಸ

ಕರುಣಾಮಯಿ - ಕನಿಕರಉಳ್ಳವರು

ಕವಲು - ಅಡ್ಡರಸ್ತೆ, ಟಿಸಿಲು

ಕಷ್ಟಸಹಿಷ್ಣುತೆ - ಕಷ್ಟಗಳನ್ನು ಸಹಿಸುವ ಗುಣ

ಕಳಂಕ - ಕುಂದು, ದೋಷ

ಕಳಪೆ - ಕಡಿಮೆ ಗುಣಮಟ್ಟದ

ಕಾತರ - ಕಳವಳ, ಉತ್ಸುಕತೆ, ಉದ್ವಿಗ್ನತೆ

ಕಾತರಿಸು - ಹಂಬಲಿಸು, ಕಳವಳಿಸು

ಕಾದ - ಬಿಸಿಯಾದ

ಕಾಣದೋದವನೆ - ಕಾಣದೆ ಹೋದವನೆ

ಕಾಡಾಡಿ - ಕಾಡಿನಲ್ಲಿ ಅಲೆದಾಡುವವನು

ಕಾರ್ಮಿಕ - ಕೆಲಸಮಾಡುವವ

ಕಾಲಂದುಗೆ - ಕಾಲ್ಗೆಜ್ಜೆ, ನೂಪುರ

ಕಾಲ - ಸಮಯ, ವೇಳೆ, ಮರಣ, ಯಮ

ಕಾಯಕ - ಕಸುಬು, ದುಡಿಮೆ, ಕೆಲಸ

ಕಾರ್ಯಗತಗೊಳಿಸು- ಕಾರ್ಯರೂಪಕ್ಕೆ ತರು

ಕಾರು - ವಾಂತಿಮಾಡು, ಜೋರಾಗಿ ಸರಿಸು

ಕಾಳಜಿ - ಜಾಗರೂಕತೆ, ಜೋಪಾನ, ಗೊಡವೆ

ಕುಡಿಯೊಡೆಯು - ಚಿಗುರು

ಕುಬ್ಜ - ಕುಳ್ಳ, ಗಿಡ್ಡ

ಕುರುಳು - ಕೂದಲು

ಕುಲಜ - ಉತ್ತಮ ಕುಲದಲ್ಲಿ ಜನಿಸಿದವನು

ಕುಲಲಲಾಮ - ಕುಲಶ್ರೇಷ್ಠ

ಕುಳಿರ್ಗಾಳಿ - ತಂಪಾದಗಾಳಿ

ಕೂಟ - ಸಮೂಹ, ಗುಂಪು

ಕೂಳು - ಅನ್ನ, ಆಹಾರ

| | | |
|---|---|---|
| ಕೃತ | - | ಮಾಡಿದ |
| ಕೆಲ | - | ಬದಿ |
| ಕೈಗೂಡು | - | ಈಡೇರು, ನೆರವೇರು |
| ಕೈಮರ | - | ದಾರಿಸೂಚಕ |
| ಕೈರಾತ | - | ಕಿರಾತ, ಬೇಡ |
| ಕೊರಡು | - | ಮರದತುಂಡು |
| ಕೊಲ್ಗಂಬ | - | ಶಿಲುಬೆ |
| ಕ್ರಮಿಸು | - | ನಡೆ, ದಾಟು |
| ಕ್ಷುದ್ಬಾಧೆ | - | ಹಸಿವಿನ ಸಂಕಟ |

## ಖ

| | | |
|---|---|---|
| ಖಬರು | - | ಸುದ್ದಿ |
| ಖಾತ್ರಿ | - | ಖಚಿತ, ನಂಬಿಕೆ, ಭರವಸೆ |

## ಗ

| | | |
|---|---|---|
| ಗಣಿ | - | ಮೂಲಸ್ಥಳ, ಆಶ್ರಯಸ್ಥಾನ |
| ಗದ್ದುಗೆ | - | ಸಿಂಹಾಸನ |
| ಗಲಿಬಿಲಿ | - | ಗೊಂದಲ |
| ಗಿಜಿಗಿಡು | - | ಗದ್ದಲದಿಂದ ಕೂಡಿರು |
| ಗುಮಾಸ್ತೆ | - | ಲೆಕ್ಕಿಗ, ಕಾರಕೂನ |
| ಗುರುಗುಡು | - | ಸಿಟ್ಟಿನಿಂದ ಮಾತಾಡು, ಅಸಮಾಧಾನವನ್ನು ವ್ಯಕ್ತಪಡಿಸು |
| ಗುರುಪದ | - | ಗುರುವಿನ ಪಾದ |
| ಗೂಬೆಕೂರಿಸು | - | ಅಪವಾದ ಹೊರಿಸು |
| ಗೋಪ್ಪು | - | ಕುಲ, ವಂಶ |
| ಗ್ರಹಚಾರ | - | ದುರದೃಷ್ಟ, ದುರವಸ್ಥೆ, ಗ್ರಹಗಳ ಚಲನೆ |
| ಗ್ರಾಹ | - | ತುತ್ತು, ಆಹಾರ |

## ಚ

| | | |
|---|---|---|
| ಚಂದಾ | - | ವಂತಿಗೆ |
| ಚಚ್ಚು | - | ಹೊಡೆಯು, ಬಡಿಯು |
| ಚಾಕಚಕ್ಯತೆ | - | ಜಾಣ್ಮೆ, ಚಾತುರ್ಯ |
| ಚಾವಡಿ | - | ಹಳ್ಳಿಯಲ್ಲಿ ಪಂಚಾಯತಿ ಸೇರುವ ಸ್ಥಳ, ಮನೆಯ ಮುಂದಿನ ಜಗಲಿ |
| ಚಿಂತಾವಿಷ್ಟರಾಗು | - | ವ್ಯಥೆಗೊಳಗಾಗು, ಚಿಂತೆಗೊಳಗಾಗು |
| ಚಿತ್ತೈಸು | - | ಆಗಮಿಸು, ಕೇಳು, ದಯಮಾಡು |
| ಚಿರಋಣಿ | - | ಉಪಕಾರವನ್ನು ಸದಾ ಸ್ಮರಿಸಿಕೊಳ್ಳುವ ವ್ಯಕ್ತಿ, ಕೃತಜ್ಞ |
| ಚೋದ್ಯ | - | ಆಶ್ಚರ್ಯ, ಸೋಜಿಗದ ವಿಷಯ |
| ಚೌರೇದಾರ | - | ಕಾವಲುಗಾರ |

## ಛ

| | | |
|---|---|---|
| ಛತ್ತಿ | - | ಮಾಳಿಗೆ ಮೇಲ್ಭಾಗ |
| ಛಾವಣಿ | - | ಮಾಡು, ಮಾಳಿಗೆ |
| ಛೇದ | - | ತುಂಡು, ಭಾಗ, ಸೀಳು |

## ಜ

| | | |
|---|---|---|
| ಜಂಜಡ | - | ತೊಂದರೆ, ವ್ಯಥೆ, ಕ್ಲೇಶ |
| ಜಖಂ | - | ಗಾಯ |
| ಜಡಿಮಳೆ | - | ಎಡೆಬಿಡದೆ ಸುರಿಯುವ ಮಳೆ |
| ಜಡಿಯು | - | ಗದರಿಸು, ಹೊಡೆ |
| ಜಮಾಯಿಸು | - | ಒಟ್ಟುಸೇರು |
| ಜಲಾಹರಣ | - | ನೀರಿನಲ್ಲಿ ಅಡಗಿ ಕುಳಿತವರನ್ನು ಗುರುತಿಸುವುದು |

ಜಾಡು - ಇಂದ್ರಜಾಲ, ಕಣ್ಣುಕಟ್ಟು ವಿದ್ಯೆ
ಜಾಲಾಂದ್ರ - ಕಿಟಿಕಿ
ಜಾವ - ದಿವಸದ $\frac{1}{8}$ ಕಾಲದಷ್ಟು ಸಮಯ, ಮೂರು ಗಂಟೆಗಳ ಕಾಲಾವಧಿ
ಜಿಗುಪ್ಸೆ - ಬೇಸರ
ಜೀವಿತ - ಜೀವನ
ಜುಲ್ಮಾನೆ - ದಂಡ
ಜೊಂಡು - ನೀರಿನಲ್ಲಿ ಬೆಳೆಯುವ ಒಂದ ಬಗೆಯ ಹುಲ್ಲು
ಜೋಡಿದಾರು - ಜಮೀನು ಅಥವಾ ಗ್ರಾಮಗಳನ್ನು ಇನಾಮಾಗಿ ಪಡೆದಿರುವವರು
ಜ್ವಲಂತ - ಉರಿಯುತ್ತಿರುವ, ಸಮರ್ಪಕವಾದ

## ಝ

ಝುಂಕಿಸು - ಬೆದರಿಸು
ಝೂಡಿಸು - ಹೊಡೆ, ಕೊಡಹು

## ಟ

ಟೀಕೆ - ಗುಣದೋಷ ವಿಮರ್ಶೆ, ವಿವೇಚನೆ
ಟೊಂಗೆ - ಗೆಲ್ಲು

## ಠ

ಠಿಕಾಣಿ - ವಾಸ್ತವ್ಯ

## ತ

ತಕ್ಕೈಸು - ನೇವರಿಸು
ತಂಗಳು - ಹಿಂದಿನ ದಿನದ ಅನ್ನ
ತದ್ವಿರುದ್ಧ - ವಿರುದ್ಧವಾದ, ಅದಕ್ಕೆ ಪ್ರತಿಯಾದ
ತನ್ಮಯನಾಗು - ಮೈಮರೆಯು, ಮಗ್ನನಾಗು
ತರುಲತೆ - ಗಿಡಬಳ್ಳಿ
ತಲ್ಲೀನ - ಮಗ್ನನಾದ, ಒಂದೇ ವಿಷಯದಲ್ಲಿ ಮುಳುಗಿರುವ
ತವ - ನಿನ್ನ
ತವಕ - ಅತಿಯಾದ ಬಯಕೆ, ಆತುರ, ಅವಸರ
ತಹನಾಮೆ - ಜಮೀನಿನ ದಾಖಲೆ ಪತ್ರ, ಕರಾರುಪತ್ರ
ತಳಿರು - ಚಿಗುರು
ತಾಣ - ಸ್ಥಳ, ಸ್ಥಾನ
ತಾಪತ್ರಯ - ತೊಂದರೆ, ಆದಿದೈವಿಕ, ಆದಿಭೌತಿಕ, ಆಧ್ಯಾತ್ಮಿಕ ಎಂಬ ಮೂರು ಬಗೆಯ ಕಷ್ಟಗಳು
ತಿಣ್ಣ - ತೀಕ್ಷ್ಣ
ತಿಳಿಗೇಡಿ - ಅವಿವೇಕಿ, ಬುದ್ಧಿಹೀನ
ತುಂತುರು - ಹನಿ
ತುಪ್ಪಟ - ಮೊಲ, ಕುರಿ ಮೊದಲಾದ ಪ್ರಾಣಿಗಳ ಮೈಮೇಲಿನ ಮೃದುವಾದ ರೋಮ
ತೃಣ - ಹುಲ್ಲು
ತೊಟ್ಟಿ - ನೀರು ತುಂಬಿಸುವ ಅಗಲವಾದ ಪಾತ್ರೆ
ತೋಪು - ತೋಟ, ಮರಗಳ ಸಮೂಹ

## ದ

ದಂಡಿಸು - ಶಿಕ್ಷಿಸು

| | | |
|---|---|---|
| | | ವಸ್ತ್ರ, ಪಟ್ಟೆ |
| ದಡೂತಿ | - | ದೊಡ್ಡಗಾತ್ರದ, ಗಟ್ಟಿಮುಟ್ಟಾದ |
| ದರಬಾರು | - | ಸರಕಾರದ ಸಭಾಸ್ಥಾನ |
| ದಹನ | - | ಉರಿಸುವಿಕೆ |
| ದಾಖಲೆ | - | ಪ್ರಮಾಣ ಬದ್ಧವಾದ ಕಾಗದ ಪತ್ರ |
| ದಾರ | - | ನೂಲು |
| ದಾಳಿ | - | ಮುತ್ತಿಗೆ |
| ದಿಗ್ಭ್ರಮೆ | - | ಗಾಬರಿ, ಕಳವಳ |
| ದಿಟ್ಟಿ | - | ದೃಷ್ಟಿ |
| ದಿವಾಖಾನೆ | - | ಮೊಗಸಾಲೆ |
| ದುಂದುವೆಚ್ಚ | - | ಅನಗತ್ಯವಾಗಿ ಮಾಡುವ ಅತಿಯಾದ ಖರ್ಚು |
| ದುಂಬಾಲುಬೀಳು | - | ಅಂಗಲಾಚಿ ಬೇಡಿಕೊಳ್ಳು |
| ದುರಂತ | - | ಕೆಟ್ಟ ಅಂತ್ಯ |
| ದೇಣಿಗೆ | - | ದಾನ, ಕೊಡುಗೆ, ವಂತಿಗೆ |
| ಧನುರ್ವಿದ್ಯೆ | - | ಬಿಲ್ಲುವಿದ್ಯೆ |
| ಧರಾತಳ | - | ಭೂಮಿ |
| ಧಾತು | - | ಲೋಹ, ಮೂಲವಸ್ತು |
| ಧೃತಿಗೆಡು | - | ಧೈರ್ಯಕಳೆದುಕೊಳ್ಳು |
| ಧ್ವಂಸ | - | ನಾಶ |

**ನ**

| | | |
|---|---|---|
| ನಂದನವನ | - | ಇಂದ್ರನ ಉದ್ಯಾನ |
| ನಡುಪ್ರಾಯ | - | ಯೌವನ |
| ನಶ್ವರ | - | ಕ್ಷಣಿಕವಾದುದು, ನಾಶವಾಗತಕ್ಕದ್ದು |
| ನಸು | - | ಸ್ವಲ್ಪ, ಕೊಂಚವೇ |
| ನಾಟಿ | - | ಭತ್ತ ಮುಂತಾದ ಸಸಿಗಳನ್ನು ಕಿತ್ತು ಬೇರೆ ಕಡೆಯಲ್ಲಿ ನೆಡುವ ಕೆಲಸ |
| ನಿಗದಿತ | - | ನಿಶ್ಚೈಸಿದ |
| ನಿಗಾ | - | ಎಚ್ಚರ, ಗಮನ |
| ನಿಗೂಢ | - | ಗುಟ್ಟು, ರಹಸ್ಯ |
| ನಿರ್ಜನ | - | ಜನರಹಿತವಾದ |
| ನಿಡುಮೂಗು | - | ಉದ್ದವಾದ ಮೂಗು |
| ನಿತ್ರಾಣ | - | ದುರ್ಬಲತೆ, ಶಕ್ತಿಹೀನತೆ |
| ನಿರ್ನಾಮ | - | ನಾಶ, ಹೆಸರಿಲ್ಲದಂತೆ ಮಾಡುವುದು |
| ನಿಯತ್ತು | - | ಸದಾಚಾರ, ಪ್ರಾಮಾಣಿಕತೆ |
| ನಿರತರಾಗು | - | ತೊಡಗು, ತಲ್ಲೀನರಾಗು |
| ನಿರಾಕಾರ | - | ಆಕಾರವಿಲ್ಲದ |
| ನಿರೀಕ್ಷೆ | - | ಬಯಸುವಿಕೆ |
| ನಿರ್ಲಕ್ಷ್ಯ | - | ಅನಾದರ, ಅಸಡ್ಡೆ, ತಿರಸ್ಕಾರ |
| ನಿರ್ಲಿಪ್ತ | - | ಅನಾಸಕ್ತ, ಯಾವ ಸಂಬಂಧಗಳನ್ನೂ ಹಚ್ಚಿಕೊಳ್ಳದ |
| ನಿಲುವಂಗಿ | - | ಮೊಣಕಾಲಿನ ವರೆಗೆ ಇರುವ ಉದ್ದವಾದ ಅಂಗಿ |
| ನಿಲುವು | - | ಅಭಿಮತ, ಅಭಿಪ್ರಾಯ |
| ನಿರ್ವಹಣೆ | - | ಕೆಲಸವನ್ನು ನೆರವೇರಿಸುವಿಕೆ, ನಿಭಾಯಿಸುವಿಕೆ |
| ನಿಷ್ಪಾಪ | - | ಪಾಪ ಮಾಡದ |
| ನೀರವ | - | ಮೌನ, ನಿಶ್ಯಬ್ಧ |
| ನ್ಯೂನತೆ | - | ಕೊರತೆ |
| ನೃಪ | - | ರಾಜ |
| ನಂಜಿಕೊಳ್ಳು | - | ಜೊತೆಯಲ್ಲಿ ಸೇರಿಸಿಕೊಳ್ಳು |
| ನೆನಹು | - | ನೆನಪು |

ನೆಲಗಟ್ಟು - ಅಡಿಪಾಯ, ಪಂಚಾಂಗ
ನೇಸರ - ಸೂರ್ಯ
ನೇಹ - ಸ್ನೇಹ, ಪ್ರೀತಿ

## ಪ

ಪಂಕ್ತಿ - ಸಾಲು, ಶ್ರೇಣಿ
ಪಟ್ಟೆ - ಬಟ್ಟೆ, ರೇಶ್ಮೆಯ ಬಟ್ಟೆ, ಚರ್ಮ, ಲೋಹ ಮುಂತಾದವುಗಳ ಪಟ್ಟಿ
ಪಠನ - ವಾಚನ, ಓದುವಿಕೆ
ಪಣ - ಸ್ಪರ್ಧೆ, ಜೂಜಿಗೆ ಒಡ್ಡಿದ ವಸ್ತು
ಪರ್ಣ - ಎಲೆ
ಪರಿಕರ - ಸಲಕರಣೆ, ಸಾಮಾಗ್ರಿ
ಪರಿಗ್ರಹ - ಸ್ವೀಕಾರ
ಪರಿಚಾರಕ - ಸೇವಕ
ಪವನ - ಗಾಳಿ
ಪವಾಡ - ಆಶ್ಚರ್ಯಕರವಾದ ಘಟನೆ, ಅತಿಮಾನುಷ ಕಾರ್ಯ, ಸೋಜಿಗ
ಪಳೆ - ಎಸಳು
ಪಾತಕ - ಕೆಟ್ಟ ಕೆಲಸ, ಪಾಪ
ಪಾತಿ - ಮರಗಿಡಗಳ ಬುಡದಲ್ಲಿ ನೀರು ನಿಲ್ಲಲು ಮಾಡಿರುವ ಕಟ್ಟೆ
ಪಾರ್ಥ - ಅರ್ಜುನ
ಪಾದತ್ರಾಣ - ಪಾದರಕ್ಷೆ, ಚಪ್ಪಲಿ
ಪಾಲಿಸು - ಕಾಪಾಡು, ಸಲಹು
ಪಾಳಿ - ಸಾಲು, ಕ್ರಮ, ಸರದಿ
ಪಿತೃಪಕ್ಷ - ಭಾದ್ರಪದ ತಿಂಗಳಿನ ಕೃಷ್ಣಪಕ್ಷ, ದಿವಂಗತರಾದ ಹಿರಿಯರಿಗೆ ತರ್ಪಣಕೊಡುವ ಪಕ್ಷ
ಪೀಡಿಸು - ಉಪದ್ರವಿಸು, ಕಾಟಕೊಡು
ಪುಪ್ಪುಸ - ಶ್ವಾಸಕೋಶ
ಪುಸಿ - ಸುಳ್ಳು
ಪೂರೈಕೆ - ಸರಬರಾಜು
ಪೊಡೆಮಡು - ನಮಸ್ಕರಿಸು
ಪ್ರಜ್ಞಾಪೂರ್ವ - ತಿಳುವಳಿಕೆಯಿಂದ ಕೂಡಿದ
ಪ್ರತಿಮೆ - ವಿಗ್ರಹ
ಪ್ರವಾದಿ - ದೇವದೂತ
ಪ್ರವೀಣ - ನಿಷ್ಣಾತ, ನಿಪುಣ
ಪ್ರಸರಣ - ಹರಡುವಿಕೆ
ಪ್ರಸ್ತಾಪಿಸು - ವಿಚಾರವನ್ನು ಹೇಳು
ಪ್ರಸ್ಥಾನ - ನಡಿಗೆ, ದಾಳಿ, ದಂಡಯಾತ್ರೆ

## ಬ

ಬಗೆಕಾಣದೆ - ದಿಕ್ಕುಕಾಣದಂತಾಗು
ಬತ್ತು - ಆರು, ಒಣಗು
ಬದ್ಧತೆ - ದೃಢತೆ, ಯಾವುದಾದರೂ ಒಂದಕ್ಕೆ ಅಂಟಿಕೊಂಡಿರುವುದು
ಬರಡು - ಒಣಗಿದ, ನಿಷ್ಪ್ರಯೋಜಕ
ಬಳುವಳಿ - ಉಡುಗೊರೆ, ಕೊಡುಗೆ
ಬಳ್ಳಿಮಾಡ - ಲತಾಮಂಟಪ
ಬಾಹ್ಯಾಡಂಬರ - ತೋರಿಕೆಯ ಹೆಮ್ಮೆ
ಬಿಜಯ - ಬರುವಿಕೆ, ಆಗಮನ
ಬಿನ್ನಹ - ಅರಿಕೆ, ವಿಜ್ಞಾಪನೆ
ಬಿಮ್ಮು - ಗರ್ವ, ಅಹಂಕಾರ

ಬಿರುಕು - ಸೀಳು, ವೈಮನಸ್ಸು
ಬುಡ್ಡಿ - ದೀಪ
ಬೆಂಗಾಡು - ಸುಟ್ಟು ಹೋದ ಕಾಡು
ಬೆಡಗು - ಸೊಬಗು, ಅಂದ
ಬ್ರಹ್ಮಾಂಡ - ವಿಶ್ವ, ಜಗತ್ತು
ಭಗ್ನ - ನಾಶಗೊಂಡ, ತುಂಡಾದ
ಭರ - ವೇಗ, ರಭಸ
ಭವದೀಯ - ತಮ್ಮ, ತಮಗೆ ಸಂಬಂಧಿಸಿದ
ಭಷಣ - ಬೊಗಳುವಿಕೆ, ಶಬ್ಧ
ಭುವನ - ಜಗತ್ತು, ಪ್ರಪಂಚ
ಭೋರ್ಗರೆ - ಅಬ್ಬರಿಸು

## ಮ

ಮಂಜೂರಾತಿ - ಒಪ್ಪಿಗೆ, ಅನುಮತಿ
ಮಂಪರು - ಅರೆನಿದ್ದೆಯ ಸ್ಥಿತಿ
ಮಡಿಕೋಲು - ಮಡಿಬಟ್ಟೆಗಳನ್ನು ಹರವಲು ಅಥವಾ ತೆಗೆಯಲು ಉಪಯೋಗಿಸುವ ಉದ್ದವಾದ ಕೋಲು
ಮಡಿಸೀರೆ - ಒಗೆದು ಸುಭ್ರಮಾಡಿದ ಸೀರೆ, ಮೈಲಿಗೆಯಾಗದ ಸೀರೆ
ಮಣೇಗಾರ - ದೇವಾಲಯ, ಮಠ, ಅರಮನೆ ಮುಂತಾದವುಗಳಲ್ಲಿಯ ಮೇಲ್ವಿಚಾರಕ
ಮರ್ತ್ಯಾಶನ - ಮನುಷ್ಯರಂತೆ ಆಹಾರವನ್ನು ಸೇವಿಸುವುದು
ಮತಿಭ್ರಮಣೆ - ತಿಳುವಳಿಕೆ ಕೊಡುವುದು, ಬುದ್ಧಿಭ್ರಮಣೆ
ಮನವರಿಕೆ - ಮನಸ್ಸಿಗೆ ಅರಿವಾಗುವುದು
ಮನಸ್ತಾಪ - ವೈಮನಸ್ಸು, ದ್ವೇಷ, ಹಗೆತನ
ಮರುಕ - ಅಳಲು, ಬೇಗುದಿ, ಕರುಣೆ
ಮರುಗು - ದುಃಖಿಸು
ಮರಳುಗಾಡು - ಮರುಭೂಮಿ
ಮರುಕಳಿಸು - ಪುನಃಕಾಣಿಸಿಕೊಳ್ಳು
ಮಹದಾಸೆ - ಮಹತ್ತರವಾದ ಆಸೆ
ಮಹತ್ವಾಕಾಂಕ್ಷೆ - ಹಿರಿಯ ಆಸೆ, ಹೆಬ್ಬಯಕೆ
ಮಹಿಮ - ಹಿರಿಮೆಯುಳ್ಳವನು, ಮಹಾತ್ಮ
ಮಾನ್ಯತೆ - ಗೌರವ, ಘನತೆ
ಮಾಮೂಲು - ರೂಢಿ, ಅಭ್ಯಾಸ, ರೀತಿ
ಮಾರಕ - ಹಾನಿಕಾರಕ
ಮುಂಜಾವು - ಮುಂಜಾನೆ
ಮುಂಡಾಡು - ಮುದ್ದಿಸು, ಕೊಂಡಾಟಮಾಡು
ಮುಂಬಾಳು - ಮುಂದಿನ ಜೀವನ
ಮುಗ್ಗರಿಸು - ಎಡವು
ಮುಜುಗರ - ಸಂಕೋಚ, ದಾಕ್ಷಿಣ್ಯ
ಮುದ - ಸಂತೋಷ
ಮುಸಲಧಾರೆ - ಒನಕೆಯಷ್ಟು ದಪ್ಪವಾಗಿ ಸುರಿಯುವ ಮಳೆ
ಮುಸುರೆಪಾತ್ರೆ - ತೊಳೆಯಲಿಕ್ಕಿರುವ ಪಾತ್ರೆ
ಮುಳುವಾಗು - ತೊಂದರೆಮಾಡು
ಮೂಕ - ಮಾತನಾಡಲು ಬಾರದ
ಮೃಡಭಕ್ತ - ಶಿವಭಕ್ತ
ಮೂತಿ - ಮುಖ
ಮೂದಲಿಸು - ಹಂಗಿಸು, ಹೀಯಾಳಿಸು

ಮೆರುಗು - ಹೊಳಪು, ಕಾಂತಿ

ಮೇದಿನಿ - ಭೂಮಿ

ಮೈಮರೆಯು - ದೇಹದ ಅರಿವಿಲ್ಲದಾಗು

ಮೊರ - ರಾಗಿ, ಗೋಧಿ, ಅಕ್ಕಿ ಮುಂತಾದ ಕಾಳುಗಳನ್ನು ಹಸನು ಮಾಡಲು ಬಳಸುವ ಸಾಧನ

ಮೊರೆಹೋಗು - ಆಶ್ರಯಬೇಡು, ಶರಣಾಗತನಾಗು

ಮೊಳ - ಉದ್ದವನ್ನು ಅಳೆಯುವ ಒಂದು ಮಾನ

ಮೊಳಗು - ಧ್ವನಿಮಾಡು, ಆರ್ಭಟಿಸು

## ಯ

ಯಕೃತ್ತು - ಪಿತ್ತಜನಕಾಂಗ

ಯಶೋಗಾಥೆ - ಯಶಸ್ಸಿನ ಚರಿತ್ರೆ

## ರ

ರಖಂವ್ಯಾಪಾರ - ಒಟ್ಟುವ್ಯಾಪಾರ

ರಸಿಕರು - ಹಾಸ್ಯ ಮನೋಭಾವದವರು

ರಾಗ - ಪ್ರೀತಿ

ರಿಂಗಣ - ಸುತ್ತು ಬರುತ್ತಾ ಕುಣಿಯು

## ಲ

ಲಕ್ಷ್ಯ - ಗುರಿ

ಲಲನೆ - ಹೆಂಗಸು, ಸ್ತ್ರೀ

ಲಾವಾರಸ - ಜ್ವಾಲಾಮುಖಿಯು ಸ್ಫೋಟಿಸುವಾಗ ಪ್ರವಹಿಸುವ ಅಗ್ನಿರಸ

ಲೇವಡಿಮಾಡು - ಅಣಕಿಸು, ಅಪಹಾಸ್ಯಮಾಡು

ಲೋಹಚುಂಬಕ - ಸೂಜಿಗಲ್ಲು, ಅಯಸ್ಕಾಂತ

## ವ

ವಂಶಜರು - ವಂಶದಲ್ಲಿ ಜನಿಸಿದವರು

ವರುಣಾಸ್ತ್ರ - ಒಂದು ರೀತಿಯ ಬಾಣ (ವರುಣನನ್ನು ಆವಾಹಿಸಿ ಪ್ರಯೋಗಿಸುವ ಅಸ್ತ್ರ)

ವಸುಂಧರೆ - ಭೂಮಿ, ಇಳೆ

ವಸುಧೆ - ಭೂಮಿ

ವಯೋವೃದ್ಧ - ವಯಸ್ಸಿನಲ್ಲಿ ಹಿರಿಯನಾದವನು

ವಿಚಲಿತ - ಹೊಯ್ದಾಡುವ, ಅಲ್ಲಾಡುವ

ವಿಕಸನ - ಅಭಿವೃದ್ಧಿ, ಅರಳುವಿಕೆ

ವಿಕಿರಣ - ಸುತ್ತಲೂ ಹರಡುವಿಕೆ

ವಿಚಲಿತ - ಗಲಿಬಿಲಿಗೊಂಡ

ವಿಧವೆ - ಗಂಡನನ್ನು ಕಳೆದುಕೊಂಡವಳು

ವಿಫಲ - ಫಲವಿಲ್ಲದ, ಪ್ರಯೋಜನವಿಲ್ಲದ

ವಿಮರ್ಶೆ - ಗುಣದೋಷಗಳ ಪರಿಶೀಲನೆ

ವಿಮುಖ - ನಿರಾಸಕ್ತಿ

ವೇದಘೋಷ - ವೇದಗಳನ್ನು ಗಟ್ಟಿಯಾಗಿ ಹೇಳುವಿಕೆ

ವೈಪರೀತ್ಯ - ವಿರೋಧ, ಹೊಂದಾಣಿಕೆ ಇಲ್ಲದಿರುವುದು

ವ್ಯಾಘ್ರನಖ - ಹುಲಿಯ ಉಗುರು

ವ್ಯಾಜ್ಯ - ಕಲಹ, ದಾವೆ

ವ್ಯಾಮೋಹ - ಅತಿಯಾದ ಮೋಹ

## ಶ

ಶಬ್ದವೇಧಿ - ಕೇವಲ ಶಬ್ದವನ್ನು ಅನುಸರಿಸಿ ಬಾಣವನ್ನು ಪ್ರಯೋಗಿಸುವಿಕೆ

ಶರಸಂಧಾನ - ಬಾಣ ಪ್ರಯೋಗ, ಬಿಲ್ಲಿಗೆ ಬಾಣ ಹೂಡುವಿಕೆ, ಬಾಣದ ಗುರಿಯಿಡುವಿಕೆ.

ಶ್ವಾನ - ನಾಯಿ

ಶ್ರೀ - ಸಂಪತ್ತು, ಲಕ್ಷ್ಮಿ

## ಸ

ಸಂಕೀರ್ಣ - ತೊಡಕಿನ, ಇಕ್ಕಟ್ಟಿನ

ಸಂಘಟಿತ - ಒಟ್ಟುಗೂಡಿದ, ವ್ಯವಸ್ಥಿತ

ಸಂಚಕಾರ - ತೊಂದರೆ

ಸಂದು - ಮೂಲೆ, ಎಡೆ

ಸಚ್ಚಾರಿತ್ರ್ಯ - ಒಳ್ಳೆಯ ನಡತೆ, ಸದಾಚಾರ

ಸತ್ವ - ಶಕ್ತಿ, ಬಲ, ಸಾರ

ಸಮಜಾಯಿಸು - ಸಮಾಧಾನಪಡಿಸು, ಸಾಂತ್ವನಗೊಳಿಸು

ಸಮಾರಾಧನೆ - ಸಮೃದ್ಧವಾದ ಊಟ, ಅನ್ನಸಂತರ್ಪಣೆ

ಸರಬರಾಜು - ಒದಗಿಸುವಿಕೆ, ಪೂರೈಸುವಿಕೆ

ಸಲಿಲ - ನೀರು

ಸಲೀಸು - ಸುಲಭ, ಸರಾಗ

ಸಾಕಾರಗೊಳಿಸು - ರೂಪುಗೊಳಿಸು, ಆಕಾರಕೊಡು

ಸಾತ್ವಿಕ - ಒಳ್ಳೆಯ, ಸಾಧುಸ್ವಭಾವದ

ಸಾಬೀತುಪಡಿಸು - ಸಾಧಿಸಿತೋರಿಸು

ಸಾರಸ - ತಾವರೆ

ಸಾಷ್ಟಾಂಗ - ಅಷ್ಟ ಅಂಗಗಳನ್ನು ಸೇರಿಸಿ ನಮಸ್ಕರಿಸುವುದು

ಸಿಪಾಯಿ - ಸೈನಿಕ, ಯೋಧ

ಸಿರಿ - ಸಂಪತ್ತು

ಸೀಳು - ತುಂಡುಮಾಡು, ಎರಡು ಪಾಲಾಗುವಂತೆ ಹರಿ.

ಸುಂಕ - ತೆರಿಗೆ

ಸುಪರ್ದು - ವಶ, ಅಧೀನ

ಸುಳಿ - ಚಕ್ರಾಕಾರವಾಗಿ ತಿರುಗು, ಬೀಸು

ಸೂತ್ರ - ದಾರ, ವಿಧಿ, ನಿಯಮ

ಸೂರು - ಮಾಡು

ಸೂರೆ - ಕೊಳ್ಳೆ, ಲೂಟಿ

ಸೆರಗು - ಸೀರೆಯಲ್ಲಿ ಹೊದೆಯುವ ಭಾಗ

ಸೇಡು - ವೈರ, ಹಗೆ, ಪ್ರತೀಕಾರ

ಸೊಗ - ಸುಖ

ಸೊಡರು - ದೀಪ

ಸೋಕು - ಸ್ಪರ್ಶಿಸು

ಸೋನೆವಳೆ - ಜಿನುಗುಮಳೆ

ಸೋಸಿ - ಅಟ್ಟಿಸಿ, ಓಡಿಸಿ, ಬೀಸಿ

ಸ್ಥಳಾಂತರಿಸು - ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗಾಯಿಸು.

ಸ್ವಾಭಿಮಾನ - ಆತ್ಮಗೌರವ

ಸ್ಥಿರ - ಅಚಲವಾದ

ಸ್ಫೋಟನ - ಸಿಡಿಯುವಿಕೆ

## ಹ

ಹಂದರ - ಚಪ್ಪರ, ಮಂಟಪ

ಹದನ - ವಾರ್ತೆ, ಸುದ್ದಿ, ರೀತಿ, ಸ್ಥಿತಿ

ಹನಿಸೋನೆ - ತುಂತುರುಮಳೆ

ಹಮ್ಮು - ಗರ್ವ, ಅಹಂಕಾರ

ಹರಿಕಾರ - ಮುಂದಾಳು

ಹಲುಬು - ರೋದಿಸು, ದುಃಖಿಸು

ಹಲ್ಕಾ - ಅಸಭ್ಯ, ಕೆಟ್ಟ

ಹವ - ಗಾಳಿ

ಹಳವಿಸು - ಗೋಳಾಡು, ಪ್ರಲಾಪಿಸು

ಹಾವಳಿ - ಕಾಟ, ಉಪಪದ್ರ, ಕೀಟಲೆ

ಹುಸಿ - ಸುಳ್ಳು

ಹುಡುಗ ಪಾಳ್ಯ - ಹುಡುಗರ ಗುಂಪು

ಹೃದಯವಿದ್ರಾವಕ - ಮನಸ್ಸನ್ನು ಕರಗಿಸುವ, ಎದೆ ಕಲಕುವ

ಹೆಳವ - ಅಂಗಹೀನ, ಕುಂಟ

ಹೊಂದೇರು - ಚಿನ್ನದ ರಥ

ಹೊತ್ತಾರೆ - ಬೆಳಗ್ಗಿನ ಜಾವ, ಪ್ರಾತಃಕಾಲ

ಹೊದ್ದಿಗೆ - ಸಾಮರಸ್ಯ, ಸ್ನೇಹ, ಸಂಬಂಧ, ಸಹವಾಸ

ಹೊರವು - ಸೊಂಪು, ಹುಲುಸು

ಹರ್ಷಭಾಷ್ಪ - ಸಂತೋಷದ ಕಣ್ಣೀರು